ಕನ್ನಡ ವಿಶ್ವವಿದ್ಯಾಲಯ

"ಜೋಮನದುಡಿ ಮತ್ತು ಕುಸುಮಬಾಲೆ : ಒಂದು ತೌಲನಿಕ ಅಧ್ಯಯನ"

೨೦೦೭-೦೮ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಮಾರ್ಗದರ್ಶಕರು

ಡಾ. ಎನ್.ಮಹೇಶ್ವರಿ

ಉಪನ್ಯಾಸಕರು

ಜೆ.ಎಸ್.ಎಸ್. ಸ್ನಾತಕೋತ್ತರ ಕೇಂದ್ರ

ಚಾಮರಾಜನಗರ

ಸಂಶೋಧಕ

ಸಿ.ಎಸ್.ಮಂಜುನಾಥ

ಎಂ.ಫಿಲ್ ವಿದ್ಯಾರ್ಥಿ

೨೦೦೭-೦೮

ಕನ್ನಡ ವಿಶ್ವವಿದ್ಯಾಲಯ, ಹಂಪಿ

402

ಕನ್ನಡ ವಿಶ್ವವಿದ್ಯಾಲಯ

"ಜೋಮನದುಡಿ ಮತ್ತು ಕುಸುಮಬಾಲೆ : ಒಂದು ತೌಲನಿಕ ಅಧ್ಯಯನ"

೨೦೦೭-೦೮ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಮಾರ್ಗದರ್ಶಕರು

ಡಾ. ಎನ್.ಮಹೇಶ್ವರಿ
ಉಪನ್ಯಾಸಕರು
ಜೆ.ಎಸ್.ಎಸ್. ಸ್ನಾತಕೋತ್ತರ ಕೇಂದ್ರ
ಚಾಮರಾಜನಗರ

ಸಂಶೋಧಕ

ಸಿ.ಎಸ್.ಮಂಜುನಾಥ
ಎಂ.ಫಿಲ್ ವಿದ್ಯಾರ್ಥಿ

೨೦೦೭-೦೮
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ದೃಢೀಕರಣಪತ್ರ

ಡ೨೦೦೭–೦೮ನೇ ಸಾಲಿನಲ್ಲಿ ಕ್ರಮ ಸಂಖ್ಯೆ KVTM - ೦೦೧೫೭ರ ವಿದ್ಯಾರ್ಥಿಯಾದ ಸಿ.ಎಸ್.ಮಂಜುನಾಥ, ಎಂ.ಫಿಲ್ ಪರೀಕ್ಷೆಯ ಅಂಗವಾಗಿ **''ಚೋಮನದುಡಿ ಮತ್ತು ಕುಸುಮಬಾಲೆ : ಒಂದು ತೌಲನಿಕ ಅಧ್ಯಯನ''** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿದ್ದಾರೆ. ಇದನ್ನು ಇವರು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ = ಚಿತ್ರದುರ್ಗ

ದಿನಾಂಕ : ೨೧-೦೮-೨೦೦೮

(ಡಾ. ಎನ್.ಮಹೇಶ್ವರಿ)

ಉಪನ್ಯಾಸಕರು

ಜೆ.ಎಸ್.ಎಸ್. ಸ್ನಾತಕೋತ್ತರ ಕೇಂದ್ರ

ಚಾಮರಾಜನಗರ

[illegible]

[illegible]

[illegible]

[illegible]

[illegible]

ಪ್ರಮಾಣಪತ್ರ

"ಚೋಮನದುಡಿ ಮತ್ತು ಕುಸುಮಬಾಲೆ : ಒಂದು ತೌಲನಿಕ ಅಧ್ಯಯನ" ಎಂಬ ವಿಷಯದ ಸಂಶೋಧನ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ KVTM - ೦೦೧೫೭ರ ವಿದ್ಯಾರ್ಥಿಯಾದ ನಾನು ೨೦೦೭-೦೮ನೇ ಸಾಲಿನ ಪರೀಕ್ಷೆಗಾಗಿ ಡಾ. ಎನ್.ಮಹೇಶ್ವರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ನಿಬಂಧವನ್ನು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು

ದಿನಾಂಕ: ೩೧-೦೮-೨೦೦೮

(ಸಿ.ಎಸ್.ಮಂಜುನಾಥ)

ಸಿ. ಎಸ್. ಮಂಜುನಾಥ

೨೦೦೭-೦೮ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

[illegible]

[illegible]

[illegible]

[illegible]

ಪರಿವಿಡಿ

ಪುಟ ಸಂಖ್ಯೆ

ಚೋಮನದುಡಿ ಮತ್ತು ಕುಸುಮಬಾಲೆ : ಒಂದು ತೌಲನಿಕ ಅಧ್ಯಯನ

*****

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಒಂದು ಸಾವಿರಕ್ಕಿಂತಲೂ ಹೆಚ್ಚಿನ ಸುದೀರ್ಘ ಇತಿಹಾಸವುಳ್ಳ ಕನ್ನಡ ಸಾಹಿತ್ಯ ಪರಂಪರೆಯನ್ನು ಅವಲೋಕಿಸಿದಾಗ ಅದು ಕಾಲದಿಂದ ಕಾಲಕ್ಕೆ ಬದಲಾಗುತ್ತ, ಹೊಸತನವನ್ನು ಮೈಗೂಡಿಸಿಕೊಳ್ಳುತ್ತ ಬಂದಿರುವುದನ್ನು ಕಾಣುತ್ತೇವೆ. ಈ ಬದಲಾವಣೆ ಮತ್ತು ಬೆಳವಣಿಗೆ ವಸ್ತುವಿನ ಆಯ್ಕೆ, ಅಭಿವ್ಯಕ್ತಿ ಪ್ರಕ್ರಿಯೆ, ಆಶಯ, ಧೋರಣೆ, ಮೌಲ್ಯಶೋಧ, ಭಾಷಾಪ್ರಯೋಗ ಮುಂತಾದ ನೆಲೆಗಳಲ್ಲಿ ಆಗಿರುವುದು ಮುಖ್ಯ ಸಂಗತಿಯಾಗಿದೆ. ಒಂದು ಕಾಲಘಟ್ಟದಲ್ಲಿ ರಚಿತವಾದ ಸಾಹಿತ್ಯ ತನ್ನ ಭಿನ್ನ ಉದ್ದೇಶ, ಮನೋಧರ್ಮ ಅಭಿವ್ಯಕ್ತಿಯಿಂದಾಗಿ ಹೊಸದೊಂದು ಪಂಥವಾಗಿಯೇ ಪ್ರಾರಂಭಗೊಳ್ಳುತ್ತದೆ. ತನ್ನ ಹಿಂದಿನ ಸಾಹಿತ್ಯ ಚಳವಳಿಗೆ ಪ್ರತಿಕ್ರಿಯೆ ರೂಪದಲ್ಲಿ ಜನ್ಮ ತಳೆದ ಈ ಹೊಸ ಪಂಥ ಕಾಲಾನಂತರದಲ್ಲಿ ಇನ್ನೊಂದು ಹೊಸ ಸಾಹಿತ್ಯ ಪಂಥ ಇಲ್ಲವೆ ಚಳವಳಿಗೆ ಪ್ರೇರಕವಾಗಿ ನಿಂತುಕೊಳ್ಳುತ್ತದೆ. ಈ ರೀತಿ ಸಾಹಿತ್ಯದ ಒಂದು ಹೊಸ ಚಳವಳಿ ಇಲ್ಲವೆ ಸಂಪ್ರದಾಯ ನಿಧಾನವಾಗಿ ತನ್ನ ಸೃಜನಶೀಲ ಸತ್ವವನ್ನು ಕಳೆದುಕೊಳ್ಳುತ್ತ ಮತ್ತೊಂದು ಹೊಸ ಪಂಥದ ಸೃಷ್ಟಿಗೆ ಆಸ್ಪದ ನೀಡುವುದು ಸಾಹಿತ್ಯ ಸೃಷ್ಟಿಯ ಮಹಾಯಾನದಲ್ಲಿ ಸಹಜ ಪ್ರಕ್ರಿಯೆಯಾಗಿದೆ. ಹೀಗೆ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಮುಂತಾದ ಬೇರೆಬೇರೆ ಕಾಲಘಟ್ಟಗಳಲ್ಲಿ ವಿಭಿನ್ನ ಸಾಹಿತ್ಯ ಪಂಥ, ಸಂಪ್ರದಾಯಗಳು ಹುಟ್ಟಿಕೊಂಡಿರುವುದು ಸಾಹಿತ್ಯದ ಬದಲಾವಣೆ ಮತ್ತು ಬೆಳವಣಿಗೆಯ ನಿಟ್ಟಿನಲ್ಲಿ ಮಹತ್ವದ ಸಂಗತಿಯಾಗಿದೆ.

ಕಾರಂತರದು ವಿಶಿಷ್ಟ ಪ್ರತಿಭೆ. ಅವರು ಒಟ್ಟಾರೆಯಾಗಿ ಕನ್ನಡ ಸಂದರ್ಭದಲ್ಲಿ ದೈತ್ಯ ಪ್ರತಿಭೆ ಹೇಗೋ ಹಾಗೆ ಕಾದಂಬರಿಯಲ್ಲೂ ಅವರ ಸೃಜನಶೀಲ ಪ್ರತಿಭೆ ಪೂರ್ಣಾರ್ಥದಲ್ಲಿ ತನ್ನನ್ನು ತಾನು ತೆತ್ತುಕೊಂಡಿರುವುದು ಕಾದಂಬರಿ ಪ್ರಕಾರದಲ್ಲೇ. ಒಂದು ಸಂಸ್ಕೃತಿಯು ಒಬ್ಬ ವ್ಯಕ್ತಿಯ ಸೃಜನಶೀಲ ಪ್ರತಿಭೆಯನ್ನು ಅದರೆಲ್ಲ ಸಾಧ್ಯತೆಯಲ್ಲಿ ದುಡಿಸಿಕೊಳ್ಳುವುದು ಕಥಾಮಾಧ್ಯಮದಲ್ಲಿ ಮಾತ್ರ. ಅವರು ಬದುಕಿನ ದೈನಂದಿನ ಘಟಕಗಳನ್ನು ಅದು ಸರಳವಾಗಿಯೇ ಇರಲಿ, ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ವ್ಯಕ್ತಿಯು ಬಾಳುವ ವೈಯಕ್ತಿಕ ಕೌಟುಂಬಿಕ, ಸಾಮಾಜಿಕ ಸ್ತರಗಳನ್ನು ಅದರ ಅನನ್ಯತೆಯಲ್ಲೇ ಹಿಡಿದುಕೊಳ್ಳುತ್ತಾರೆ. ಇದರಿಂದಾಗಿ ಕಾರಂತರನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಪ್ರತ್ಯೇಕವಾದ ಹಿನ್ನೆಲೆಯನ್ನು ಒದಗಿಸಿಕೊಳ್ಳುವುದಕ್ಕೆ ಶ್ರಮಪಡಬೇಕಾಗಿಲ್ಲ. ಆ ಕೆಲಸವನ್ನು ಅವರ ಕೃತಿಗಳೇ ಮಾಡುತ್ತವೆ. ಬದುಕಿನಲ್ಲಿ ಪರಂಪರೆಯು ಒಡ್ಡುವ ನಿಕಷಗಳನ್ನು ಒಳಿತು–ಕೆಡುಕಿನ ಸಾಂಸ್ಕೃತಿಕ ಘಟಕಗಳಲ್ಲಿ ವಿಭಜಿಸಿಕೊಂಡು ಒಳಿತಿನ ಆಶಯಗಳನ್ನು ಸಂಸ್ಕೃತಿಯ ಪ್ರಾಥಮಿಕ

ಘಟಕಗಳಾಗಿ ಸ್ವೀಕರಿಸಿ, ಕೆಡುಕನ್ನು ಅದರ ವಿಘಟನೆ ನೆಲೆಯಲ್ಲಿ ಆಧುನಿಕತೆಯ ಒಳಿತಿನ ಪ್ರೀತಿ ಆಶಯಗಳಿಗೆ ಮುಖಾಮುಖಿಯಾಗಿಸಿ, ಅವೆರಡರ ಸಂಘರ್ಷದಲ್ಲಿ ಆಧುನಿಕತೆಯನ್ನು ಸ್ವೀಕರಿಸುತ್ತಾರೆ. ಆದರೆ ಪರಂಪರೆಯ ಕೆಡುಕನ್ನು ವಿರೋಧಿಸಲು ಹೋಗಿ, ಆಧುನಿಕತೆಯು ತರುವ ಗೊಂದಲಗಳನ್ನು ಯುವ ಪೀಳಿಗೆಗೆ, ಪ್ರಧಾನವಾಗಿ ಮುಖಾಮುಖಿಯಾಗಿಸುತ್ತಾರೆ. ಇಳಿವಯಸ್ಸಿನ ವ್ಯಕ್ತಿಗಳು ತಾವು ನಂಬಿದ ಮೌಲ್ಯಗಳಲ್ಲಿ ನಿರುಂಮಳವಾಗಿ ಬದುಕನ್ನು ಸ್ಥಾಯಿಯಾಗಿಸುತ್ತಾರೆ. ಆದ್ದರಿಂದ ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿ-ಯಾಗಿಸಿದಾಗ ಬದುಕು ಹಸನುಗೊಳ್ಳಲಿ ಎಂಬ ಕಾರಣಕ್ಕಾಗಿ ಅದರ ಮಾನವೀಯ ನೆಲೆಗಳನ್ನೂ ಕಾಯ್ದುಕೊಳ್ಳುವ ಮತ್ತು ನಿಧಾನಗತಿಯಲ್ಲಿ ಅದನ್ನು ಪರಿಪೂರ್ಣ-ಗೊಳಿಸುವುದರತ್ತ ಸಾಗಿರುವ ಕಾರಂತರು ಎಂದಿಗೂ ಕನ್ನಡ ಸಾರಸ್ವತ ಲೋಕಕ್ಕೆ ಸವಾಲಾಗಿಯೇ ಉಳಿಯುತ್ತಾರೆ.

ಕಾರಂತರು ಕನ್ನಡ ಅನೇಕ ಲೇಖಕರಂತೆ ಬ್ರಿಟಿಷರ ಆಳ್ವಿಕೆಯ ವಿಮರ್ಶಕರಾಗಿರಲಿಲ್ಲ; ನಮ್ಮ ಗ್ರಾಮೀಣ ಜಾತಿ ವ್ಯವಸ್ಥೆಯಲ್ಲಿ ಇರುವ ಕ್ರೌರ್ಯವನ್ನು ಬಿಚ್ಚಿಡುವ ಕೆಲಸವನ್ನು ಅವರು ಮಾಡಲಿಲ್ಲ. ಇದಕ್ಕೆ 'ಚೋಮನದುಡಿ'ಯೇ ಸಾಕ್ಷಿ. ತಮ್ಮ ಸಂಸ್ಕೃತಿ ಚಿಂತನೆಯಲ್ಲಿ ಕೇವಲ ಮಾನವಶಾಸ್ತ್ರವನ್ನು ಆಧರಿಸಿದ ಕಾರಂತರು, ಅನಾದಿಯಿಂದ ಬಂದ ಜಾತಿವ್ಯವಸ್ಥೆಯ ಬಗ್ಗೆ ತೀವ್ರವಾಗಿ ತಲೆಕೆಡಿಸಿಕೊಂಡವರಲ್ಲ. ಆದರೆ ಅವರು ನಮ್ಮ ಸಮಾಜಶಾಸ್ತ್ರಜ್ಞರು ಮಾಡಬೇಕಾದ ಕೆಲಸವನ್ನು ತಮ್ಮ 'ಚೋಮನದುಡಿ' ಕೃತಿಯ ಮೂಲಕ ಮಾಡಿದರು. 'ಚೋಮನದುಡಿ' ಕಾದಂಬರಿಯಲ್ಲಿ ಭಾರತೀಯ ಸಮಾಜದ ಗ್ರಾಮೀಣ ಮುಗ್ಧತೆಯ ಕಲ್ಪನೆಯನ್ನು ನಿರಾಕರಿಸುತ್ತ, ಅವುಗಳ ಭೀಕರತೆಯನ್ನು ನಿಷ್ಠುರವಾಗಿ ಕಾಣಿಸುತ್ತಾರೆ. ಅವರ ಒಟ್ಟು ಚಿಂತನೆಯಲ್ಲಿ ನಮ್ಮ ಜಾತಿಪದ್ಧತಿ ನಮ್ಮ ಸಂಸ್ಕೃತಿ ದೊಡ್ಡ ಸಮಸ್ಯೆಯೆಂದು ಯಾಕೆ ಅನ್ನಿಸಲಿಲ್ಲ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈಗಾಗಲೇ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯವೆಂಬ ವಿಭಿನ್ನ ನೆಲೆಯ ಸಾಹಿತ್ಯ ಪಂಥಗಳು ಕಾಣಿಸಿಕೊಂಡು ಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ, ಪ್ರಬಂಧ, ವಿಚಾರ, ವಿಮರ್ಶೆ, ಸಂಶೋಧನೆ ಮುಂತಾದ ಪ್ರಕಾರಗಳ ಮೂಲಕ ಆಧುನಿಕ ಕನ್ನಡ ಸಾಹಿತ್ಯ ಶ್ರೀಮಂತಗೊಂಡಿದೆ. ನವ್ಯೋತರ ಸಂದರ್ಭದಲ್ಲಿ ದೇವನೂರು ಮಹಾದೇವ ಅವರ ಹೆಸರು ಪ್ರಮುಖವಾದುದಾಗಿದೆ. ಬಂಡಾಯ ಚಳವಳಿ ಮತ್ತು ಸಾಹಿತ್ಯ ರೂಪುಗೊಳ್ಳದ, ಸುದ್ದಿಯಲ್ಲಿ ಇಲ್ಲದ ಸಂದರ್ಭದಲ್ಲಿ ದೇವನೂರು ಮಹಾದೇವ ಅವರು ಸಾಹಿತ್ಯ ಕೃಷಿಗೆ ತೊಡಗಿದವರು. ಬಂಡಾಯ ಚಳವಳಿಗಿಂತ ಕನಿಷ್ಠ ಒಂದು ದಶಕದ ಹಿಂದೆಯೇ ಮಹಾದೇವ ಅವರು ತಮ್ಮನ್ನು ಸಾಹಿತ್ಯ ಸೃಷ್ಟಿಯಲ್ಲಿ ಗಾಢವಾಗಿ ತೊಡಗಿಸಿಕೊಂಡು, ವಿದ್ಯಾರ್ಥಿಯಾಗಿದ್ದಾಗಲೇ ಗಂಭೀರ ಸಾಹಿತ್ಯ ಕೃಷಿಗೆ ತೊಡಗಿಸಿಕೊಂಡಿದ್ದ ಮಹಾದೇವ

ಅವರು ಸಾಮಾಜಿಕ, ಸಾಂಸ್ಕೃತಿಕ ಹೋರಾಟ, ಚಳವಳಿಗಳಲ್ಲೂ ತಮ್ಮನ್ನೂ ತೊಡಗಿಸಿಕೊಂಡು ಹೋರಾಟ ಮಾಡುತ್ತ ಬಂದವರು. ಆ ಮೂಲಕ ಶೋಷಿತ ತಳ ಸಂಸ್ಕೃತಿಯ ಜನಸಮುದಾಯದಲ್ಲಿ ಸಾಮಾಜಿಕ-ಸಾಂಸ್ಕೃತಿಕ ಜಾಗೃತಿ ಮೂಡಿಸುತ್ತ, ಚಳವಳಿಗಳ ಮೂಲಕ ತಾವೂ ಬೆಳೆಯುತ್ತ ಬಂದವರು.

ಮಹಾದೇವ ಅವರು ದಲಿತ ಪ್ರಪಂಚದ ತಾಜಾ ಅನುಭವಗಳನ್ನು ತಮ್ಮ ಕೃತಿಗಳ ಮೂಲಕ ಆಡು ನುಡಿಯ ಬೆಡಗಿನ ಭಾಷೆಯಲ್ಲಿ ಸ್ವೋಪಜ್ಞವಾಗಿ ಕಟ್ಟಿಕೊಟ್ಟವರು. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸದಸ್ಯರಾಗಿ, ಸಂಚಾಲಕರಾಗಿ ದುಡಿದವರು. ಹೀಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಿರಂತರವಾಗಿ ದುಡಿಯುತ್ತ ಆ ಕ್ಷೇತ್ರಗಳಿಗೆ ಮೌಲಿಕ ಕೊಡುಗೆ ನೀಡುವುದರ ಮೂಲಕ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಹಲವಾರು ಪ್ರಶಸ್ತಿ, ಬಹುಮಾನ, ಪುರಸ್ಕಾರ, ಮನ್ನಣೆಗಳಿಗೆ ಪಾತ್ರರಾಗಿದ್ದಾರೆ.

''ಕಾರಂತರದ್ದು ಅಸ್ಪೃಶ್ಯತೆಯ ಸಾಮಾಜಿಕ ಅನ್ಯಾಯವನ್ನು ಬುದ್ಧಿಯಲ್ಲಿ ಗ್ರಹಿಸಿ, ವಿವೇಚನೆಯಲ್ಲಿ ಅರಿತು, ಸಿಟ್ಟುಗೊಂಡು, ಭಾವುಕತೆ(Emotional)ಯಲ್ಲಿ ದುಃಖಗೊಂಡ ಹೊರಗಿನವರ ಅನುಭವ ದೇವನೂರಿಗೆ ಅದು ತನ್ನ ಸ್ವಂತದ, ಇನ್ನೂ ತನ್ನ ಜನರು ಅನುಭವಿಸುತ್ತಿರುವ ನಿತ್ಯದ ಅನುಭವ............. ಇಂಥ ಒಳಗಿನ ತೀವ್ರತೆಗೂ ಹೊರಗಿನ ಅನುಭವಕ್ಕೂ ಗುಣದಲ್ಲಿ ವ್ಯತ್ಯಾಸವಿದೆ.''[೧]

ವಿಮರ್ಶೆಯಲ್ಲಿ ಇಂತಹ ಮಾತುಗಳು ಬರುವುದು, ಈ ಲೇಖಕರ ಹುಟ್ಟು ಹಿನ್ನೆಲೆಗಳ ಬಗ್ಗೆ ನಮಗೆ ಖಚಿತವಾಗಿ ಗೊತ್ತಿರುವುದರಿಂದ ಮಾತ್ರವೇ ಇರಬಹುದೇ ಎಂಬ ಸಂದೇಹ ನನಗಿದೆ. ಒಂದು ಪಕ್ಷ ನಮಗೆ ಈ ಬಗ್ಗೆ ಏನೂ ತಿಳಿದಿರಲಿಲ್ಲವೆನ್ನಿ; ಆಗಲೂ ನಾವು ಈ ಮಾತುಗಳನ್ನು ಹೇಳಬಹುದೇ? ವಾದಕ್ಕೆ 'ಹೌದು' ಎಂದಿಟ್ಟುಕೊಂಡರೂ ಗೊಂದಲವೇನೂ ಕಡಿಮೆಯಾಗುವುದಿಲ್ಲ. ಯಾಕೆಂದರೆ 'ಸಾಹಿತಿಯ ಅನುಭವ' ಎಂದರೆ ನಿಖರವಾದ ವಿವೇಚನೆಗೆ, ವಿಮರ್ಶೆಯ ಶಿಸ್ತಿಗೆ ಒಳಪಡದ ಸಂಗತಿಯಾಗಿದೆ. ಹೀಗಾಗಿ ಯಾವುದೇ ಬದುಕಿನ ಚಿತ್ರಣ, ಸಾಹಿತಿ ಖುದ್ದಾಗಿ ಅನುಭವಿಸಿ ಬರದದ್ದೋ, ಅಥವಾ 'ಹೊರಗಿನವನ ಅನುಭವವೋ' ಎಂಬುದು ವ್ಯಕ್ತಿನಿಷ್ಠ ಅಭಿಪ್ರಾಯದ ಮಾತಾಗುತ್ತದೆ. ಜೊತೆಗೆ ಇಂತಹ ಅಭಿಪ್ರಾಯಗಳ ಹಿಂದೆ, ಸಂಕುಚಿತವಾದ, ತಪ್ಪಾಗಿ ಗ್ರಹಿಸಲ್ಪಟ್ಟ ವಾಸ್ತವವಾದದ ಪ್ರಭಾವವೂ ಕೆಲಸ ಮಾಡುತ್ತಿರಬಹುದು. ಒಬ್ಬ ಲೇಖಕನ ಅನುಭವ-ವೆಂದರೆ ನಿಜಕ್ಕೂ ಏನು? ಬದುಕಿದ್ದು ಮಾತ್ರ ಗಾಢವಾದ ಅನುಭವವೋ? ನೋಡುವುದು, ಕೇಳುವುದು, ಊಹಿಸುವುದು, ಪರಿಭಾವಿಸುವುದು, ಕಲ್ಪಿಸುವುದು, ಸಹಾನುಭೂತಿ (Empathy ಎನ್ನುವ ಅರ್ಥದಲ್ಲಿ) ಇವು ಕೂಡಾ ಲೇಖಕನಿಗೆ ಗಾಢ ಅನುಭವ

---

೧. ಸಂಕ್ರಮಣ - ಚಂಪಾ, ಪುಟ. ೧೧೬-೨೯

ಗಳಾಗಲಾರದ? ವಾಸ್ತವವಾದ ಗ್ರಹಿಕೆಯ ಪ್ರಧಾನ ಆಶಯವಾಗಿರುವ ಕಥೆ ಕಾದಂಬರಿಗಳಿಂದ ಎಂದು ಶಿವರಾಮ ಕಾರಂತರ ಮತ್ತು ದೇವನೂರ ಮಹಾದೇವರ ಬರಹಗಳ ಜೊತೆ ಹೋಲಿಸುತ್ತ ಆರ್.ವಿಜಯಶಂಕರ ಈ ಮೇಲಿನಂತೆ ಬರೆಯುತ್ತಾರೆ.

ಅಧ್ಯಯನದ ಆರಂಭದಲ್ಲಿ ಕಾದಂಬರಿಕಾರರಾಗಿ ಶಿವರಾಮ ಕಾರಂತ ಮತ್ತು ದೇವನೂರ ಮಹಾದೇವ ಮತ್ತು 'ಚೋಮನದುಡಿ' –ಕುಸುಮಬಾಲೆ ಕಥಾವಸ್ತುವನ್ನು ಗುರುತಿಸಲಾಗಿದೆ. ಅನಂತರ ಚೋಮನದುಡಿ, ಕುಸುಮಬಾಲೆ ಕೃತಿಗಳನ್ನು ವಸ್ತು ಮತ್ತು ಪಾತ್ರಗಳ ದೃಷ್ಟಿಯಲ್ಲಿ ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ವಿವರವಾಗಿ, ಆಳವಾಗಿ, ವಿಮರ್ಶಾತ್ಮಕವಾಗಿ ವಿಶ್ಲೇಷಣೆ ಮಾಡಲಾಗಿದೆ ಮತ್ತು ಆ ಕೃತಿಗಳ ಸಾಂಸ್ಕೃತಿಕ ಮಹತ್ವವನ್ನು ಪ್ರಕಾಶಗೊಳಿಸಿದೆ.

ಸನ್ನಿವೇಶ ನಿರ್ವಹಣೆ ಮತ್ತು ಸ್ತ್ರೀವಾದಿ ಧೋರಣೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. 'ಚೋಮನದುಡಿ', 'ಕುಸುಮಬಾಲೆ', ಎರಡು ಕೃತಿಗಳ ತೌಲನಿಕ ಅಧ್ಯಯನವನ್ನು ವಸ್ತು, ಪಾತ್ರ, ಸನ್ನಿವೇಶ ನಿರ್ವಹಣೆ ಇವುಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಹಾಗೂ ಕೃತಿಗಳ ಭಾಷಾ ಪ್ರಯೋಗ ಮತ್ತು ಕಲಾತ್ಮಕತೆಯನ್ನು ವಿವರವಾಗಿ ಪರಿಶೀಲಿಸಿದೆ.

ಅಧ್ಯಾಯ ಎರಡು

ಕಾದಂಬರಿಕಾರರಾಗಿ ಶಿವರಾಮಕಾರಂತ–ದೇವನೂರು ಮಹಾದೇವ ಚೋಮನದುಡಿ ಮತ್ತು ಕುಸುಮಬಾಲೆ ಕಥಾವಸ್ತು

ಶಿವರಾಮಕಾರಂತ:

ಒಂದು ಜೀವಿತ ಅವಧಿಯಲ್ಲಿ ಒಬ್ಬ ವ್ಯಕ್ತಿ ಇಷ್ಟೆಲ್ಲಾ ಸಾಧಿಸಲು ಸಾಧ್ಯವೇ ಎಂಬ ವಿಸ್ಮಯವನ್ನು ಹುಟ್ಟಿಸುವುದು ಸಾಧನೆ ಮಾಡಿರುವಂತಹ ಡಾ. ಕೆ.ಶಿವರಾಮಕಾರಂತ ನವೋದಯ ಕಾಲಘಟ್ಟದ ದೊಡ್ಡ ಸಾಹಿತಿಯಾಗಿದ್ದಾರೆ. ಇವರು ಜನಿಸಿದ್ದು ಅಕ್ಟೋಬರ್ ೧೦, ೧೯೦೨ ರಂದು ದಕ್ಷಿಣ ಕನ್ನಡ ಜಿಲ್ಲೆಯ ಕೋಟ ಎಂಬಲ್ಲಿ ಇವರ ತಂದೆ ಶೇಷಕಾರಂತ ಮತ್ತು ತಾಯಿ ಲಕ್ಷ್ಮೀಕಾರಂತ. ಕಾರಂತರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಪತ್ರಿಕಾ ವ್ಯವಸಾಯದ ಮೂಲಕ. ಇವರು ಸಾಹಿತ್ಯ ಕ್ಷೇತ್ರದಲ್ಲಿ ಕಥೆಗಾರರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿಯೂ ಕೆಲಸಮಾಡಿದ್ದಾರೆ. ಹಾಗೂ ಯಕ್ಷಗಾನ, ಬಯಲಾಟದ ಮೂಲಕ ಜಾನಪದ ಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಹಾಗೂ ಕಲೆ, ಶಿಕ್ಷಣ, ಚಲನಚಿತ್ರ, ಪತ್ರಿಕೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಪ್ರಮುಖವಾಗಿದ್ದು ಈ ಎಲ್ಲಾ ಕ್ಷೇತ್ರಗಳಲ್ಲೂ ಕೃಷಿ ಮಾಡಿದ್ದಾರೆ. ಕಾರಂತರ ಸಾಧನೆ ಎಷ್ಟು ದೊಡ್ಡದೆಂದರೆ ಆಡುಮುಟ್ಟದ ಸೊಪ್ಪಿಲ್ಲ, ಕಾರಂತರು ಬರೆಯದ ವಿಷಯವಿಲ್ಲ ಎಂಬಂತೆ ಕಾರಂತರು ಒಬ್ಬ ವ್ಯಕ್ತಿಯಲ್ಲಿ ಅವರೊಂದು ಸಂಸ್ಥೆ ಕಾರಂತರೆ ಒಂದು ವಿಶ್ವವಿದ್ಯಾಲಯ ಹಾಗೂ ಕಾರಂತರು ನಡೆದಾಡುವ ವಿಶ್ವಕೋಶ ಮುಂತಾದ ಮಾತುಗಳು ಕಾರಂತರನ್ನು ಕುರಿತ ಬರವಣಿಗೆಯಲ್ಲಿ ಈಗಾಗಲೇ ಕ್ಲೀಷೆಗಳಾಗಿ ಹೋಗಿವೆ.

ಕನ್ನಡಕ್ಕೊಬ್ಬರೇ ಕಾರಂತರು ಹಾಗೂ 'ಕಡಲ ತೀರದ ಭಾರ್ಗವ' ಎಂದು ಕಾರಂತರನ್ನು ಕರೆಯುವುದು ರೂಢಿಯಾಗಿದೆ. ಹೀಗೆ ಖ್ಯಾತಿಯನ್ನು ಪಡೆದಂತಹ ಕಾರಂತರು ಸ್ವಾತಂತ್ರದ ಸಂದರ್ಭದಲ್ಲಿ ಗಾಂಧೀಜಿಯವರ ಪ್ರಭಾವದ ಗುಂಗಿನಲ್ಲಿ ಬಂದಿಧಾರಿಯಾಗಿ ಹರಿಜನೋದ್ಧಾರ ಮಾಡಲು ಆರಂಭಿಸಿದರು. ಹಾಗೂ ಮದ್ಯಪಾನ ನಿರೋಧ ಚಳವಳಿಗೆ ತಮ್ಮನ್ನು ಧಾರೆ ಎರೆದುಕೊಂಡರು. ಸ್ವತಃ ಚರಕ ಹಿಡಿದು ನೂಲು ತೆಗೆದರು. ಈ ರೀತಿಯ ಪ್ರಭಾವದಿಂದ ಲೇಖನಿ ಹಿಡಿದು ದಲಿತರ ಜೀವನ ಹಾಗೂ ನೋವು, ಸಂಕಟಗಳನ್ನು ಅವರ ಕೃತಿಯಲ್ಲಿ ಚಿತ್ರಿಸಲು ಪ್ರಯತ್ನಿಸಿದರು. ಹಾಗೂ ಹಳ್ಳಿ ಹಳ್ಳಿ ಸುತ್ತಿ ಭಾಷಣ ಮಾಡಿದರು. ವೇಶ್ಯಾ ವಿವಾಹದ ಅಗತ್ಯವನ್ನು ಒತ್ತಿಹೇಳಿದರು. ಬ್ರಹ್ಮಚರ್ಯದ ಮಹತ್ವವನ್ನು ಬಣ್ಣಿಸಿದರು. ಹೀಗೆ ಕಾರಂತರು ಸಾಹಿತ್ಯದ ಜೊತೆಗೆ ಬೇರೆ ಬೇರೆ ಕ್ಷೇತ್ರಗಳಲ್ಲೂ ಕೆಲಸ ಮಾಡಿರುವುದು ಅವರು ಸಾಹಿತ್ಯದಲ್ಲಿ ಕೃಷಿ ಮಾಡುವುದಕ್ಕೆ ಪ್ರೇರಣೆಯಾಗಿದೆ ಎನ್ನಬಹುದು. ಇವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶ ಮಾಡಿದ್ದು ಪತ್ರಿಕಾ ವ್ಯವಸಾಯದ ಮುಖಾಂತರ ೧೯೨೪ರಲ್ಲಿ 'ವಸಂತ' ಎಂಬ ಮಾಸಪತ್ರಿಕೆ ಮತ್ತು

೧೯೫೦ರಲ್ಲಿ ವಿಚಾರವಾಣಿ ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸುವುದರ ಮೂಲಕ ಪತ್ರಿಕೋದ್ಯಮದಲ್ಲಿ ಸಾಕಷ್ಟು ಹೆಸರು ಗಳಿಸಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಇವರ ಕೃತಿಗಳಿಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಯಕ್ಷಗಾನ ಬಯಲಾಟ ಎಂಬ ಕೃತಿಗೆ ೧೯೫೯ರಲ್ಲಿ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹಾಗೂ ಸ್ವೀಡಿಶ್ ಅಕಾಡೆಮಿಯ ಪಾರಿತೋಷಕ ಲಭಿಸಿದೆ ಮತ್ತು ಈ ಕೃತಿ ಹಿಂದಿ ಮತ್ತು ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಮೂಕಜ್ಜಿಯ ಕನಸುಗಳು ಕೃತಿಗೆ ೧೯೭೮ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಹಾಗೂ ಇವರು ಕರ್ನಾಟಕ ರಾಜ್ಯ ಅಕಾಡೆಮಿ ಪ್ರಶಸ್ತಿ ಮತ್ತು ಪಂಪ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಇವರ ಮರಳಿ ಮಣ್ಣಿಗೆ ಕಾದಂಬರಿಯೂ ಹಿಂದಿ, ಇಂಗ್ಲಿಷ್, ತಮಿಳು ಭಾಷೆಗೆ ಭಾಷಾಂತರಗೊಂಡಿದ್ದು ಡಾಕ್ಟರೇಟ್ ಪದವಿಯೂ ಸಿಕ್ಕಿದೆ. ಹಾಗೂ ಕಾರಂತರು ನಿರ್ಮಾಪಕರಾಗಿ, ನಿರ್ದೇಶಕರಾಗಿ, ಛಾಯಾಚಿತ್ರಗಾರರಾಗಿ ದುಡಿದ ಅನುಭವವಿದೆ. ಹಾಗೂ ೧೯೩೩ ರಲ್ಲಿ ಡೊಂಗೋ ಮತ್ತು ಭೂತರಾಜ್ಯ ಎಂಬ ಎರಡು ಮೂಕ ಚಿತ್ರಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ೧೯೭೭ರಲ್ಲಿ ಮಲೆಯ ಮಕ್ಕಳು ಎಂಬ ಚಲನಚಿತ್ರವನ್ನು ಕಥೆ, ಸಂಭಾಷಣೆ ಸಹಿತ ನಿರ್ದೇಶಿಸಿದ್ದಾರೆ.

ಚೋಮನದುಡಿ ಕಥಾವಸ್ತು: ಚೋಮನದುಡಿ ೧೯೩೩ರಲ್ಲಿ ಪ್ರಕಟವಾದಂತಹ ಕಾರಂತರ ಕೃತಿಗಳಲ್ಲೇ ಧೋರಣೆಯ ವಿಷಯವಾಗಿ ಸಾಮಾಜಿಕ ಜೀವನದ ರೀತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವಂತಹ ಏಕೈಕ ಕೃತಿಯಾಗಿದೆ. ಈ ಕೃತಿಯಲ್ಲಿ ಯಾವ ಕೃತಕತೆಯ ಸುಳಿವೂ ಇಲ್ಲದೆ ಅನುಭವದ ನೇರ ವಾಸ್ತವತೆಯೇ ಇದರ ಶಕ್ತಿಯಾಗಿದೆ.

ಅಸ್ಪೃಶ್ಯ ಜಾತಿಗೆ ಸೇರಿದವನೊಬ್ಬನಿಗೆ ಭೂಮಿಯ ಒಡೆತನದ ಆಸೆ ಹುಟ್ಟಿದ್ದು ಅದರಿಂದ ಎದ್ದಂತಹ ಪ್ರಶ್ನೆಗಳು, ಭಾರತೀಯ ಜಾತಿವ್ಯವಸ್ಥೆಯ ಸಂದರ್ಭದಲ್ಲಿ ಪರಂಪರಾನುಗತ ಮೌಲ್ಯಗಳಿಗೆ ಮಾತ್ರ ಮುಖಾಮುಖಿಯಾಗದೆ ವಸಾಹತುಶಾಹಿಗಳ ಮೌಲ್ಯಗಳಿಗೆ ಒಂದು ಮಟ್ಟದಲ್ಲಿ ಮುಖಾಮುಖಿಯಾಗುವುದು ಕೃತಿಯ ವೈಶಿಷ್ಟ್ಯವಾಗಿದೆ.

ಅಸ್ಪೃಶ್ಯರು ಕ್ರೈಸ್ತ ಧರ್ಮದ ಪ್ರಭಾವಕ್ಕೆ ಒಳಗಾಗುವುದನ್ನು ತಡೆಯುವುದನ್ನು ಕಾರಂತರು ಕಾದಂಬರಿಯ ಮೂಲಕ ಪ್ರಮುಖವಾಗಿ ಚಿತ್ರಿಸಿದ್ದಾರೆ. ಅಸ್ಪೃಶ್ಯರ ಮೇಲಿನ ಕ್ರೈಸ್ತಧರ್ಮದ ಪ್ರಭಾವವನ್ನು ಗುರುತಿಸುವಲ್ಲಿ ಕಾರಂತರು ನಮ್ಮ ಸಮಾಜದ ಬ್ರಾಹ್ಮಣಧರ್ಮ ಹಾಗೂ ಪುರೋಹಿತಶಾಹಿ ಸಂಸ್ಕೃತಿಯ ಸ್ವರೂಪವನ್ನು ವಿವರಿಸುತ್ತಾರೆ. ಇದೇ ಮಾತನ್ನು ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ದಲಿತರು ಬ್ರಾಹ್ಮಣ ಧರ್ಮದಲ್ಲಿ ಬರಿಯ ಅಸ್ಪೃಶ್ಯರಾಗಿ ಕಾಣುತ್ತಾರೆ. ಆದರೆ ಅದೇ ದಲಿತರು ಭೂಮಾಲೀಕ ಸಂಸ್ಕೃತಿಯಲ್ಲಿ ಧಾರ್ಮಿಕವಾಗಿ ಅಸ್ಪೃಶ್ಯರು ಮಾತ್ರವಲ್ಲದೆ ಆರ್ಥಿಕ ಗುಲಾಮರಾಗೂ ಕಾಣುತ್ತಾರೆ. ಬ್ರಾಹ್ಮಣ ಧರ್ಮದ ಅಸ್ಪೃಶ್ಯತೆಯ ವಿರುದ್ಧ ದಲಿತರು ಬಂಡಾಯವೇಳುವುದು

ಬಹುತೇಕ ಸುಲಭ. ಆದರೆ ಭೂಮಾಲೀಕರ ಸಂಸ್ಕೃತಿಯ ವಿರುದ್ಧ ಬಂಡಾಯವೇಳುವುದು ಬಹುತೇಕ ಕಷ್ಟಕರ ಎಂಬುದನ್ನು ಗುರುತಿಸಲಾಗಿದೆ. ಹಾಗೂ ಕಾರಂತರು ಇಲ್ಲಿನ ಪಾತ್ರಗಳನ್ನು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸುವ ಪ್ರಯತ್ನವನ್ನು ಹಾಗೂ ಅದು ವಿಫಲವಾಗುವುದನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ.

ಮಾನವ ನಾಗರಿಕತೆಯ ಚರಿತ್ರೆಯನ್ನು ಗಮನಿಸಿದಾಗ ಅದರ ಚಾಲಿಕಶಕ್ತಿ ವರ್ಗ ವೈರುದ್ಯದಿಂದ ಉಂಟಾಗುವ ಘರ್ಷಣೆ ಎಂದು ಇಂದು ನಮಗೆ ಮನದಟ್ಟಾಗಿದೆ. ಅಂದರೆ ಭಾರತೀಯ ಹಿಂದೂ ಸಮಾಜದಲ್ಲಿ ಇದು ನೇರವಾಗಿಲ್ಲ. ವರ್ಗಘರ್ಷಣೆಯಿಂದ ಉಂಟಾಗಬಹುದಾದ ವೇಗೋತ್ಕರ್ಷವನ್ನು ಜಾತಿವ್ಯವಸ್ಥೆ ಮಂದಗೊಳಿಸಿದೆ. ಅಂದರೆ ವರ್ಗ ಹೋರಾಟದ ಚಾರಿತ್ರಿಕ ಚಲನಶಕ್ತಿ ಜಾತಿಯಲ್ಲಿ ಮಡುಗಟ್ಟಿ ಛಿದ್ರವಾಗಿದೆ. ಒಡೆದು ಚೂರಾದ ಕನ್ನಡಿಯ ಚೂರಿನಲ್ಲಿ ಅದರ ಶಕ್ತಿ ಮಡುಗಟ್ಟಿ ಚರಿತ್ರೆಯ ಚಲನಶೀಲತೆಯನ್ನು ಮಂದಗೊಳಿಸಿದೆ. ಇಲ್ಲಿ ಉಂಟಾದ ಈ ಪಾಟಿ ಜಾತಿಗಳ ಸ್ಥರಗಳಲ್ಲಿ ಆರ್ಥಿಕ ಮಾತ್ರವಲ್ಲ. ಸಾಮಾಜಿಕವಾಗಿ ಕೂಡ ಸರ್ವ ಶಕ್ತಿಯ ಅಪಹರಣೆಗೆ ಗುರಿಯಾದದ್ದು. ಹೊಲೆ ಮಾದಿಗ ಜಾತಿ ವ್ಯವಸ್ಥೆಯ ನೀಚತನಕ್ಕೆ ಕರಾಳ ಕ್ರೌರ್ಯಕ್ಕೆ ತುತ್ತಾಗಿ ಅತ್ಯಂತ ಅಮಾನವೀಯ ಶೋಷಣೆಗೆ ಸಿಕ್ಕಿ ನುಚ್ಚುನೂರಾದ ಜಾತಿ ಇದಾಗಿದೆ. ಆ ಕಾರಣಕ್ಕಾಗಿ ಕುಡುಕರಾಗಿ, ಸೋಮಾರಿಗಳಾಗಿ, ಕಳ್ಳರಾಗಿ, ಹೊಲಸಾಗಿ ಕಾಣಿಸಿಕೊಳ್ಳುವ ಮೇಲ್ನೈ ತೋರಿಕೆಗೆ ಇಡೀ ಸಮಾಜ ಜವಾಬ್ದಾರಿಯಾಗಿದೆ. ಹೀಗೆ ಬಿಡಿಯಾಗಿ ಹಿಡಿದಿರುವ ಶಕ್ತಿ ಭೂ ಸಂಬಂಧಿಯಾದ ಊಳಿಗಮಾನ್ಯ ವ್ಯವಸ್ಥೆ ಮತ್ತು ಅದಕ್ಕೆ ಪೋಷಕವಾದ ಬ್ರಾಹ್ಮಣ್ಯೆಕೆಯ ಸಂಪ್ರದಾಯ ಇಂಥ ಸಮಾಜದಲ್ಲಿ ಕನಲಿಹೋದ, ನಶಿಸಿಹೋದ ಈ ಊಳಿಗಮಾನ್ಯ ಧಾರ್ಮಿಕ ಸಂಪ್ರದಾಯದ ಕರಾಳತೆಗೆ ಸಿಕ್ಕು ದುರಂತವನ್ನನುಭವಿಸುವ ಒಂದು ಉದಾತ್ತ ಜೀವಿಯ ಸಂಘಲವನ್ನು ಚೋಮನದುಡಿ ಒದಗಿಸುತ್ತದೆ. ಈ ಕಾದಂಬರಿಯ ಹೆಚ್ಚಳ ಇರುವುದು ಶಿವರಾಮ ಕಾರಂತರು ಏನು ಮಂಡಿಸಲು ಹೊರಟಿದ್ದಾರೆ ಎನ್ನುವುದರಿಂದಾಗಲಿ, ಕಾರಂತರ ಪಕ್ಷಪಾತ ಏನೆಂಬುದರಲ್ಲಾಗಲಿ ಅಡಗಿಲ್ಲ. ಬದಲಾಗಿ ಈಗ ಐವತ್ತು ವರ್ಷಗಳ ಹಿಂದಿನ ಗ್ರಾಮೀಣ ಪ್ರದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಮತ್ತು ಚಾರಿತ್ರಿಕ ಸಂದರ್ಭದಲ್ಲಿ ಒದಗಿಸಿಕೊಡುವ ದಟ್ಟವಾದ ವಾಸ್ತವ ಚಿತ್ರದಿಂದ ಮತ್ತು ಕಾದಂಬರಿ ಕೊಡುವ ಮಾನವೀಯ ಕಳಕಳಿಯ ದೃಷ್ಟಿಯಿಂದ ಇಲ್ಲಿಯ ಚಿತ್ರಣ ಎಷ್ಟು ಖಾಸಾ ಆಗಿದೆಯೆಂದರೆ ಅದು ತನ್ನಿಂದ ತಾನೇ ಚಾರಿತ್ರಿಕ ದ್ವಂದ್ವದ ಆಂತರಿಕ ವಾಸ್ತವವನ್ನು ಕಾರಂತರು ಚೋಮನದುಡಿ ಕಾದಂಬರಿಯ ಮುನ್ನುಡಿಯಲ್ಲಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ದಲಿತರ ಬಾಳಿನ, ಬದುಕಿನ ಚಿತ್ರಣವಿದೆಯೆಂದು ತಿಳಿಸಿದ್ದಾರೆ. ಕಾರಂತರು ಚೋಮ ಮತ್ತು ಆತನ ಪರಿವಾರದವರನ್ನು ಪ್ರತಿನಿಧಿಗಳೆಂದು ಗಣಿಸಿ ಒಂದು ವಿಶಿಷ್ಟವಾದ ಪ್ರದೇಶದಲ್ಲಿಯ ಸಮಾಜದ ಜೀವನವನ್ನು ಚಿತ್ರಿಸಿದ್ದಾರೆ ಅಲ್ಲದೆ ತಾನೊಬ್ಬ

ಬೇಸಾಯಗಾರನಾಗಬೇಕೆಂಬ ಹಂಬಲ ಆತನಿಗೆ ವಿಶಿಷ್ಟವಾದ್ದರಿಂದ ದಕ್ಷಿಣ ಕನ್ನಡದ ಉಳಿದವರಿಗಿಂತ ಅವನು ಭಿನ್ನವಾಗಿ ಕಾಣುತ್ತಾನೆ. ದಲಿತರಲ್ಲಿ ದಕ್ಷಿಣ ಕನ್ನಡದ ಮೇರ, ಬೈರ, ಅಜಲ, ಮಾರಿ ಮೊದಲಾದ ಒಳಪಂಗಡಗಳಿವೆ. ಅವರಲ್ಲಿ ಮೇರರು ಒಕ್ಕಲುತನವನ್ನು ಮಾಡಬಹುದು. ಆದರೆ ಸಮಾಜವು ಮಾರಿ ಹೊಲೆಯರಿಗೆ ಆ ಹಕ್ಕನ್ನು ನೀಡಿಲ್ಲ. ಅವರ ನೆರಳೂ ಕೂಡ ಇತರರನ್ನು ಮುಟ್ಟಕೂಡದು. ಅವರು ಎಂಜಲು, ಮುಸುರೆ, ಸತ್ತ ದನಗಳನ್ನು ಮೊದಲಾದವುಗಳನ್ನು ತಿಂದು ಜೀವನವನ್ನು ಸಾಗಿಸುತ್ತಿದ್ದರು ಇಂತಹ ಗುಂಪುಗಳಿಗೆ ಸೇರಿದವರನ್ನು ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರದ ಕಡೆಗಳಲ್ಲಿ ಯಾರು ಕೆಲಸಕ್ಕೆ ಕರೆಯುತ್ತಿರಲಿಲ್ಲ. ಈ ಗುಂಪಿಗೆ ಸೇರಿದವರಲ್ಲಿ ಚೋಮನು ಒಬ್ಬ. ಚೋಮ ಹುಟ್ಟು ಬಡವ, ಶೋಷಣೆ ಹಾಗೂ ದಲಿತರ ಬಡತನಗಳಿಗೆ ಮನ ಮಿಡಿಯುವಂತಹ ಚಿತ್ರಣ ಹಾಗೂ ಅಜ್ಞಾನ ಮತ್ತು ಅನಕ್ಷರತೆ ಈ ಕಾದಂಬರಿಯಲ್ಲಿ ಚೋಮನ ಪಾತ್ರದ ಮೂಲಕ ರೂಪುಗೊಂಡಿದೆ. ಚೋಮನ ನೆಲದ ಆಸ್ತೆ, ಬಡ್ಡಿ ಸಾಲದ ಒತ್ತಾಯದ ದುಡಿಮೆಯ ಬವಣೆಯ ಕಥೆಯಾಗಿದೆ. ದುರಂತದತ್ತ ವೇಗವಾಗಿ ಧಾವಿಸುವ ಕತೆಯಲ್ಲಿ ಕಂಡುಬರುವ ತಿಳಿಹಾಸ್ಯವನ್ನು ಚಿತ್ರಿಸಲಾಗಿದೆ. ಕಾದಂಬರಿಯ ವಿಷಾದವನ್ನು, ವೈದೃಶ್ಯವನ್ನು ಗಟ್ಟಿಗೊಳಿಸುವ ತಂತ್ರಗಳಾಗಿ ಬರದೆ ಒಟ್ಟು ಬದುಕಿನ ಸ್ವರೂಪದ ಬಗ್ಗೆ ಪ್ರಬುದ್ಧ ತಿಳುವಳಿಕೆಯನ್ನು ಕಾರಂತರು ಅಭಿವ್ಯಕ್ತಪಡಿಸಿದ್ದಾರೆ. ಕಾರಂತರು ಕೃತಿಯಲ್ಲಿ ವಾಸ್ತವವಾದಿ ಮಾರ್ಗವನ್ನು ಹಿಡಿದಿಟ್ಟಿದ್ದಾರೆ. ಪ್ರಗತಿಶೀಲ ಧೋರಣೆಯಿದೆ ಅಷ್ಟೆ. ಇವರು ಚೋಮನನ್ನು ಅ ಕಾಲದ ದಲಿತನಾಗಿ ಅವನನ್ನು ರೂಪಕವಾಗಿಸಿ, ಸಾಮಾಜಿಕ ಪರಿವರ್ತನೆಯ ಹಂಬಲವನ್ನಿಟ್ಟುಕೊಂಡು ತಮ್ಮ ವಿಚಾರಗಳನ್ನು ಹೃದಯ ಸ್ಪರ್ಶಿಯಾದಂತಹ ಕತೆಯಾಗಿ ಬರೆದಿದ್ದಾರೆ. ಚೋಮನು ಸಾಮಾಜಿಕವಾಗಿ, ಆರ್ಥಿಕವಾಗಿ ಅನುಭವಿಸಿದಂತಹ ಅವಮಾನ ಮತ್ತು ದೈನ್ಯತೆಗಳು ಕಾರಂತರನ್ನು ಆಳವಾಗಿ ಅಲುಗಾಡಿಸಿದೆ. ಚೋಮನನ್ನು ದೈನ್ಯತೆಯಿಂದ ಮುಕ್ತಗೊಳಿಸುವ ಅವಮಾನದಿಂದ ದೂರವಿರಿಸಲು ಯಾಕೆ ಆಗುತ್ತಿಲ್ಲ ಎಂಬ ಅಸಹಾಯಕತೆ ಮತ್ತು ನೋವನ್ನು ಕಾರಂತರು ಭಾವೋತ್ಕಟತೆಯಿಂದ ನಿರೂಪಿಸಿದ್ದಾರೆ.

ಚೋಮನದುಡಿ ರಚನೆಯ ಕಾಲದಲ್ಲಿ ಭಾರತದಲ್ಲಿ ಕಂಡುಬರುವ ಜಮೀನ್ದಾರಿ ಪದ್ಧತಿ ಮೇಲ್ವರ್ಗದವರ ದಬ್ಬಾಳಿಕೆ, ಅನಕ್ಷರತೆ, ಬಡತನ, ಶೋಷಿತ ಜೀವನ ಹಾಗೂ ಜನರು ಮತಾಂತರಕ್ಕೊಳಗಾಗುವಂತಹ ಈ ಎಲ್ಲಾ ಅಂಶಗಳು ಕಾದಂಬರಿಯುದ್ದಕ್ಕೂ ಪ್ರಭಾವವನ್ನು ಬೀರಿವೆ.ಭಾರತದಲ್ಲಿ ದಲಿತರ ಸಮಸ್ಯೆಯನ್ನು ಕುರಿತು ರಚನೆಯಾದಂತಹ ಮೊಟ್ಟಮೊದಲ ಕಾದಂಬರಿ ಎನಿಸಿಕೊಂಡಿದೆ. ಈ ಕಾದಂಬರಿಯಿಂದ ಪ್ರೇರಿತರಾದಂತಹ ಸಿದ್ಧಲಿಂಗಯ್ಯನವರು 'ಚೋಮನಮಕ್ಕಳ ಹಾಡು' ಎಂಬ ಕವನವನ್ನು ಬರೆದಿರುವುದು ತಿಳಿದುಬರುತ್ತದೆ. ಚೋಮನದುಡಿ ಇದು ವಸಾಹತುಶಾಹಿ ಕಾಲವನ್ನು ಗಟ್ಟಿಯಾಗಿ

ಹಿಡಿದಿಟ್ಟಿದೆ. ಹಾಗೂ ವೈಚಾರಿಕತೆಯನ್ನು ಸಂವಾದಿಸುವ ಅಗತ್ಯವನ್ನು ಸೃಷ್ಟಿಸಿವೆ. ಮತ್ತು ಶ್ರೇಣಿಕೃತ ಚೌಕಟ್ಟಿನಲ್ಲಿ ದಲಿತನ ಬಿಡುಗಡೆ ಕೇವಲ ಕನಸಾಗಿ ಮಾತ್ರ ಉಳಿಯುತ್ತದೆ. ಕೃತಿಯಲ್ಲಿ ದಲಿತರಿಗಿರುವ ಸಮಸ್ಯೆಯೆಂದರೆ ಅವರು ಹಿಂದೂ ಸಂಸ್ಕೃತಿಯೊಂದಿಗೆ ಹಿಂದಿನ ಜಾತಿ ಮತ್ತು ಮಾನವೀಯ ಸಂಬಂಧಗಳು,ದೇವರು, ದಿಂಡರು, ಹಬ್ಬ ಆಚರಣೆಗಳು, ಆಚಾರವಿಚಾರಗಳು ರೂಢಿಯಲ್ಲಿದ್ದ ಮೌಲ್ಯಗಳು ಭಾವನಾತ್ಮಕ ಮತ್ತು ವ್ಯಾವಹಾರಿಕವಾಗಿ ಸಂಬಂಧಗಳು ಎಲ್ಲವನ್ನು ಕಡಿದುಕೊಳ್ಳಬೇಕಾಗಿದೆ. ಇದು ಚೋಮ ಮತ್ತು ಅವನಂತವರ ಉಭಯ ಸಂಕಟವೆಂದು ಹೇಳಬಹುದಾಗಿದೆ.

ಚೋಮನದುಡಿಯಲ್ಲಿ ಧರ್ಮ, ಸಂಪ್ರದಾಯ, ಜಾತಿ ಕೂಡ ಒಂದು ಪ್ರಬಲವಾದ ಪ್ರತಿಗಾಮಿ ಶಕ್ತಿಯಾಗಿದೆ. ಅದು ಆರ್ಥಿಕ ಮೂಲದ ನೇರ ರಚನೆಯೇ ಆಗಿದ್ದರೂ ಪ್ರತಿಗಾಮಿಶಕ್ತಿಯ ಮೇಲೆ ತನ್ನ ಅಧಿಕಾರ ಸ್ಥಾಪಿಸಿ ಬಿಡುವಷ್ಟು ಪ್ರಬಲವಾಗಿಬಿಟ್ಟಿರುತ್ತದೆ.

ಕೃತಿಯಲ್ಲಿ ಚೋಮನ ಮಗ ಯಾವ ಹಿಂಜರಿಕೆಯೂ ಇಲ್ಲದೆ ಮತಾಂತರ ಹೊಂದುತ್ತಾನೆ. ಇಲ್ಲಿ ಸಮಸ್ಯೆ ಕಂಡು ಬರುವುದು ಚೋಮನಂಥ ಸ್ವಧರ್ಮಾಭಿಮಾನಿ-ಗಳಿಗೆ ಎಂಬುದನ್ನು ಕಾರಂತರು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ ಹಾಗೂ ಸಮರ್ಪಕವಾಗಿ ಹಿಡಿದಿಟ್ಟಿದ್ದಾರೆ. ಕೃತಿಯು ಸಮಾಜಿಕವಾಗಿ ಹಾಗೂ ಆರ್ಥಿಕವಾಗಿ ಆಂದೋಲನಗಳನ್ನು ಒಟ್ಟೊಟ್ಟಿಗೆ ಕಟ್ಟಿಕೊಡುತ್ತದೆ. ಸ್ವಂತಕ್ಕೆ ಸ್ವಲ್ಪವಾದರೂ ಜಮೀನೂ ಬೇಕೆಂಬುದು ಚೋಮನ ಆಸೆ. ಆದರೆ ದಲಿತನಾದವರು ಸ್ವಂತ ಭೂಮಿ ಊಳುವ ಬೇಸಾಯಗಾರನಾಗ ಬಾರದೆಂಬುದು ಮೇಲ್ಜಾತಿಯವರ ತೀರ್ಮಾನ. ಈ ರೀತಿಯ ಕಟ್ಟಳೆಯನ್ನು ಮೆಟ್ಟಿ ನಿಲ್ಲಬೇಕೆಂಬುದು ಅವನ ಮನಸ್ಸಿನ ಹಂಬಲ. ಚೋಮನ ಛಲ. ಇದರಿಂದ ತನಗಂಟಿದ ಜಾತಿಕಳಂಕದಿಂದ ಚೋಮ ತಾನು ಮುಕ್ತನಾಗಬೇಕೆಂಬುದು ಅವನ ಮನಸ್ಸಿನ ಹಂಬಲ, ತಾನು ಗಳಿಸಬೇಕು, ಉಳಿಸಬೇಕು ಹಾಗೂ ತನ್ನ ಮಕ್ಕಳ ಮದುವೆ ಮಾಡಲೇಬೇಕೆಂಬ ಆರ್ಥಿಕ ಯೋಜನೆ ಹಾಗೂ ಸಾಮಾಜಿಕ, ಸಾಂಸ್ಕೃತಿಕ ಬಯಕೆಗಳೊಂದಿಗೆ ತನ್ನ ಮನಸ್ಸಿನಲ್ಲಿ ಯೋಚನೆ ಹಾಕಿಕೊಂಡಿರುತ್ತಾನೆ.

ಊರಿನಲ್ಲಿ ಅವಮಾನದ ಬದುಕನ್ನು ಸಾಗಿಸುವ ಚೋಮನಂತಹ ದಲಿತರ ಬದುಕು ಈ ಕಾದಂಬರಿಯಲ್ಲಿ ರೂಪು ತಳೆದಿದೆ. ಸ್ವಾನುಭವದ ಅಡಿಗಲ್ಲ ಮೇಲೆ ನಿಂತಿರುವ ಈ ಕಾದಂಬರಿ ಸತ್ಯದ ದರ್ಶನ ಹಾಗೂ ಸಮಾಜವನ್ನು ಎಚ್ಚರಗೊಳಿಸುವ ಉನ್ನತವಾದಂತಹ ಪ್ರೇರಣೆಯಿಂದ ಸಾಮಾಜಿಕ ಹೊಣೆಗಾರಿಕೆ, ದಲಿತ ಸಾಹಿತ್ಯ ಎಂಬ ಕಲ್ಪನೆಗಳು ಮೊಳಗುತ್ತಿರಲಿಲ್ಲ ಎಂಬುದಕ್ಕೆ ಕಾರಂತರು ಬರೆದಂತಹ ಈ ಕಾದಂಬರಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದ್ದು, ಐತಿಹಾಸಿಕ ದೃಷ್ಟಿಗಳಿಂದ ಗಮನಾರ್ಹವಾದ ಕೃತಿ ಎನಿಸಿಕೊಂಡಿದೆ. ದಲಿತರಿಗೆ ಸಂಬಂಧಿಸಿದ ಕಥೆಯಾದರೂ ಅದನ್ನು ವಿಶ್ಲೇಷಿಸುವ

ಬಗೆ ಮಾತ್ರ ಇಂದಿನ ದಲಿತ ಸಾಹಿತ್ಯಕ್ಕಿಂತ ಭಿನ್ನವಾದುದು. ಇಂದಿನ ದಲಿತರಿಗೆ ಹೋಲಿಸಿ ನೋಡಿದರೆ ಅಂದಿನ ಚೋಮ ತೀರಾ ದುರ್ಬಲನಾಗಿ ಕಾಣುತ್ತಾನೆ. ಚೋಮನ ತೀರ ಸರಳ ಸ್ವಾಭಾವಿಕ ಹಾಗೂ ನ್ಯಾಯಯುತ ಬಯಕೆಯನ್ನು ಸಮಾಜವು ತನ್ನ ದೈತ್ಯ ಕಾಲುಗಳಿಂದ ಹೊಸಕಿ ಹಾಕಿದೆ ಎನ್ನಬಹುದು. ಹೀಗೆ ನಿರಾಶೆಯಿಂದ ಅವನ ಎದೆಯೊಡೆದು ನುಚ್ಚು ನೂರಾಗಿದೆ. ಇಷ್ಟಿದ್ದೂ ಕೊಳೆತು ನಾರುವಂತಹ ಈ ಸಮಾಜದ ವ್ಯವಸ್ಥೆಯ ಮುಖಕ್ಕೆ ಕನ್ನಡಿ ಹಿಡಿಯುವ ಕೆಲಸಮಾಡಲು ಈ ಕಾದಂಬರಿ ಓದುಗನಿಗೆ ಒಂದು ರೀತಿಯಲ್ಲಿ ಮಹತ್ವಪೂರ್ಣವಾದಂತಹ ಕೃತಿ ಎಂದು ಯಶಸ್ವಿಯಾಗಿದೆ.

ಕಾದಂಬರಿಯಲ್ಲಿ ಬರುವಂತಹ ಪಾತ್ರಗಳು ಬಹಳ ವಿಶಿಷ್ಟವಾಗಿದೆ. ಅದರಲ್ಲೂ ಚೋಮನ ಪಾತ್ರವನ್ನು ಲೇಖಕರು ಕಾದಂಬರಿಯ ಕೇಂದ್ರಬಿಂದುವಾಗಿ ಚಿತ್ರಿಸಿದ್ದಾರೆ. ಚೋಮ ದಲಿತ ಜನಾಂಗಕ್ಕೆ ಸೇರಿದವನು. ಇವನದು ತೀರಾ ಬಡಕುಟುಂಬ. ಇವನಿಗೆ ಐದುಮಂದಿ ಮಕ್ಕಳು ಹೆಂಡತಿ ಇಲ್ಲ ಆದರೆ ಕೆಳವರ್ಗದಲ್ಲಿ ಬದುಕು ಸಾಗಿಸುತ್ತಿರುವ ಇವನ ಕುಟುಂಬ ನಿಂದನೀಯವಾದಂತಹ ವೃತ್ತಿಗಳಿಂದಲೇ ಜೀವನ ಸಾಗಿಸಬೇಕಿತ್ತು. ಜೊತೆಗೆ ಎದುರಿಸಬೇಕಾದಂತಹ ಕಡುಬಡತನ, ಚೋಮನಿಗೆ ಗುರುವ, ಚನಿಯ, ನೀಲಿ, ಕಾಳ ಎಂಬ ನಾಲ್ಕು ಮಂದಿ ಗಂಡು ಮಕ್ಕಳು ಜೊತೆಗೆ ಒಬ್ಬಳೇ ಮಗಳಾದ ಬೆಳ್ಳಿ ಇದ್ದಳು.

ದಲಿತ ವರ್ಗಕ್ಕೆ ಸೇರಿದ್ದು ಕೀಳು ಜನಾಂಗದಲ್ಲಿ ಜೀವನ ಸಾಗಿಸುತ್ತಿದ್ದ ಚೋಮನಿಗೆ ಒಂದು ತುಣುಕು ಭೂಮಿಯನ್ನು ಪಡೆದು ಉತ್ತಿ, ಬಿತ್ತಿ ಸಾಗುವಳಿ ಮಾಡಿಕೊಂಡಿರಬೇಕೆಂಬ ಆಸೆ. ಆದರೆ ಅದು ಬಹುಕಾಲದ ಬಯಕೆಯಾಗಿತ್ತು ಎನ್ನಬಹುದು. ಚೋಮನ ಈ ಆಸೆಯು ಒಡೆಯನ ಜಾತಿ ದೃಷ್ಟಿಯ ಪರಿಣಾಮವಾಗಿ ಫಲಿಸದಿದ್ದಾಗ ಬೇರೆ ದಾರಿ ಇಲ್ಲದೆ ತನ್ನ ಇಬ್ಬರು ಮಕ್ಕಳಾದ ಗುರುವ ಮತ್ತು ಚನಿಯರನ್ನು ಕಾಫಿತೋಟಕ್ಕೆ ಕೂಲಿ ಕೆಲಸಕ್ಕೆಂದು ಕಳುಹಿಸಬೇಕಾಗುತ್ತದೆ. ಆದರೂ ಚೋಮನ ಆಸೆ ಮತ್ತಷ್ಟು ಹೆಚ್ಚಾಗಿ ಸಂಕಪ್ಪಯ್ಯನವರ ಹತ್ತಿರ ಭೂಮಿಯನ್ನು ಕೇಳುವ ಸಾಹಸ ಮಾಡುತ್ತಾನೆ. ಇವನ ಮಾತಿಗೆ ಸಂಕಪ್ಪಯ್ಯನವರ ತಿರಸ್ಕಾರದ ಮಾತು ಅವರ ಬಾಯಿಂದ ಬಂತು. ಚೋಮ ಇದುವರೆಗೂ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಭೂಮಿ, ಗದ್ದೆ ಕೊಟ್ಟದ್ದಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವ ಹಾಗೆ ಇಲ್ಲ ಅಂದರು ಈ ಮಾತನ್ನು ಕೇಳಿದ ಚೋಮನ ಆಸೆ ಸ್ವಲ್ಪ ಮಟ್ಟಿಗಾದರೂ ಕುಗ್ಗಿದರೂ ಭೂಮಿಯನ್ನು ಪಡೆಯುವ ಛಲ ಮಾತ್ರ ಮತ್ತಷ್ಟು ಹೆಚ್ಚಾಯಿತೆನ್ನಬಹುದು. ಆದರೆ ಚೋಮ ಅಸ್ಪೃಶ್ಯನಾದ್ದರಿಂದ ಸಂಕಪ್ಪಯ್ಯನವರ ತಾಯಿಯೂ ಚೋಮನ ಆಸೆಯನ್ನು ವಿರೋಧಿಸುವುದನ್ನು ಕಾರಂತರು ಕೆಳವರ್ಗದ ಬದುಕು ಸಾಗಿಸುವ ಅಸಹಾಯಕ ವ್ಯಕ್ತಿ ಮುಂದೆ ಬರುವುದನ್ನು ತಡೆಯಲು ಸಮಾಜದಲ್ಲಿ ಕಂಡುಬರುವಂತಹ ಪಾತ್ರಗಳಲ್ಲಿ ಸಂಕಪ್ಪಯ್ಯನವರ ತಾಯಿಯು ಒಬ್ಬರಾಗಿದ್ದಾರೆ ಎಂಬುದನ್ನು ಕಾರಂತರು ಕೃತಿಯಲ್ಲಿ ಚಿತ್ರಿಸಿರುವುದು ಬಹಳ ವೈಶಿಷ್ಟ್ಯಪೂರ್ಣವಾಗಿದೆ.

ಸಂಕಪ್ಪಯ್ಯನವರ ತಾಯಿ ಚೋಮನ ಆಸೆಯನ್ನು ತಿಳಿದು ''ಅಬ್ಬಾ! ಹೊಲೆಯರಿಗೆ ಬಂದ ಸೊಕ್ಕೆ!'' ಎಂದು ಶಪಿಸುತ್ತಾಳೆ. ಹೀಗೆ ದಲಿತ ವರ್ಗದವರು ಎಂದಿಗೂ ಬಾಯಿಯ ಒಡೆಯನಾಗುವುದು ಸಾಧ್ಯವಿಲ್ಲ ಎಂಬುದನ್ನು ಸಂಕಪ್ಪಯ್ಯನ ತಾಯಿ ಚೋಮನಿಗೆ ತಿಳಿಸಲು ಪ್ರಯತ್ನಿಸುತ್ತಾಳೆ. ಕಾದಂಬರಿಯಲ್ಲಿ ಬರುವ ಈ ಸಂಗತಿ ಬಹಳ ಮುಖ್ಯ ಸಂಗತಿಯಾಗಿದೆ. ಕೆಳವರ್ಗದ ಕೀಳು ಜನಾಂಗದವರು ಇದೇ ರೀತಿ ಹೀಗೆ ಜೀವನ ಸಾಗಿಸಬೇಕೆಂಬ ಮೇಲ್ಜಾತಿಯವರ ದಬ್ಬಾಳಿಕೆಯನ್ನು ಕಾರಂತರು ಜಾತಿ ಪ್ರಜ್ಞೆ ಮತ್ತು ವರ್ಗಗಳ ಮೂಲಕ ತಂದು ಈ ಸಂಗತಿಯನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ಸಂಕಪ್ಪಯ್ಯ ಮತ್ತು ಅವನ ತಾಯಿಯ ಮಾತಿನಿಂದ ನೊಂದಂತಹ ಚೋಮ ಮತ್ತೆ ಭೂಮಿಯನ್ನು ಪಡೆಯಬೇಕೆಂದು ಪಾದ್ರಿ ಸಾಹೇಬರ ಬಳಿ ಹೋಗುತ್ತಾನೆ. ಅವರಲ್ಲಿ ಗೇಣಿಗೆ ಭೂಮಿಯನ್ನು ಕೊಡುವುದಾಗಿ ಕೇಳಿದಾಗ ಪಾದ್ರಿಗಳು ಚೋಮನನ್ನು ಕುರಿತು ''ಚೋಮ ಗೇಣಿಗೆ ಕೊಡಬಹುದಾದ ಗದ್ದೆಗಳಿವೆ. ಬರಿ ಗದ್ದೆಗಳಲ್ಲ ಬಹಳ ಒಳ್ಳೆಯ ಗದ್ದೆಗಳೇ ಇವೆ. ನಿಮ್ಮ ಹಳ್ಳಿಗೆ ತೀರ ಸಮೀಪದಲ್ಲಿಯೇ ಇವೆ. ಆದರೆ ಅವೆಲ್ಲ ಇಗಜಿಯ ಆಸ್ತಿ. ನಮ್ಮ ಜಾತಿಯವರಿಗಲ್ಲದೆ ಇತರರಿಗೆ ಗೇಣಿಗೆ ಕೊಡಲು ಬರುವುದಿಲ್ಲ'' ಎಂಬ ಮಾತನ್ನು ಅವರು ಮುಂದುವರಿಸುತ್ತಾರೆ.

''ಚೋಮ ನೀನು ಹಾಳಾದ ಅವರಿವರ ಚಾಕರಿ ಮಾಡಿಕೊಂಡಿರುವ ಬದಲು ಕ್ರಿಶ್ಚಿಯನ್ನನಾಗಿ ಸ್ವತಂತ್ರನಾಗಬಾರದೆ?'' ಎಂದು ಪಾದ್ರಿಗಳು ಹೇಳುತ್ತಾರೆ. ಈ ಸಂದರ್ಭದಲ್ಲಿ ಚೋಮನ ಆಸೆಯನ್ನು ಉದ್ದೇಶವಾಗಿ ಇಟ್ಟುಕೊಂಡು ಹಾಗೂ ನೆಪವಾಗಿಟ್ಟುಕೊಂಡು ಪಾದ್ರಿಗಳು ಅವನ ಹತ್ತಿರ ಜೀತಮಾಡಿಕೊಳ್ಳುವ ಉದ್ದೇಶ ಹಾಗೂ ಚೋಮನನ್ನು ಜಾತಿಯಿಂದ ಜಾತಿಗೆ ಅಂದರೆ ದಲಿತನಾದ ಚೋಮನನ್ನು ಕ್ರಿಶ್ಚಿಯನ್ ಪಂಗಡಕ್ಕೆ ಮತಾಂತರಗೊಳಿಸುವ ಉದ್ದೇಶದಿಂದ ಈ ಮಾತುಗಳನ್ನು ಹೇಳುತ್ತಾರೆ ಎನ್ನಬಹುದು. ಆದರೆ ಚೋಮನು ಮತ್ತೆ ಸಂಕಪ್ಪಯನವರನ್ನು ಕೊನೆಯ ಬಾರಿ ಗೇಣಿ ಕೇಳಲು ಹೋದಾಗ ಸಂಕಪ್ಪಯ್ಯನವರ ನುಡಿ ಮಾತುಗಳು ಏನೆಂದರೆ ''ಚೋಮ ನಮ್ಮ ಹಾಸುಗೆಗೆ ಸರಿಯಾಗಿ ಕಾಲು ನೀಡಬೇಕು: ನಮ್ಮ ಹಣೆಯಲ್ಲಿ ಬರೆಯದಿದ್ದುದಕ್ಕಾಗಿ ಅತ್ತರೆ ಉಪಯೋಗವುಂಟೆ!''[೧] ಎನ್ನುತ್ತಾರೆ. ಆದರೆ ಈ ಸನ್ನಿವೇಶದ ಸಂದರ್ಭದಲ್ಲಿ ಕಾರಂತರು ದಲಿತರ ಬದುಕಿನ ಜೀವನ ಚಿತ್ರಣವನ್ನು ಚಿತ್ರಿಸುವಾಗ ಒಂದು ವಿಶೇಷವಾದ ಸಂಗತಿಯನ್ನು ಚಿತ್ರಿಸಿದ್ದಾರೆ. ಅಂದರೆ ಮೇಲ್ಜಾತಿಯವರಿಗೂ ಸಹಕೆಳಜಾತಿಯವರನ್ನು ಕಂಡರೆ ಕರುಣೆ, ಅನುಕಂಪ ಉಂಟಾಗುತ್ತದೆ ಎಂಬುದನ್ನು ಕಾರಂತರು ಕಾದಂಬರಿಯಲ್ಲಿ ಸಂಕಪ್ಪಯ್ಯನೆಂಬ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಈ ಸಂಗತಿ ಕೃತಿಯಲ್ಲಿ ಗಮನಿಸಬೇಕಾದಂತಹ ಬಹಳ

---

೧. ಚೋಮನದುಡಿ – ಶಿವರಾಮಕಾರಂತ, ಪುಟ. ೨೨–೨೩

ಮುಖ್ಯ ಸಂಗತಿ ಎನ್ನಬಹುದು. ಸಂಕಪ್ಪಯ್ಯ ಮತ್ತು ಅವನ ತಾಯಿ ಇಬ್ಬರಿಗೂ ಚೋಮನ ಮೇಲೆ ಅಕ್ಕರೆ ಇದೆ. ಇವರಿಬ್ಬರೂ ದುಷ್ಟರಲ್ಲ ಎಂಬುದನ್ನು ಈ ರೀತಿಯಾಗಿ ಗುರುತಿಸಬಹುದಾಗಿದೆ. ಚೋಮನು ಧಣಿಯನ್ನು ಗೇಣಿಗೆ ಭೂಮಿ ಕೇಳಿದಾಗ ಹಳೆಯ ಸಂಪ್ರದಾಯದ ಮುದುಕಿಯಾದ ಸಂಕಪ್ಪಯ್ಯನ ತಾಯಿ ನಿರಾಕರಿಸುತ್ತಾಳೆ.

ದಲಿತರಾದ ಅವರು ''ಬೇಸಾಯಗಾರರಾಗಿ ಸ್ವತಂತ್ರರಾದರೆ, ನಾಳೆ ನಾವು ನೇಗಿಲು ಹಿಡಿದರೆ ಸರಿ ಎಂದು ತಿಳಿಯಬಹುದೆಂದು ತಿರಸ್ಕಾರ ಮಾಡುತ್ತಾಳೆ. ತಾಯಿಯ ಮಾತನ್ನೂ ತಿಳಿದರೂ ಕೂಡ ಸಂಕಪ್ಪಯ್ಯನವರು ತಾಯಿಯನ್ನು ಮೃದುವಾಗಿ ಮಾತನಾಡಿಸಿ ಬಲವಾಗಿ ಬೇಡಿದರು ಸಹ ತಾಯಿಯ ಉತ್ತರ ಒಂದೆಯಾಗಿದೆ. ಬೇರೆಯಾರಾದರೂ ಹಾಗೆ ಮಾಡಿದ್ದಾರೆಯೇ? ಎಂದು ತಿಳಿದು ಆ ಮೇಲೆ ಮಾಡು, ಮೊದಲು ನೀನು ದಲಿತರಿಗೆ ಉಪವೀತ ಕೊಡುವುದು ಬೇಡ ನಾಳೆ ನಿನಗೆ ಅಪಕೀರ್ತಿ ಬಂದೀತು'' ಎಂದು ತಿರಸ್ಕರಿಸುತ್ತಾಳೆ. ಆದರೆ ಇದನ್ನು ಚೋಮನಿಗೆ ತಿಳಿಸುವುದು ಹೇಗೆಂದು ಸಂಕಪ್ಪಯ್ಯ ಇದ್ದ ಸಂಗತಿಯನ್ನು ಚೋಮನಿಗೆ ಬಲವಾಗಿ ವಿವರಿಸಿ ಎಲ್ಲವನ್ನು ತಿಳಿಸುತ್ತಾರೆ. ಸಂಕಪ್ಪಯ್ಯನವರ ಮಾತನ್ನು ಕೇಳಿದ ಚೋಮನ ಕಣ್ಣುಗಳಿಂದ ನೀರು ಹರಿದುದ್ದನ್ನು ಕಂಡು ವ್ಯಥೆಗೊಂಡರು. ಈ ಸಂದರ್ಭದಲ್ಲಿ ಚೋಮನ ಮೇಲೆ ಸಂಕಪ್ಪಯ್ಯನವರು ಒಂದು ಕ್ಷಣವಾದರೂ ಅವನ ದುಃಖಕ್ಕೆ ಸ್ಪಂದಿಸುತ್ತಾರೆ ಎಂಬುದನ್ನು ಇಲ್ಲಿ ಚೋಮನ ಮೇಲೆ ಅವರಿಗಿರುವ ಅಕ್ಕರೆ ಹಾಗೂ ಅವನ ಅಸಹಾಯಕ ಸ್ಥಿತಿಯನ್ನು ಒಂದು ಕ್ಷಣ ಮನದಲ್ಲೇ ನೆನೆದುಕೊಂಡು ವ್ಯಥೆಗೊಳ್ಳುತ್ತಾರೆ ಎಂಬುದು ಇಡೀ ಕೃತಿಯಲ್ಲೆ ಒಂದು ವಿಶಿಷ್ಟವಾದ ಸಂಗತಿಯಾಗಿದೆ.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ಸಂಗತಿಗಳು ಹಿಂದೂ ಸಮಾಜ ಚೋಮನ ಮಾನವ ಸಹಜ ಅಭೀಪ್ಸೆಯೊಂದನ್ನು ಈಡೇರಿಸುವಷ್ಟು ಬದಲಾಗಿಲ್ಲ. ಪ್ರತಿಭಟನೆಯ ಮೂಲಕ ತನ್ನ ಆಸೆಯನ್ನು ಪೂರೈಸಿಕೊಳ್ಳುವಷ್ಟು ರಾಜಕೀಯ ಸಾಮರ್ಥ್ಯವನ್ನು ಚೋಮನ ವರ್ಗ ಪಡೆದುಕೊಂಡಿಲ್ಲ. ಹಿಂದೂ ಸಂಸ್ಕೃತಿಯ ಚೌಕಟ್ಟಿನಲ್ಲಿ ದಲಿತರ ಸಮಸ್ಯೆಗಳು ಬಗೆಹರಿಯುವಷ್ಟು ಸಮಾಜ ಬೆಳೆದಿಲ್ಲ. ಚೋಮನ ಸಮಸ್ಯೆ ಅವನ ವರ್ಗದ ಸಮಸ್ಯೆಯೂ ಹೌದು; ವರ್ಣದ ಸಮಸ್ಯೆಯೂ ಹೌದು. ಚೋಮನ ಸಮಸ್ಯೆಯ ಮೂಲಕ ಅವನು ಅನುಭವಿಸುವ ವರ್ಗ, ವರ್ಣಗಳ ಅಸಮಾನತೆಯ ಗರ್ಭದಲ್ಲಿಯೇ ಇದೆ. ಆದ್ದರಿಂದ ಅವನಿಗೆ ಮುಕ್ತಿಯಿಲ್ಲ. ಎಲ್ಲಿಯವರೆಗೆ ಹಿಂದೂ ಸಂಸ್ಕೃತಿ ನಿಶ್ಚಲವಾಗಿಯೇ ಇರುತ್ತದೆಯೋ ಅಲ್ಲಿಯವರೆಗೆ ಯಥಾಸ್ಥಿತಿ ಮುಂದುವರಿಯಬೇಕು. ಇದು ಶತಶತಮಾನಗಳ ವಾಸ್ತವ. ಆದರೆ ಚೋಮನದುಡಿಯ ಕಾಲ, ದೇಶಗಳ ಸಂದರ್ಭದಲ್ಲಿ ಭಾರತೀಯ ಸಮಾಜ ಒಂದು ಹೊಸ ಮೌಲ್ಯ ವ್ಯವಸ್ಥೆಯ ಪ್ರವೇಶವನ್ನು ಎದುರುಗೊಂಡಿದೆ. ವಸಾಹತುಶಾಹಿಯು ಮಿಶನರಿ ಸಂಸ್ಕೃತಿಯೊಂದಿಗೆ ದಕ್ಷಿಣ ಕನ್ನಡವನ್ನು ಅದಾಗಲೇ

ಪ್ರವೇಶಿಸಿದೆ. ಈ ಮಿಶನರಿಗಳು ಮತಾಂತರ ಚಟುವಟಿಕೆಗಳಲ್ಲಿ ತೊಡಗಿಸಿದ್ದಾರೆ. ಮುಖ್ಯವಾಗಿ ದಲಿತರು ಕ್ರೈಸ್ತಮತಕ್ಕೆ ಸೇರಲಾರಂಭಿಸಿದ್ದಾರೆ. ಈ ಮತಾಂತರದ ಇಂದಿನ ಒಂದು ಮುಖ್ಯ ಪ್ರೇರಣೆಯಾದರೆ ಮಿಶನರಿಗಳು ನೀಡುವ ಆರ್ಥಿಕ ಪ್ರಲೋಭನೆ ಕ್ರೈಸ್ತ ಮತಕ್ಕೆ ಮತಾಂತರಗೊಂಡ ಅಸ್ಪೃಶ್ಯರಿಗೆ ಮಿಶನರಿಗಳು ಉಳಲು ಭೂಮಿಯನ್ನು ಕೊಡುತ್ತಿದ್ದಾರೆ. ಹಿಂದೂ ಸಂಸ್ಕೃತಿಯ ಚೌಕಟ್ಟಿನಲ್ಲಿ ಸ್ವಂತ ಭೂಮಿಯ ಆಸೆಯನ್ನು ತೋರದೇ ಜೀವಿಸಬೇಕಾಗಿದ್ದ ಅಸ್ಪೃಶ್ಯರಿಗೆ ಇಲ್ಲಿ ಬಿಡುಗಡೆಯ ಒಂದು ಮಾರ್ಗ ಗೋಚರಿಸುತ್ತದೆ. ಹಾಗೂ ಇಲ್ಲಿ ಅವರಿಗಿರುವ ಸಮಸ್ಯೆಯೆಂದರೆ ಅವರು ಹಿಂದೂ ಸಂಸ್ಕೃತಿಯೊಂದಿಗೆ ಹಿಂದಿನ ಜಾತಿ ಮತ್ತು ಮಾನವೀಯ ಸಂಬಂಧಗಳನ್ನು ತೊರೆಯುವುದು ಮತ್ತು ದೇವರು ದಿಂಡರನ್ನು ಹಬ್ಬ ಆಚರಣೆಗಳನ್ನು, ರೂಢಿಯಲ್ಲಿದ್ದ ಮೌಲ್ಯಗಳ ಜೊತೆಗೆ ಭಾವನಾತ್ಮಕ ಮತ್ತು ವ್ಯವಹಾರಿಕ ಸಂಬಂಧಗಳನ್ನು ಕಡಿದುಕೊಳ್ಳಬೇಕಾಗುತ್ತದೆ ಎಂಬುದನ್ನು ಕಾರಂತರು ಕೃತಿಯಲ್ಲಿ ಚೋಮನ ಮಗನಾದಂತಹ ಗುರವ ನಂತಹವರಿಗೆ ಇದು ಅಂತಹ ದೊಡ್ಡ ಸಮಸ್ಯೆಯೇನಲ್ಲ. ಗುರುವ ಮತಾಂತರ ಹೊಂದಿ ಭೂಮಿಯನ್ನು ಸಂಪಾದಿಸಿ ಹೊಸ ಬದುಕನ್ನೇ ಪಡೆಯುತ್ತಾನೆ ಎಂಬುದು ಕೃತಿಯಲ್ಲಿ ವಿಶಿಷ್ಟವಾದ ಸಂಗತಿಯಾಗಿದೆ.

ಚೋಮನಿಗೆ ಗುರುವನು ಮತಾಂತರ ಹೊಂದಿ ಅವನ ಬದುಕಿನಲ್ಲಿ ಉಂಟಾದ ಸಾಧ್ಯತೆಗಳು ಚೋಮನಲ್ಲಿ ಸಿಟ್ಟು, ಭಯ, ಆತಂಕಗಳನ್ನೇ ಹುಟ್ಟಿಸುತ್ತದೆ. ಆದರು ''ಗದ್ದೆ ಸಾಗುವಳಿಯೇ? ಯಾರು ಗುರುವನೇ? ಜಾತಿಗೆಟ್ಟರೂ ಸ್ವರ್ಗ ಸಿಕ್ಕಿತಲ್ಲ!''[೧] ಎನ್ನುವಂತಾದರೂ ಚೋಮನಲ್ಲಿ ಜಾತಿಕೆಡುವ ಭಯ, ಆತಂಕ ಮತ್ತು ಸ್ವಾಭಿಮಾನ ಯಾವತ್ತಿಗೂ ಸ್ಥಿರವಾಗಿ ಉಳಿಯುವಂತಾಗಿದೆ.

ಹೊಸ ಬದುಕನ್ನು ತೆರೆದುಕೊಂಡು ಹೊಸ ಆಶೋತ್ತರಗಳನ್ನು ಬೆಳೆಸಿಕೊಳ್ಳುವ ಬೆಳ್ಳಿ ಮಾತ್ರ ಬದಲಾವಣೆಯನ್ನು ತರಬಹುದಾದಂತಹ ಸಾಧ್ಯತೆಗಳನ್ನು ನಿರೀಕ್ಷಿಸಬಲ್ಲಳು ''ಅವಳ ಮನಸ್ಸು ಸಹ ಗುರುವನನ್ನು ಕಾಣಲು ಹಂಬಲಿಸುತ್ತಿತ್ತು. ಅವನಾದರೂ ಬಳಿಯಲ್ಲಿರುತ್ತಿದ್ದರೆ ಸತ್ತವರ ಸ್ಥಾನವನ್ನು ತುಂಬುತ್ತಿದ್ದ. ತಂದೆಯ ಮುಪ್ಪಿನಲ್ಲಿ ನೆರವಾಗುತ್ತಿದ್ದೆ ಎಂದು ಯೋಚಿಸತೊಡಗಿದಳು. ಆದರೆ ಕ್ರಿಶ್ಚಿಯನ್‌ನಾದ ಅವನನ್ನು ತಿರುಗಿ ನಾವು ಸೇರಲು ಅವನಂತೆ ಕ್ರಿಶ್ಚಿಯನ್‌ರಾಗಬೇಕಾಗುತ್ತದೆ ಎಂದು ತಮಗಿನ್ನು ಯಾವ ದೇವರಾದರೇನು? ಎಂದು ಅನ್ನಿಸಿತು. ಮರುಕ್ಷಣವೇ ಹಾಳು ಮನ್ವೇಲನ ಹಂಬಲವೂ ಬಂದಿತು. ಅವಳ ವಿಲಾಸಿ ಜೀವನದ ಆಸೆಯು ತಿರುಗಿ ಮೊಳೆಯಿತು. ಒಮ್ಮೊಮ್ಮೆ ತನ್ನ ಮನಸ್ಸಿನಲ್ಲಿ ತಾನು ಮನ್ವೇಲನ ಮಡದಿಯಾಗುವೆನೆಂದು ಚಿತ್ರಿಸಿಕೊಂಡಳು. ಗುರುವ ಮಾರಿಯ ಪತಿಯಾಗಲಿಲ್ಲವೇ?'' ಎಂಬುದನ್ನು ಕಾರಂತರು ಈ ರೀತಿಯಾಗಿ ಚಿತ್ರಿಸಿದ್ದಾರೆ.[೨]

---

೧. ಚೋಮನದುಡಿ – ಶಿವರಾಮಕಾರಂತ, ಪುಟ. ೨೪

೨. ಅದೇ, ಪುಟ. ೫೪

ನಮ್ಮ ಭಾರತೀಯ ಸಮಾಜದಲ್ಲಿ ದಾರಿದ್ರ್ಯ ಮತ್ತು ಬಡತನ ದಟ್ಟವಾಗಿದೆ. ಹಣದ ಅಸಮರ್ಪಕ ಹಂಚಿಕೆಯಿಂದ ಶ್ರೀಮಂತರು ಶ್ರೀಮಂತರಾದರೆ ಬಡವರು ಬಡವರಾಗಿಯೇ ಉಳಿದಿದ್ದಾರೆ. ಕಿತ್ತು ತಿನ್ನುವ ಬಡತನ ಮತ್ತು ಆಹಾರದ ಸಮಸ್ಯೆ ನಮ್ಮಲ್ಲಿ ದಟ್ಟವಾಗಿ ಕಾಣುತ್ತಿದೆ. ಕಾದಂಬರಿಯಲ್ಲಿ ಸಾಮಾಜಿಕವಾಗಿ ಕೆಳವರ್ಗಕ್ಕೆ ಸೇರಿದಂತಹ ಚೋಮ ಆರ್ಥಿಕವಾಗಿ ದುರ್ಬಲನಾದಂತಹ ವ್ಯಕ್ತಿ ಶ್ರಮಪಟ್ಟು ದುಡಿದರೆ ಮಾತ್ರ ಊಟ ಇಲ್ಲದಿದ್ದರೆ ಹಸಿದ ಹೊಟ್ಟೆಯಲ್ಲೇ ಮಲಗುವುದು ಇದು ನಮ್ಮ ಭಾರತೀಯ ವ್ಯವಸ್ಥೆಯಲ್ಲಿ ಕಂಡುಬರುವ ದಲಿತರ ಅವಮಾನಕರ ನಿಸ್ಸಹಾಯಕರ ಶೋಚನೀಯ ಸ್ಥಿತಿ. ಇಂತಹ ದಯನೀಯ ಸ್ಥಿತಿಯನ್ನು ಅನುಭವಿಸುವ ಚೋಮನಂತಹವರನ್ನು ಈಗಲೂ ಸಹ ಗುರುತಿಸಬಹುದಾಗಿದೆ.

ಬಡವರ ಮನೆಗೆ ನೆಂಟರು ಬಂದಾಗ ಅವರ ಸ್ಥಿತಿ ಹೇಗಿರುತ್ತೆ ಎಂಬುದನ್ನು ಕಾರಂತರು ಕಾದಂಬರಿಯಲ್ಲಿ ಬಡತನದಿಂದ ಅವರು ಪಡುವ –ಪಾಡು–ಕಷ್ಟಗಳನ್ನು, ಬವಣೆಯನ್ನು ಚಿತ್ರಿಸಿದ್ದಾರೆ. ಚೋಮನ ಮನೆಗೆ ಬಂದ ನೆಂಟರು ನಾಲ್ಕೈದು ದಿನಗಳು ತನ್ನ ಮನೆಯಲ್ಲಿಯೇ ಇರುವುದರಿಂದ ಮನೆಯಲ್ಲಿ ಕಾಳುಕಡ್ಡಿ ಇಲ್ಲದೆ ಇರುವುದರಿಂದ ಮನೆಯಲ್ಲಿ ಒಂದು ಬೆಂಕಿಯ ಕೆಂಡವೂ ಇಲ್ಲದಿರುವುದರಿಂದ ಚೋಮ ದನಿಯರ ಬಳಿ ಆರುದಿನಗಳ ಮುಂದಿನ ಕೂಲಿಯನ್ನು ಬೇಡಿ ತರುತ್ತಾನೆ. ಆದರೆ ಜಾತ್ರೆ ಮುಗಿಸಿ ಬಂದು ಹಸಿವಿನಿಂದ ಬಳಲುತ್ತಿದ್ದ ತನ್ನ ಮಕ್ಕಳಿಗೆ ತಿನ್ನಲೂ, ಉಣ್ಣಲೂ ಏನು ಇಲ್ಲದಿರುವುದು ಹಾಗೂ ಮನೆಗೆ ಬಂದ ನೆಂಟರು ಉಂಡು, ತಿಂದು ಹೋಗುವುದನ್ನು ಕಾರಂತರು ಇಲ್ಲಿ ತಿಳಿಸಿದ್ದಾರೆ. ಮನೆಯಲ್ಲಿ ಯಾವ ವಸ್ತುವು ಇಲ್ಲದೆ ಇದ್ದಾಗ ಬೆಳ್ಳಿ ಒಲೆ ಹಚ್ಚಲೂ ಬೆಂಕಿಯ ಕೆಂಡ ಒಲೆಯಲ್ಲಿ ಇಲ್ಲದಿರುವುದು ಹಾಗೂ ಬೆಂಕಿಪೆಟ್ಟಿಗೆಯೂ ಅವರಲ್ಲಿ ಇಲ್ಲದಿರುವುದನ್ನು ತಿಳಿದು ದನಿಯರ ಮನೆಗೆ ಹೋಗಿ ನಾಲ್ಕು ಬೆಂಕಿಯ ಕೆಂಡಗಳನ್ನು ಬೇಡಿ ತರುತ್ತಾಳೆ. ಹಾಗೂ ಒದ್ದೆ ಕಟ್ಟಿಗೆಯನ್ನು ತಂದು ಕಿಚ್ಚನ್ನು ಹೊತ್ತಿಸಿ ಗಂಜಿಯನ್ನು ಬೇಯಿಸಿ ಕೆಳಕ್ಕೆ ಇಳಿಸುವುದು ಇವೆಲ್ಲವನ್ನು ಕಾರಂತರು ಬಡತನದಿಂದಲೇ ಬಳಲುತ್ತಿರುವ ದಲಿತರ ಸ್ಥಿತಿಯನ್ನು ಈ ರೀತಿಯಾಗಿ ಗುರುತಿಸಿದ್ದಾರೆ. ಹಾಗೂ ಚನಿಯನನ್ನು ನೋಡಬೇಕೆಂದಾಗ ಮನೆಯಲ್ಲಿ ಕತ್ತಲೆ ತುಂಬಿದ್ದು ಬೆಳಕು ಇಲ್ಲದೆ ದೀಪವೂ ಇಲ್ಲದ ಸ್ಥಿತಿಯನ್ನು ಕಾರಂತರೂ ಈ ಮೇಲಿನ ಸನ್ನಿವೇಶಗಳಲ್ಲಿ ಚಿತ್ರಿಸುತ್ತಾರೆ. "ಚೋಮನದುಡಿ" ಕೃತಿಯಲ್ಲಿ ಚೋಮನ ಹೆಂಡತಿಯು ಬದುಕಿದ್ದಾಗ ಚೋಮನ ದಾಂಪತ್ಯವೂ ಹಸನಾಗಿತ್ತು ಎನ್ನುವಂತಹ ಸೂಚನೆಗಳು ಕಂಡುಬರುತ್ತವೆ. "ಚೋಮನ ಕುಟುಂಬದಲ್ಲಿರುವ ಅನ್ಯೋನ್ಯತೆ ಒಂದೊಂದು ಹೂವಿನ ಎಸಳುಗಳಲ್ಲಿರುವ ಅನ್ಯೋನ್ಯತೆಯಂತೆ ಇತ್ತು. ಸತ್ತು ಹೋದ ಚೋಮ ಹೊಲತಿ ಇದ್ದರೆ ಇನ್ನಷ್ಟು ಚಂದವಿತ್ತು" ಎನ್ನಬಹುದು. ತನ್ನ ಆಕಾಂಕ್ಷೆಯನ್ನು ಮಕ್ಕಳ ಮುಂದೆ ಹೇಳಿಕೊಳ್ಳುವಾಗ ಚೋಮ ಈ ಮಾತನ್ನು ನುಡಿಯುತ್ತಾನೆ. "ಹೊಲತಿ

ಇರುವಾಗಲೇ ನೇಗಿಲು ಹಿಡಿಯುವ ಆಸೆ ಮಾಡಿದ್ದೆ. ಅವಳಿಗೆ ಅದನ್ನು ಕಾಣಿಸುವ ಋಣವಿಲ್ಲದೆ ಹೋಯಿತು" ಮಕ್ಕಳ ಮದುವೆಯ ಬಗ್ಗೆ ಚೋಮನ ಯೋಚನೆಗಳು ಯಾವುದೇ ತಂದೆ ತನ್ನ ಮಕ್ಕಳ ದಾಂಪತ್ಯ ಜೀವನದ ಬಗ್ಗೆ ತೆಗೆದುಕೊಳ್ಳುವಾಗ ಆರೋಗ್ಯಕಾರಿ ನಿಲುವುಗಳೇ ಆಗಿದೆ. ಬೆಳ್ಳಿಯು "ಅಪ್ಪಾ ಅವರಿಬ್ಬರಿನ್ನೂ ಸಣ್ಣವರೇನು? ಹೊಣೆಯನ್ನರಿತು ಸಂಸಾರ ಹೂಡಬೇಡವೇ? ಅವರಿಗೀಗ ಮದುವೆಯ ಪ್ರಾಯ ಬಂದಿದೆ. ಇಂದೋ, ನಾಳೆಯೋ ಹೊಲತಿಯರನ್ನು ಕೂಡಬೇಕಾದವರನ್ನು ಮನೆಯಲ್ಲಿಯೇ ಇರಿಸಿಕೊಂಡಿರುವುದು ಸರಿಯೇ?' ಎನ್ನುತ್ತಾಳೆ. ಹಾಗೂ ಅವರು ಊರು, ಮನೆಯಲ್ಲೇ ತುಸುವೇ ಕದ್ದು ಕುಡಿಯುತ್ತಿದ್ದ ಸಂಗತಿ ಮುದುಕನಾದ ಚೋಮನಿಗೆ ಏನು ಗೊತ್ತು ಎಂಬುದನ್ನು ಮರೆಮಾಚುತ್ತಾ ಬೆಳ್ಳಿ ಸಮಾಧಾನದ ಮಾತುಗಳಲ್ಲಿ ವ್ಯಕ್ತಪಡಿಸುತ್ತಾಳೆ.[೧]

ಕಾದಂಬರಿಯಲ್ಲಿ ಕೆಳವರ್ಗದ ಜನತೆ ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗುವುದರ ಜೊತೆಗೆ ಧಾರ್ಮಿಕವಾಗಿಯೂ ಶೋಷಿತರಾಗುತ್ತಾರೆ. ಮೂಢ ನಂಬಿಕೆಗಳು ಈ ಜನರಲ್ಲಿ ದಟ್ಟವಾದ ಪ್ರಭಾವವನ್ನು ಬೀರಿವೆ. ಮೇಲ್ವರ್ಗದವರಿಂದ ತುಳಿತಕ್ಕೆ ಒಳಗಾಗುವುದರ ಜೊತೆಗೆ ತಮ್ಮಲೇ ಮನೆ ಮಾಡಿರುವ ಅಜ್ಞಾನದ ಫಲವಾಗಿ ಅನೇಕ ಸಂಕಷ್ಟಗಳಿಗೆ ಸಿಲುಕಿಕೊಂಡು ನರಳುತ್ತಾರೆ. ಮೂಢನಂಬಿಕೆಗಳು ದಲಿತರಲ್ಲೂ ರಕ್ತಗತವಾಗಿ ಮೈತಾಳಿವೆ. ಇದರ ಹಿಡಿತದಿಂದ ಬಿಡಿಸಿಕೊಳ್ಳಲಾರದೇ ಯಾವ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತಾರೆ. ಹಾಗೂ ಅದರ ಪರಿಣಾಮವಾಗಿ ಹೇಗೆ ದುರಂತದ ಬದುಕಿಗೆ ಗುರಿಯಾಗುತ್ತಾರೆ ಎಂಬುದನ್ನು ಕಾದಂಬರಿಯಲ್ಲಿ ಕಾಣಬಹುದು. ತಮ್ಮ ಅಜ್ಞಾನದ ಮತ್ತು ಮೂಢನಂಬಿಕೆಗಳು ಇದರ ಫಲವಾಗಿ ಚೋಮ ಮತ್ತು ಅವನ ಕುಟುಂಬದವರು ಈ ಜನರ ಅಜ್ಞಾನವನ್ನು ಜನತೆ ತನ್ನ ಸ್ವಾರ್ಥಕ್ಕಾಗಿ ಯಾವ ರೀತಿ ದುರುಪಯೋಗಪಡಿಸಿಕೊಳ್ಳುತ್ತದೆ ಎಂಬುದನ್ನು ಕಾರಂತರು ಮನಗಾಣಿಸಿದ್ದಾರೆ. ಚೋಮನ ಹೆಂಡತಿ ಗುಳಿಗನ ಉಪದ್ರವದಿಂದ ರಕ್ತಕಾರಿ ಸತ್ತಳಂತೆ ಗುಳಿಗ ಕೂಡ ಪಂಜುರ್ಲಿ ಭೂತದಂತೆ ಒಂದು ಭೂತ. ಇಲ್ಲಿ ಕಾರಂತರು ಪಂಜುರ್ಲಿ ಭೂತದ ಮೂಲಕ ಅಲ್ಲಿನ ಜನರ ಮೂಢನಂಬಿಕೆಗಳನ್ನು ಚಿತ್ರಿಸಿರುವಿಕೆ ಬಹಳ ವೈಶಿಷ್ಟ್ಯವಾಗಿದೆ.

ಕಾರಂತರು ಕೃತಿಯಲ್ಲಿ ಪ್ರವಾಸ ಜೀವನ ವರ್ಣನೆಯನ್ನು ಬಹಳ ಸುಂದರವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಅಂದರೆ ಚೋಮನ ಸಾಲ ತೀರಿಸುವುದಕ್ಕಾಗಿ ಅವನ ಮಕ್ಕಳಾದ ಚನಿಯ, ಗುರುವ ಇವರು ಕಾಫಿತೋಟಕ್ಕೆ ಕೂಲಿ ಕೆಲಸ ಮಾಡಲು ಹೋಗುವ ಸಂದರ್ಭಗಳನ್ನು ಹಾಗೂ ಬೆಳ್ಳಿಯ ಪ್ರವಾಸ ವರ್ಣನೆಗಳನ್ನು ಕೃತಿಯಲ್ಲಿ ವಿಶೇಷವಾಗಿ ಚಿತ್ರಿಸಿದ್ದಾರೆ.

---

೧. ಚೋಮನದುಡಿ – ಶಿವರಾಮಕಾರಂತ, ಪುಟ. ೫೮–೫೯

ದೇವನೂರು ಮಹಾದೇವ

ತಮ್ಮ ಗ್ರಾಮ್ಯ ಭಾಷೆಯಿಂದಲೆ, ಅಲ್ಲಿದ್ದ ಹಸಿ ಹಸಿ ದಲಿತರ ಚಿತ್ರಣವನ್ನು ಸಾಹಿತ್ಯ ಪ್ರಿಯರಿಗೆ ಉಣಬಡಿಸಿದ್ದ ದೇವನೂರ ಮಹಾದೇವ ಅವರು ದ್ಯಾವನೂರು ಕಥಾಸಂಕಲನದಿಂದ ಚಿರಪರಿಚಿತರಾಗಿದ್ದಾರೆ. ಒಡಲಾಳ, ಕುಸುಮಬಾಲೆ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ. ಮೊದಲು 'ನರಬಂಡಾಯ ಎಂಬ ಪತ್ರಿಕೆ ಮುಂದೆ 'ಪಂಚಮ' ಎಂದಾಯಿತು. ಇತ್ತೀಚೆಗೆ ಇವರು ಮೈಸೂರು ಸಮೀಪ ಕೃಷಿಯಲ್ಲಿ ನಿರತರಾಗಿದ್ದಾರೆ.

ಕುಸುಮಬಾಲೆ ಕಥಾವಸ್ತು

ದೇವನೂರು ಮಹಾದೇವರ ಎರಡನೆಯ ಕಾದಂಬರಿಯೇ 'ಕುಸುಮಬಾಲೆ'. ಇದು ಸೃಜನಶೀಲ ಸಾಹಿತ್ಯದಲ್ಲಿ ಒಂದು ಮಹತ್ವದ ಸಾಹಿತ್ಯಕ ಕೃತಿಯಾಗಿದೆ ಎಂದು ಹೇಳಬಹುದು. ಈ ಕಾದಂಬರಿ ಒಂದು ನಿರ್ದಿಷ್ಟ ಕ್ರಮದಲ್ಲಿ ಒಂದು ಕಾಲಾನುಕ್ರಮಣಿಕೆ-ಯಲ್ಲಿ ಬೆಳೆಯುವ ಕಥೆ ಇಲ್ಲಿ ಬರುವುದಿಲ್ಲ. ಬಿಡಿ-ಬಿಡಿ ಘಟನೆ, ದಂತಕಥೆ, ಪುರಾಣಗಳ ಸಂಗಮವಾಗಿದೆ. ಆಧುನಿಕ ಅನುಭವಗಳನ್ನು ಹಾಗೂ ಸಮಕಾಲೀನ ವಿಚಾರಗಳನ್ನು ದೇಸಿಯ ಬಂಧದಲ್ಲಿ ಹಿಡಿದಿರುವ ಕಾದಂಬರಿ ಇದೇ ಮೊದಲು ಎನ್ನಬಹುದು.

'ಕುಸುಮಬಾಲೆ' ಕಾದಂಬರಿಯಲ್ಲಿ ಗಂಡು-ಹೆಣ್ಣಿನ ಸಂಬಂಧ,ಜಾತಿ-ಮತವನ್ನು ಮೀರಿ ಬೆಸೆದುಕೊಂಡಿದೆ. ಮನುಷ್ಯ ಮೇಲು-ಕೀಳು ಎಂಬ ಭ್ರಮೆಯಲ್ಲಿಯೇ ಬದುಕಿ ತನ್ನ ವಂಶ ವೃಕ್ಷದ ಬೇರಿನ ಮೂಲದ ಬಗ್ಗೆ ಯೋಚಿಸಲಾರನು. ಅದು ಎಲ್ಲಿದೆ ಎಂದು ಹೇಳುವುದೂ ಸಹ ಕಷ್ಟ ಸಾಧ್ಯವಾದುದು. ತಂದೆ ಸತ್ತ ಹನ್ನೆರಡು ತಿಂಗಳಿಗೆ ಹುಟ್ಟಿ ಜೀತಗಾರನಿಗೆ ಹುಟ್ಟಿದ ಯಾಡ, ನಂತರ ಕಾಲಕಳೆದಂತೆ ಊರಿಗೆ ದೊಡ್ಡವನಾಗಿ ಯಾಡೇಗೌಡನಾಗಿ ತನ್ನ ಹುಟ್ಟಿನ ಬಗ್ಗೆ ತಿಳಿಯದಾದನು. ಹೊಲೆಯರ ಚನ್ನ, ಮೇಲು ಜಾತಿಯ ಕುಸುಮಳ ಮಧ್ಯದ ಅನೈತಿಕ ಸಂಪರ್ಕದಿಂದಾಗಿ ಮಗು ಪಡೆಯುವುದು, ತನ್ನ ಗಂಡನಿಂದ ವಂಶವು ಮುಂದುವರಿಯಲಾರದೆಂಬ ತೀರ್ಮಾನಕ್ಕೆ ಬಂದ ಮೇಲು ವರ್ಗದ ಹೆಣ್ಣು ಕೆಂಪಿ. ತನ್ನ ಇಷ್ಟದಂತೆ ಬೇರೆಯವನೊಡಗೂಡಿ ಮಗು ಪಡೆದು ಮುದ್ದಾಡುವುದು. ಯಾರಿಗೋ ಹುಟ್ಟಿ ಬೀದಿಯಲ್ಲಿ ಅನಾಥವಾಗಿ ಬಿದ್ದಿದ್ದ ಸೋಮೇಗೌಡರ ಹೆಂಡತಿ ಮಲ್ಲಾಜಮ್ಮ, ಆಚಾರ್ಯರ ಮಗಳು ಭಗವತೀ ಕನಸಿನಲ್ಲಿ ಹೊಲೆಯರ ಅಮಾಸನನ್ನು ಅಪ್ಪಿಕೊಳ್ಳುವ ಕ್ರಿಯೆ, ಇವು ಸಮಾಜ ವಿರೋಧಿ ವೈರುದ್ಯಗಳಂತೆ ಕಂಡರೂ, ಈ ರೀತಿಯ ಅನೈತಿಕತೆ ಕಾದಂಬರಿಯಲ್ಲಿ ಎಲ್ಲಿಯೂ ತಪ್ಪಾಗಿ ಕಂಡು ಬರದ ಪಾಪಪ್ರಜ್ಞೆ. ಇವರಾರಿಗೂ ಕಾಡಲಾರದು. ಇದು ಸಹಜ ಕ್ರಿಯೆಯೆಂಬಂತೆ ಹಾರೂರ ಹಟ್ಟೀಯ ಜೋತಮ್ಮ 'ಏ ಎಲ್ರೂ............ ಮಾಡೋ ಯಥಾರ್ಥನೇ ಹೇಳ್ತಾಳ........ ಎಂದು ಅಭಿಪ್ರಾಯ ಪಡುವಲ್ಲಿ

ಈ ಕೃತ್ಯವನ್ನು ಪರೋಕ್ಷವಾಗಿ ಒಪ್ಪಿಕೊಳ್ಳುವಳು. ಅದೇ ಆಚಾರ್ಯರ ಮಗಳು ಭಗವತೀ ಕನಸಿನಿಂದ ಎದ್ದು 'ಈ ಮೂರು ಹೊಲೆಯ ಆತನೂ.......... ಎರಡು ಹೊಲೆಯಾಗಿರುವ ಪ್ರಸಂಗವಾಗಿರುವಾಗ ಹೊಲೆಗೆ ಹೊಲೆಯು ಕೂಡಿದರೆ ಆಗುವ ಧರ್ಮ ಅದಾವುದು? ಎಂದು ತನ್ನಲ್ಲೇ ಕೇಳಿಕೊಳ್ಳುವ ಪ್ರಶ್ನೆಗೆ ಈ ರೀತಿಯ ಸಂಬಂಧ ಅನೈತಿಕತೆಯೆಂದು ಕಂಡು ಬರದೇ ಎಲ್ಲರೂ ಒಂದೇ ಎಂಬ ಭಾವನೆ ಬರುವುದು ಇಲ್ಲಿ ಈ ಭಾವನೆ ಎಲ್ಲರ ಭಾವನೆಯಾಗಿರುವುದರಿಂದಲೇ ವರ್ಣಸಂಕರ ಏರ್ಪಟ್ಟಿರುವ ಧರ್ಮ ಸೂಕ್ಷ್ಮತೆಯನ್ನು ಕಾಣಬಹುದು. ಗಂಡ ಸತ್ತ ನಂತರ ಹಟ್ಟಿ ಜೀತಗಾರನಿಂದ ಮಗು ಪಡೆದು ಅನೈತಿಕ ಸಂಬಂಧವನ್ನು ಹೊಂದಿದವಳೆಂಬ ಅಪಾದನೆಯಿಂದ ಅಕ್ಕ ಮಾದೇವಮ್ಮನಿಗೆ ಅವಳ ಭಾವ ಮೈದುನರು ಆಸ್ತಿಯಲ್ಲಿ ಪಾಲು ಕೊಡದೆ ಮನೆಯಿಂದ ಹೊರದಬ್ಬುವರು. ಆಗ ಸಂಪೂರ್ಣವಾಗಿ ನಿರ್ಗತಿಕಳಾದ ಅವಳು ಹೋಟಲಲ್ಲಿ ಟೀ ಕಾಯ್ಸಿ, ಮಗ ಯಾಡನನ್ನು ಊರಲ್ಲಿಯ ಜನರ ದನ ಮೇಯಿಸಲು ಕಳಿಸಿದಾಗ ಬುದ್ದಿ ಚಾತುರ್ಯದಿಂದ ಮತ್ತು ತಾಯಿಯ ಅಪರೋಕ್ಷವಾದ ನೆರವಿನಿಂದ ದನ ಮೇಯಿಸಲು ಹೋದ ಯಾಡ ತಿಂಗಳೊಳಗೆ ಎಲ್ಲವನ್ನು ಮಾರಿ ಶ್ರೀಮಂತನಾಗಿ, ದನ ಕರುಗಳ ಕಳುವಿನ ಬಗ್ಗೆ ಬೇರೆಯದೇ ಕಥೆ ಹೇಳಿ ಸಾಂತ್ವನ ಗಿಟ್ಟಿಸುವ ಈ ಕ್ರಿಯೆ ಅನ್ಯಾ ಮಾರ್ಗ ಎನಿಸಿದರೂ ಈ ಸಂದರ್ಭದಲ್ಲಿ ಅದೇ ಸರಿಯಾದ ಮಾರ್ಗವಾಗಿತ್ತು.

ಸಮಾಜದಲ್ಲಿ ಅಸಮಾನತೆಯು ಯಾವ ರೀತಿ ಬೆಳೆದು ಬಂದಿದೆ. ಅದಕ್ಕೆ ಐತಿಹಾಸಿಕ ಘಟನೆಯನ್ನು ನೀಡುವುದರ ಮೂಲಕ ದೇವನೂರರು ವರ್ಗ ಸಂಘರ್ಷದ ಹುಟ್ಟಿಗೆ ಕಾರಣವನ್ನು ಸ್ಪಷ್ಟಪಡಿಸುತ್ತಾರೆ. ದಲಿತ ಸಂಘರ್ಷ ಸಮಿತಿಯ ಸಭೆಯಲ್ಲಿ 'ಹೊಲೆ ಮಾದಿಗರನ್ನು ಕಂಡ್ರೆ ಮೇಲ್ವರ್ಗದವರು ರಕ್ತ ಕಾರ್ತಾರಲ್ಲ ಏಕೆ? ಎಂಬ ಪ್ರಶ್ನೆಗೆ ಕುರಿಯಯ್ಯ' ಸಾವಿರಾರು ಋತುಮಾನಗಳ ಹಿಂದೆ ನಂ ಜಾತಿ ಬಡ್ಡೆತ್ತವು ಕಾಯ್ಕಂಡಿದ್ದು ಉತ್ತಮ ಜಾತ್ಯಾವ್ರ ಹೆಂಡ್ತೀರನ್ನು ಹೊತ್ಕಂಡು ಬೆಟ್ಟದ್ ಕಿಬ್ರಿಗೆ ನಡೆದುವಸೀ ದಿನಾಂಗಂಟ ಇದ್ದು! ಆಮ್ಯಾಲೆ ತಿರ್ಗಾ ಊರ್ಗಿ ಬರಾವು, ಯಾನೇ ಆಗ್ಲಿ ಆಗ ಉತ್ತಮ್ ಜಾತ್ಯವರು ಒಳ್ಳೆಯವರಾಗಿದ್ದು, ತಾಳ್ಕತಿದ್ರು' ಎಂದು ಹೇಳಿ 'ರಗ್ತಕ ತಲ ತಲಾಂತರದ ನಪಿರ್ತದ.......'[೧] ಎಂದು ವರ್ಗ ಸಂಘರ್ಷಕ್ಕೆ ಮೂಲ ಕಾರಣವನ್ನು ಹೇಳಿ, ಅದು ಈಗಲೂ ಕಂಡು ಶೋಷಣೆಯೆಸಗುತ್ತಿರುವರು ಎಂದು ಕುರಿಯಯ್ಯಾ ನಿರಾಧಾರವಾದ ಅಭಿಪ್ರಾಯ ವ್ಯಕ್ತಪಡಿಸುವನು.

ಮೇಲು ಜಾತಿಯ ಹೆಂಡ್ತೀರನ್ನು ಹೊಲೆಯರು ಹೊತ್ತುಕೊಂಡು ಹೋದದ್ದು ಕಾದಂಬರಿಯಲ್ಲಿ ಪ್ರಸ್ತಾಪವಾಗಿದೆ. ಅದರಲ್ಲಿ ಕುಸುಮ, ಸಾವಿತ್ರಿ, ಕೆಂಪಿ, ಅಕ್ಕಮಹಾದೇವಮ್ಮ

---

೧. ಕುಸುಮಬಾಲೆ – ದೇವನೂರ ಮಹಾದೇವ, ೧೯೯೦, ಪುಟ. ೫೧

ಪ್ರಮುಖರು. ಆದರೆ ಇಲ್ಲಿ ಯಾರ ಮೇಲೆ ಬಲವಂತವಿರದೆ ಅವರೇ ಸ್ವ ಇಚ್ಛೆಯಿಂದಲೇ ಈ ಕ್ರಿಯೆಯಲ್ಲಿ ತೊಡಗಿರುತ್ತಾರೆ ಎಂಬುದು ಸತ್ಯ. ಈ ಕಾರಣದಿಂದಲೇ ಕಾದಂಬರಿಯಲ್ಲಿ ಹೊಲೆಯರ ಚೆನ್ನನ ಕೊಲೆಯಾಗುತ್ತದೆ. ಇಲ್ಲಿ ಚನ್ನ ಕುಸುಮಳನ್ನು ಕೂಡುವುದರ ಮೂಲಕ ಸಾವಿರಾರು ವರ್ಷಗಳಿಂದ ನಡೆದು ಬಂದ ಸಾಮಾಜಿಕ ವ್ಯವಸ್ಥೆಯನ್ನು ಮೀರುತ್ತಾನೆ.

ಕಾದಂಬರಿಯ ಅಂತ್ಯದಲ್ಲಿ ಶೋಷಿತ ಜನಾಂಗ ಶಿಕ್ಷಣ ಪಡೆದುದರ ಪ್ರಭಾವದಿಂದ ಅನ್ಯಾಯದ ವಿರುದ್ಧ ಸಂಘಟನಾತ್ಮಕವಾಗಿ 'ಪ್ರಜ್ಞೆ'ಯನ್ನು ಹೊಂದಿ ಮೇಲ್ವರ್ಗದ ಎದುರು ಸಮಾನತೆ ಬಯಸಿ, ಪ್ರತಿಭಟನಾತ್ಮಕ ಗುಣಗಳನ್ನು ಬೆಳೆಸಿಕೊಳ್ಳುತ್ತಿರುವುದು ಕಾದಂಬರಿಯ ಆಶಯವಾಗಿದೆ ಎನ್ನಬಹುದು.

ಮೇಲು ಜಾತಿಯವರ ತೋಟದಿಂದ ಹದಿನಾರು ಎಳನೀರು ಕದ್ದು ಪಂಚಾಯಿತಿ ಕಟ್ಟೆಯಲ್ಲಿ ನ್ಯಾಯ ತೀರ್ಮಾನದ ಸಲುವಾಗಿ ಗಾರಸಿದ್ದ್ಮಾವನಿಗೆ ಊರ ಗೌಡ ನೂರೊಂದು ರೂಪಾಯಿ ದಂಡ ವಿಧಿಸುತ್ತಾನೆ. ಆದರೆ ಅದನ್ನು ವಿರೋಧಿಸಿದ ಗಾರಸಿದ್ದ್ಮಾವನಿಗೆ ಊರ ಮುಖಂಡ ಹೊಡೆಯಲು ಹೋದಾಗ ದಲಿತ ಸಂಘದ ಮುಖಂಡ ನಾಗರಾಜು ಮೇಷ್ಟ್ರು ಮೇಲ್ವರ್ಗದವರ ದೌರ್ಜನ್ಯವನ್ನು ವಿರೋಧಿಸಿ ಪ್ರತಿಭಟಿಸುತ್ತಾನೆ. ಹೀಗೆ ಶೋಷಿತ ವರ್ಗಗಳ ಮನಸ್ಸುಗಳು ದೌರ್ಜನ್ಯದ ಎದುರು ಪ್ರತಿಭಟಿಸಬೇಕಾದರೆ ಒಗ್ಗೂಡಿ ಸಂಘಟನೆಯಾಗಿ ಹೋರಾಡಿದರೆ ಮಾತ್ರ ಸಾಧ್ಯ ಎಂಬುದನ್ನು ಮನಗಾಣಬಹುದು.

'ಕುಸುಮಬಾಲೆ' ಸಂಬಂಧದ ಕತೆ. ಈ ಸಂಬಂಧಗಳ ಜಟಿಲತೆ ಮತ್ತು ಅಗಾಧ ಪ್ರಮಾಣದ ಜೀವನಾಭಿಮುಖತೆಯು ಈ ಕಾದಂಬರಿಯಲ್ಲಿ ಗೋಚರವಾಗುತ್ತದೆ. ಇಲ್ಲಿ ಜನರು ಸಂಬಂಧಗಳನ್ನು ಉಳಿಸಿಕೊಳ್ಳಲು ಹೋರಾಡುವ ರೀತಿಗಳು, ಅವರೆಲ್ಲರನ್ನು ಕಟ್ಟಿ ಹಾಕುವ ನೆತ್ತರ ಸಂಬಂಧಗಳ ಸ್ವರೂಪ ದಟ್ಟವಾಗಿ ಚಿತ್ರಣಗೊಂಡಿದೆ. ತೂರಮ್ಮ ಮಗುವಿನ ಜೀವವನ್ನು ಕಾಪಾಡಿಕೊಳ್ಳಲು ಇಂದಿರಮ್ಮನೊಡನೆ ಹೋರಾಡುವ ಬಗೆ ಯಾಡನನ್ನು ಕಂಕುಳಲ್ಲಿ ಇರಿಸಿಕೊಂಡು ಅಕ್ಕಮಹಾದೇವಿ ಪಡುವ ಪರಿಪಾಟ ಇವುಗಳ ಜೊತೆಗೆ ಯಾಡ ಗಾರಸಿದ್ದ್ಮಾವ ಇವರು ಇಕ್ಕಟ್ಟಿನಿಂದ ಹೊರಬರಲು ತೋರುವ ಚಾಲಾಕುಗಳು ಒಂದೇ ಬಗೆಯವು. ಕುರಿಯಯ್ಯನ ನನ್ನಿಯ ತರ್ಕಾತೀತ ನೆಲೆಯಲ್ಲಿ ಸಮುದಾಯದ ಸದಸ್ಯರ ನಡುವೆ ರಕ್ತದ ಕತೆ ರೂಪುಗೊಳ್ಳುತ್ತದೆ. ಇದು ಕುಸುಮ ಬಾಲೆಯ ಎಳೆಗಳಾಗಿವೆ.

ಕುಸುಮಬಾಲೆ ಕಿರು ಕಾದಂಬರಿಯ ಪ್ರಕಟಣೆ ಇಂದಿನ ಸೃಜನಶೀಲ ಸಾಹಿತ್ಯದ ಒಂದು ಮಹತ್ತರ ಸಾಹಿತ್ಯಕ ಘಟನೆಯಾಗಿದೆ. ಅದರ ರಚನಾ ವಿಧಾನ, ಭಾಷೆಯ ಬಳಕೆ, ನಿರೂಪಣೆಯ ಸ್ವರೂಪ, ದೃಷ್ಟಿ-ಧೋರಣೆ ಇತ್ಯಾದಿಗಳಲ್ಲಿ ಹೊಸತನವಿದೆ. ತಾಜಾತನವಿದೆ;

[illegible]

ಜೊತೆಗೆ ವಿಲಕ್ಷಣ ಎನಿಸಬಹುದಾದಂಥ ಕೆಲವು ಅಂಶಗಳೂ ಇವೆ. ಆ ಕಾರಣಗಳಿಂದಾಗಿ ಕಾದಂಬರಿಯ ರೂಪ, ಸಂವಹನ, ಕೇಂದ್ರ ಪ್ರಜ್ಞೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಓದುಗರಿಗೆ, ವಿಮರ್ಶಕರಿಗೆ ಎದುರಾಗಿವೆ. ಅವು ಪ್ರಶಂಸೆ, ವಿಮರ್ಶೆ,ಟೀಕೆ ಹೀಗೆ ನಾನಾ ಬಗೆಯ ಪ್ರತಿಕ್ರಿಯೆಗಳನ್ನು ಹುಟ್ಟಿಸಿವೆ. ವಿಮರ್ಶೆಯ ಮಾನದಂಡಗಳನ್ನು ಹೊರಗಿನಿಂದ ಮಾತ್ರ ತಂದು ಅನ್ವಯಿಸಿ ನೋಡದೆ ಕೃತಿಯ ಒಳಗಿನಿಂದಲೂ ಪಡೆದು ವಿಸ್ತರಿಸಿಕೊಳ್ಳುವ ಅಗತ್ಯವನ್ನು ಕೃತಿ ಸೂಚಿಸುತ್ತದೆ, ಒತ್ತಾಯಿಸುತ್ತದೆ. ಈ ಸೂಚನೆ ಒತ್ತಾಯಗಳಿಗೆ ಸ್ಪಂದಿಸುವ ಸಂವೇದನಾಶೀಲತೆ ಕೃತಿಯನ್ನು ಅನುಭವಿಸಲು, ವ್ಯಾಖ್ಯಾನಿಸಲು ಅಗತ್ಯವಾಗುತ್ತದೆ.

'ಕುಸುಮಬಾಲೆ'ಯ ನಿರೂಪಣಾ ವಿಧಾನವು ವಿಶಿಷ್ಟವಾಗಿದೆ. ಒಂದು ನಿರ್ದಿಷ್ಟ ಕ್ರಮದಲ್ಲಿ, ಒಂದು ಕಾಲಾನುಕ್ರಮಾಣಿಕೆಯಲ್ಲಿ ಬೆಳೆಯುವ ಕಥೆ ಇಲ್ಲಿಲ್ಲ. ಬಿಡಿ ಬಿಡಿ ಘಟನೆ, ದಂತಕತೆ, ಪುರಾಣ ಹಾಗೂ ಕಥಾವಿವರಗಳು ಇಲ್ಲಿವೆ. ಅವು ಭೂತದಿಂದ ವರ್ತಮಾನಕ್ಕೆ, ವರ್ತಮಾನದಿಂದ ಭೂತಕಾಲಕ್ಕೆ ಸಲೀಸಾಗಿ ಹೊರಳಿಕೊಳ್ಳುತ್ತ, ತುಯ್ಯುತ್ತ ಸಾಗುವ ಬಗೆಯೂ ವಿಶಿಷ್ಟವಾಗಿದೆ.[೧] ಅವುಗಳಿಂದಾಗಿ ಕೃತಿಯಲ್ಲಿ ಒಂದು ಸಂಕೀರ್ಣ ಅನುಭವ ಪ್ರಪಂಚ ಸೃಷ್ಟಿಯಾಗಿದೆ. ಆ ಅನುಭವ ಪ್ರಪಂಚ ಒಂದು ಸಂಸ್ಕೃತಿ ಸಂದರ್ಭ ವನ್ನು ವಿಶಿಷ್ಟ ಬಗೆಯ ಕಲಾತ್ಮಕ ತರ್ಕದಲ್ಲಿ ಹಿಡಿದುಕೊಡಲು ಪ್ರಯತ್ನಿಸುತ್ತಿರುವುದು ಅನುಭವಕ್ಕೆ ಬರುತ್ತದೆ. ಸೃಜನಶೀಲತೆಯ ಸ್ವೋಪಜ್ಞವಾದ ಜಾಡೊಂದನ್ನು ಹುಡುಕುವ ಪ್ರೇರಣೆ ಈ ಪ್ರಯತ್ನದಿಂದ ಹಿಂದೆ ಇದೆ. ಡಾ. ಜಿ.ಎಸ್.ಅಮೂರ ಅವರು ಇಲ್ಲಿ ಕಂಡುಬರುವ ಒಂದು ಸಮುದಾಯದ ಸಂಸ್ಕೃತಿಯನ್ನು ಸಮಗ್ರವಾಗಿ ಗ್ರಹಿಸಿದವರು ವಿರಳ. ಹೋಲಿಕೆಗಳನ್ನು ಹುಡುಕುವುದೇ ಆದರೆ ವೋಲೆ ಷೋಯಿಂಕಾರಂಥಾ ಆಫ್ರಿಕನ್ ಲೇಖಕರ ಕೃತಿಗಳಲ್ಲಿಯೇ ಅದು ಸಾಧ್ಯವಾಗಬಹುದು ಎಂದಿದ್ದಾರೆ. ಜೊತೆಗೆ ಕನ್ನಡ ಕಾದಂಬರಿಯ ಪ್ರಾರಂಭದಿಂದಲೂ ಪಾಶ್ಚಾತ್ಯ ಸಾಹಿತ್ಯಗಳಿಗೆ ದೇಶೀಯ ಅನುಭವಕ್ಕೂ ನಡುವೆ ಹುಟ್ಟಿದ ಬಿಕ್ಕಟ್ಟನ್ನು ನಿವಾರಿಸುವಲ್ಲಿ 'ಕುಸುಮಬಾಲೆ' ಗಮನಾರ್ಹವಾದ ಯಶಸ್ಸನ್ನು ದೊರಕಿಸಿರುವುದರಿಂದ ಈ ದೃಷ್ಟಿಯಿಂದಲೂ ಅದು ಕನ್ನಡ ಕಾದಂಬರಿಯ ಬೆಳವಣಿಗೆಯ ಮೇಲೆ ಪ್ರಭಾವ ಬೀರಬಹುದು ಎಂದು ಅವರು ಹೇಳಿದ್ದಾರೆ. 'ಕುಸುಮಬಾಲೆ' ಕುರಿತ ಹೆಚ್ಚಿನ ಹೊಣೆಗಾರಿಕೆಯಿಂದ ನಡೆಯಬೇಕಾದದ್ದೆಂಬುದನ್ನಂತೂ ಈ ಮಾತುಗಳು ಸೂಚಿಸುತ್ತವೆ.

'ಕುಸುಮಬಾಲೆ'ಯಲ್ಲಿ ದಂತಕತೆ, ಪುರಾಣಗಳ ವಿಪುಲತೆಯೂ ಎದ್ದುಕಾಣುವ ಅಂಶಗಳಲ್ಲೊಂದಾಗಿದೆ. ಕೃತಿಯಲ್ಲಿ ವಿಚಿತ್ರವಾಗಿರುವ ಜನಸಮುದಾಯದ ಸಂಸ್ಕೃತಿಯ

---

೧. ದೇವನೂರ ಮಹಾದೇವ ಅವರ ಕೃತಿಗಳು – ದೇವನೂರ ಮಹಾದೇವ, ಪು. ೧೫೭

ಚರಿತ್ರೆಯನ್ನು ವಾಸ್ತವ ಘಟನಾವಳಿಗಳ ತರ್ಕಬದ್ಧ ಅರಿವಿನಲ್ಲಿ ಗ್ರಹಿಸುತ್ತ ಬೆಳೆಯ ಬಂದದ್ದೆಲ್ಲ, ಅದರ ಮನೋಭೂಮಿಕೆ ದಂತಕತೆ, ಪುರಾಣಗಳ ಪರಂಪರೆಯಿಂದ ಪೋಷಿತವಾಗುತ್ತ, ಪುಷ್ಟಿಪಡೆಯುತ್ತ ಬಂದಂಥದು. ಹೀಗೆ ಇರುವ ಸಮೂಹ ಸಂಸ್ಕೃತಿಯ ವರ್ತಮಾನದ ವಾಸ್ತವವನ್ನೂ ದಂತಕತೆ, ಪುರಾಣಗಳ ಮೂಲಕವೇ ವ್ಯಾಖ್ಯಾನಿಸಿಕೊಳ್ಳು–ವಂಥದಾಗಿರುವುದನ್ನು ದಂತಕಥೆಯ ಮೂಲಕ ಚನ್ನನನ್ನು ವೈಭವೀಕರಿಸುವುದರಲ್ಲಿ ಕಾಣಬಹುದು. ಈ ವೈಭವೀಕರಣದ ಹಿಂದೆ ಚನ್ನನ ಸಾವಿನ ದುರಂತವಿದೆ. ಮೇಲುಜಾತಿಯವರ ಕ್ರೌರ್ಯದ ಕುತಂತ್ರವಿದೆ. ದಲಿತ ಸಂಸ್ಕೃತಿಯ ಅದರ ಅರಿವಿಗೆ ಬಾರದ ಚನ್ನನ ದುರಂತದಂಥ ಕಠೋರ ವಾಸ್ತವವನ್ನು ಒಡಲಲಿಟ್ಟುಕೊಂಡಿದೆ ಎಂಬ ಸತ್ಯವನ್ನು ಈ ದಂತಕತೆಗಳ ಮೂಲಕ ಮಹಾದೇವ ಸೂಚಿಸುತ್ತಿರಬಹುದೇ? ಪರಿಭಾವಿಸಬೇಕಾದ ಅಂಶವಿದು. ಹದಿನಾರು ಎಳನೀರು ಕದ್ದ ಗಾರಸಿದ್ದಾವನನ್ನು ಶಿವಾಚಾರದವರು ನ್ಯಾಯಗಂಬಕ್ಕೆ ಕಟ್ಟಿಹಾಕಿ ಥಳಿಸುತ್ತಾರೆ. ಹಾಗೆ ಕಟ್ಟಿಹಾಕಿ ಥಳಿಸಿದ್ದು ತಪ್ಪು. ಅದು ಮೇಲುಜಾತಿಯವರು ಕಾನೂನು ಕೈಗೆತ್ತಿಕೊಂಡು ನಡೆಸಿದ ದಬ್ಬಾಳಿಕೆ, ದಲಿತನ ಮೇಲೆ ನಡೆದ ದೌರ್ಜನ್ಯ ಎಂಬ ಅಭಿಪ್ರಾಯ ದಲಿತ ಸಂಘದ ನಾಗರಾಜನದು. ಆದರೆ ದಬ್ಬಾಳಿಕೆ, ದೌರ್ಜನ್ಯಗಳಿಗೆ ಈಡಾದ ಗಾರಸಿದ್ದಾವನಿಗೆ ದಬ್ಬಾಳಿಕೆ, ದೌರ್ಜನ್ಯಗಳ ತೀವ್ರತೆ ತಟ್ಟುವುದಿಲ್ಲ. ಅದು ಅವನಿಗೆ ಅಷ್ಟೇನೂ ಮನಸ್ಸಿಗೆ ಹಚ್ಚಿಕೊಳ್ಳಬಹುದಾದ ಸಂಗತಿಯಲ್ಲ. ಅದೊಂದು ದೈನಿಕದ ವ್ಯವಹಾರದಂಥ ಸಾಮಾನ್ಯ ಘಟನೆ. ಅದು ಅವನಿಗೆ ಶೋಷಣೆಯ ಅವಮಾನದ ಸಂಗತಿಯಾಗಿ ಕಾಣಿಸುವುದಿಲ್ಲ. ಆ ದೌರ್ಜನ್ಯವನ್ನು ತನ್ನ ಪೌರುಷ ಕೊಚ್ಚಿಕೊಳ್ಳುವುದಕ್ಕೆ ವಸ್ತುವಾಗಿ ಅವನು ಬಳಸಿಕೊಳ್ಳುತ್ತಾನೆ. ಇಲ್ಲಿ ಹೊಸ ಸಾಮಾಜಿಕ ಪ್ರಜ್ಞೆ ಕಾಣುವ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳು ಸ್ವತಃ ಅವುಗಳಿಗೆ ಬಲಿಯಾಗುತ್ತಿರುವ ದಲಿತರ ಸಂವೇದನಾ ಸೀಮೆಯೊಳಗೆ ದಾಖಲಾಗದೆ ಹೋಗುವ ವಿಸಂಗತ ಮತ್ತು ದುರಂತ ಇವು ಸಂವೇದನಾಶೀಲ ಓದುಗರ ಅನುಭವಕ್ಕೆ ಬರುತ್ತವೆ.

ಗಾರಸಿದ್ದಾವನಂಥವನು ಅನ್ಯಾಯ, ಶೋಷಣೆ, ದಬ್ಬಾಳಿಕೆಗಳನ್ನು ತನ್ನ ವೈಯಕ್ತಿಕ ಪೌರುಷ ಕೊಚ್ಚಿಕೊಳ್ಳುವುದಕ್ಕೆ ಕಾರಣವಾದ ಸಂಗತಿಗಳಾಗಿ ಬಳಸಿಕೊಂಡರೆ ಕುರಿಯಯ್ಯನಂಥವನ ನನ್ನಿಯು ತಮ್ಮವರ ಅಂದರೆ ಶೋಷಿತ ಜನ ಸಮೂಹದವರ ಪೌರುಷ ಕೊಚ್ಚಿಕೊಳ್ಳುವ ಸಂಗತಿಯಾಗಿ ವ್ಯಾಖ್ಯಾನಿಸುತ್ತದೆ. ಅವುಗಳ ದುರಂತಕ್ಕೆ ಯಾತನೆ ಅಥವಾ ಅನುಮಾನದ ಅಲಗಿನ ತಿವಿತಕ್ಕೆ ಅವರು ಸಂವೇದನಾಜಡರಾಗಿರುತ್ತಾರೆ. ಈ ಸಂವೇದನಾ ಜಡತೆ ಅವರಾಗಿ ತಂದುಕೊಂಡದ್ದಲ್ಲ; ಚರಿತ್ರೆ ಅವರಿಗೆ ಅಸಹಾಯಕತೆಯ ಒತ್ತಡದಲ್ಲಿ ಅನಿವಾರ್ಯವಾಗಿಸಿದ್ದು, ಹೀಗೆ ಸಂವೇದನಾ ಜಡರಾಗಿರದಿದ್ದರೆ ತಮ್ಮ ನತದೃಷ್ಟ, ಅವಸ್ಥೆಯನ್ನು ವೈಭವೀಕರಿಸಿಕೊಳ್ಳುವ ಅಸಾಮಾನ್ಯ ಮನಸ್ಥಿತಿಯನ್ನು ರೂಢಿಸಿಕೊಂಡಿರದಿದ್ದರೆ ಈಗಿರುವಂತೆ ಬದುಕಿಕೊಂಡು ಬರುವುದಕ್ಕೂ ಸಾಧ್ಯವಾಗದಂಥ ಸಾಮಾಜಿಕ ವ್ಯವಸ್ಥೆ ಈ

[illegible]

[illegible]

[illegible]

ದೇಶದಲ್ಲಿ ಇತ್ತು. ಇದು ಈಗಲೂ ಮುಂದುವರೆಯುತ್ತಲಿದೆ. (ಸಂಗತಿಗಳನ್ನು ದಂತಕತೆ, ಪುರಾಣಗಳನ್ನಾಗಿ ಪರಿವರ್ತಿಸಿಕೊಳ್ಳುವ ಮನಃಪ್ರವೃತ್ತಿಯನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬಹುದು). ಈ ಬಗೆಯ ಸಂವೇದನಾ ಜಡತೆ ಹಾಗೂ ನತದೃಷ್ಟ ಅವಸ್ಥೆಯನ್ನು ವೈಭವೀಕರಿಸುವ ಪ್ರವೃತ್ತಿ ಇವುಗಳೇ ಶತಮಾನಗಳ ಕಾಲದ ದಲಿತ ಜನಸಮೂಹದ ಜೀವಧಾರಣೆ, ಸತ್ವಾಂಶಗಳೆಂಬಂತೆ ಆಗಿರುವುದೊಂದು ವ್ಯಂಗ್ಯ. ಇದು ಸಂಸ್ಕೃತಿಯ ದುರಂತ.

ಗಾರಸಿದ್ಮಾವ, ಕುರಿಯಯ್ಯನಂಥ ದಲಿತ ಸಾಮಾನ್ಯರಿಗೆ ಮಾತ್ರವಲ್ಲ, ಮೇಲ್ಜಾತಿಯ ಸಾಮಾನ್ಯರಿಗೂ ಈ ದುರಂತದ ವ್ಯಂಗ್ಯದ ಅರಿವು ಇಲ್ಲ. ಗಾರಸಿದ್ಮಾವನನ್ನು ಕಂಬಕ್ಕೆ ಕಟ್ಟಿ ಹೊಡೆದ ಸಂದರ್ಭದಲ್ಲಿ ಲಿಂಗಾಯಿತರ ಕಡೆಯ 'ಮೊಕಂಡ'ನು 'ಮೇಷ್ಟ್ರಾ .... ಜೋಲ್ಗೆ ಬಳಗ ಕಿತ್ತು ಬೀಜ ಸುಳ್ಳಿನ ಮಳೆ ತುಂಬ್ಕಂಡು ಅದಾ ನೀತು ಕಂಡು ಊರೊರ್ ಮ್ಯಾಲ ತಿರುಗ್ತಾ ಅಣ್ಣಾ ತಮ್ಮಂದಿರ ಥರಾ ಇರೋರ ಎಕ್ಕುಟ್ಸಿ ಊರ ಹಾಳ್ಮಾಡಕ ಅಂತಾ ಬಂದ್ಯಾ.....'[೧] ಹೊಸ ಸಾಮಾಜಿಕ ಪ್ರಜ್ಞೆಯ ಮಧ್ಯೆ ಪ್ರವೇಶಕ್ಕೆ ಮೇಲ್ಜಾತಿಯವರ ಸ್ಥಳೀಯ ಸಂಸ್ಕೃತಿಯ ಪ್ರತಿಕ್ರಿಯೆ, ಪ್ರತಿಭಟನೆ ಈ ಮಾತುಗಳಲ್ಲಿ ವ್ಯಕ್ತವಾಗಿದೆ. ಜೊತೆಗೆ ದಲಿತರ ಮೇಲೆ ಅವರು ಎಸಗುವ ದೌರ್ಜನ್ಯದ ಬಗೆ ಅವರೂ ಸಂವೇದನಾ ಜಡರಾಗಿರುವುದು ಸೂಚಿತವಾಗಿದೆ.

ದಲಿತ ಸಾಮಾನ್ಯರ ಸಂವೇದನಾ ಜಡತೆಯ ಅರಿವು ದಲಿತ ಸಂಘದ ವಿದ್ಯಾವಂತ ಯುವಕರಿಗೆ ಇದೆ. ವಿಚಾರವಾದ ಮತ್ತು ತರ್ಕದ ನೆಲೆಯಲ್ಲಿ ಮಾತ್ರ ಅದು ಅವರ ಅರಿವಿಗೆ ಬಂದಿದೆ. ಗಾರಸಿದ್ಮಾವ, ಕುರಿಯಯ್ಯ, ಚನ್ನನ ಅಪ್ಪನಂಥವರಿಗೆ ವಿದ್ಯಾವಂತ ಯುವಕರ ಈ ಅರಿವು ಗಂಭೀರವಾಗಿ ಪರಿಗಣಿಸಬೇಕಾದ್ದೆಂದು ಅನಿಸುವುದಿಲ್ಲ. ಅಂದರೆ ಅವರ ಮತ್ತು ಇವರ ನಡುವೆ ಸಂವಹನ ಕಂದಕ ಇದೆ. ಇದು ಹಾಲಿ ಇರುವ ಸಂಸ್ಕೃತಿ ಸಂದರ್ಭದಲ್ಲಿ ಬದುಕುತ್ತಿರುವವರ ಮನೋಭೂಮಿಕೆಗೂ ಇರಬೇಕಾದ ಹೊಸ ಸಂಸ್ಕೃತಿ ಸಂದರ್ಭವನ್ನು ಹೋರಾಡಿ ನಿರ್ಮಿಸಲು ಹಾತೊರೆಯುತ್ತಿರುವ ವಿದ್ಯಾವಂತ ದಲಿತ ಯುವಕರು ಇತಿಹಾಸ ಪ್ರಜ್ಞೆ ಮತ್ತು ವಿಚಾರವಾದಗಳ ಜ್ಞಾನ ಇವುಗಳ ಮೂಲಕ ಪಡೆದ ಹೊಸ ಸಾಮಾಜಿಕ ಪ್ರಜ್ಞೆಯ ಮನೋಭೂಮಿಕೆಗೂ ಇರುವಂಥ ದುರಂತ ವಿಸಂಗತಿಯನ್ನು ಸೂಚಿಸುತ್ತದೆ. ಆ ಮೂಲಕ ದಲಿತ ಸಂಘದವರ ಸಾಮಾಜಿಕ ನ್ಯಾಯದ ಪರವಾದ ಹೋರಾಟದ ಯಶಸ್ಸಿನ ಗತಿಯನ್ನು ನಿಯಂತ್ರಿಸುತ್ತಿರುವಂಥ ಹಾಗೂ ದಲಿತರು ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳಿಂದ ಬಿಡುಗಡೆ ಪಡೆಯುವ ಅವಕಾಶದಿಂದ ಕಾಲವಂಚಿತ–ರಾಗುತ್ತಿರುವಂಥ ವಸ್ತುಸ್ಥಿತಿಯ ಬಿಕ್ಕಟ್ಟಿನ ಅರಿವನ್ನು ಮೂಡಿಸುತ್ತದೆ.

---

೧. ದೇವನೂರ ಮಹಾದೇವ ಅವರ ಕೃತಿಗಳು – ದೇವನೂರ ಮಹಾದೇವ, ಪು. ೫೬

[illegible]

[illegible]

[illegible]

ಈ ಸಂವೇದನಾ ವಿಸಂಗತಿಯ ದುರಂತ ಕಾದಂಬರಿಯೊಳಗಿನ ಪಾತ್ರಗಳ ಪ್ರಜ್ಞೆಯ ನೆಲೆಯಲ್ಲಿ ಮಾತ್ರ ಇರುವಂಥದ್ದು. ನಮ್ಮ ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಓದುಗರ ಪ್ರಜ್ಞೆಯ ನೆಲೆಯಲ್ಲಿಯೂ ಇರುವಂಥದ್ದೇ. ದಲಿತರ ಮೇಲೆ ಆಗುತ್ತಿರುವ ದೌರ್ಜನ್ಯ ಶೋಷಣೆಗಳಿಗೆ ಅವು ಸಹಜ ವಾಸ್ತವ ದೈನಿಕ ಸಂಗತಿಗಳೆಂದು ಮಾತ್ರ ಪರಿಗಣಿಸುವುದು ಅಭ್ಯಾಸವಾಗಿ ಹೋಗಿರುವ ಸಂವೇದನಾಜಡರು ಹಾಗೂ ಅವು ಸಾಮಾಜಿಕ ನ್ಯಾಯ ಮತ್ತು ಮಾನವೀಯ ನಡಾವಳಿಕೆಗಳ ಉಲ್ಲಂಘನೆ ಎಂದು ತಿಳಿಯುವ ಮಾನವೀಯ ತುಡಿತಗಳು ಜೀವಂತವಾಗಿರುವ ಸಂವೇದನಾಶೀಲರು. ಹೀಗೆ ಎರಡೂ ಬಗೆಯ ಮನೋಭೂಮಿಕೆ ಉಳ್ಳವರು ಓದುಗರಲ್ಲಿಯೂ ಇದ್ದಾರೆ. ಈ ಓದುಗರು ದಲಿತರೇ ಆಗಬೇಕಾದ್ದಿಲ್ಲ. ಈ ಓದುಗರು ದಲಿತ ಸಾಮಾನ್ಯರು ಮತ್ತು ದಲಿತ ಸಂಘದವರಂಥ ಶೋಷಣೆಗೆ ಈಡಾಗಿರುವ ಜನಸಮುದಾಯಕ್ಕೆ ಸೇರಿದ ಒಳಗಿನವರಾಗಿರಬಹುದು ಅಥವಾ ಮೇಲ್ಜಾತಿಯ ಸಾಮಾನ್ಯರು ಮತ್ತು ಸಮಾಜವಾದಿ ಮಾನವತಾವಾದಿ ಸಂವೇದನಾಶೀಲರಾಗಿರುವಂಥ ಶೋಷಣೆಗೆ ಈಡಾಗಿರುವ ಜನಸಮುದಾಯಕ್ಕೆ ಹೊರಗಿನವರಾಗಿರುವವರು. ಅಂದರೆ ಶೋಷಣೆ ಮಾಡಬಹುದಾದ ಮೇಲ್ಜಾತಿಗೆ ಸೇರಿದವರಾಗಿರಬಹುದು.

'ಜೋತಮ್ಮ ಮೈದುಂಬಿದಾಗ ಕುರಿಯಯ್ಯ ಕಾಣುವ ತಲತಲಾಂತರದ ನನ್ನಿ ಕೂಡಾ ಮೇಲು–ಕೆಳವರ್ಗಗಳ ಗಂಡುಹೆಣ್ಣುಗಳು ಕೂಡುವ ನಿರಂತರ ಸತ್ಯವಾದ ಗಂಡುಹೆಣ್ಣಿನ ಜಾತಿಜಾತಿಗಳ ಸಂಬಂಧಗಳ ಹಿನ್ನೆಲೆಯಲ್ಲಿ ಕೆದಕಿನೋಡುವ ಪ್ರಯತ್ನವಿದೆ.[೧] ಕಥೆಯ ಒಟ್ಟು ತುಡಿತವನ್ನು ನೋಡಿದರೆ ಈ ತಲತಲಾಂತರದ ನನ್ನಿ ಕೃತಿಗೆ ಮುಖ್ಯವಾಗಿರಬೇಕೆಂಬುದು ಮಹಾದೇವರ ಉದ್ದೇಶವಾಗಿತ್ತು ಎನಿಸುತ್ತದೆ. ವರ್ತಮಾನದ ವ್ಯವಸ್ಥೆಯ ಹಿನ್ನೆಲೆಯಲ್ಲಿ ಮಾತ್ರ ಜಾತಿಗಳನ್ನು ಅರ್ಥಮಾಡಿಕೊಳ್ಳುವವರ ತಿಳುವಳಿಕೆಗಿಂತ ಈ ತಲತಲಾಂತರದ ನನ್ನಿಯನ್ನೇ ಮಹಾದೇವರು ಇತ್ಯಾತ್ಮಕವಾಗಿ ನೋಡುವಂತೆ ಕಾಣುತ್ತದೆ. ಜಾತಿಯ ಪ್ರಶ್ನೆ ರಕ್ತದ ನೆನಪಿಗೆ ಸಂಬಂಧಿಸಿದ್ದಾದ್ದರಿಂದ ಅದನ್ನು ತರ್ಕದಿಂದ ಅಳೆಯುವುದಾಗಲೀ, ಅರ್ಥಮಾಡಿಕೊಳ್ಳುವುದಾಗಲೀ ಸಾಧ್ಯವಿಲ್ಲವೆಂಬುದನ್ನು ಈ ಮೂಲಕ ಅವರು ಸೂಚಿಸುತ್ತಿರಬಹುದು. ಆದರೆ ಕುರಿಯಯ್ಯನ ಕಾಲಕ್ಕೆ ಕಾದಂಬರಿಯ ಉಳಿದ ಭಾಗಗಳಿಗೆ ಹೋಲಿಸಿದರೆ ದುರ್ಬಲವಾಗಿರುವುದರಿಂದ ಮತ್ತು ಕಾದಂಬರಿಯ ಎಲ್ಲ ಎಳೆಗಳಿಗೂ ಅರ್ಥಕೊಡುವಂತಹ ಸತ್ವ ಅದಕ್ಕೆ ಇಲ್ಲದಿರುವುದರಿಂದ ತಲತಲಾಂತರದ ನನ್ನಿ ಹೆಚ್ಚಿನದೇನನ್ನೂ ಸಾಧಿಸುವುದಿಲ್ಲ.

---

೧. ಯಾರ ಜಪ್ತಿಗೂ ಸಿಗದ ನವಿಲುಗಳು, ಸ.ವಿ.ಚಂದ್ರಿಕಾ, ಪು. ೧೧೬

ಮನುಷ್ಯ ಮನುಷ್ಯರನ್ನು ದ್ವೇಷಿಸಲು ಏನಾದರೂ ಕಾರಣವಿರಲೇಬೇಕು. ವಿನಾಕಾರಣ ಯಾರೂ ಯಾರನ್ನೂ ದ್ವೇಷಿಸುವುದಿಲ್ಲ. ಹಾಗಾದರೆ ಹೊಲೆ ಮಾದಿಗರನ್ನು ಮೇಲ್ಜಾತಿಯವರು ಶತ್ರುಗಳ ಹಾಗೆ ಭಾವಿಸಲು ಕಾರಣವೇನು? ಈ ಪ್ರಶ್ನೆ ಕಾದಂಬರಿಕಾರರನ್ನು ಬಲವಾಗಿ ಕಾಡಿದೆ. ಅದಕ್ಕೆ ಉತ್ತರ ಎನ್ನುವಂತೆ ಬಂದಿರುವ ಊಹೆ ಸಮಂಜಸವಾಗಿ ಕಾಣದು. ಮೇಲ್ಜಾತಿಯವರ ಬಗೆಗಿನ ಈ ಕಲ್ಪನೆ (ನನ್ನಿಯ ಪ್ರಸಂಗದ ಕಲ್ಪನೆ) ತಮ್ಮ ಮಕ್ಕಳನ್ನು ಕೆಡೆಸಿದವರನ್ನು ಕೇವಲ ಊರಾಚೆ ಇಬ್ಬರೂ ಅದರಿಂದಲೇ ಅವರು ಒಳ್ಳೆಯವರು ಎನ್ನುವ ತೀರ್ಮಾನವನ್ನು ಸ್ವೀಕರಿಸುವುದು ಕಷ್ಟ. ಇದು ಇತಿಹಾಸದ ಹಿನ್ನೆಡೆ; ತಿರುವು ಮುರುವು ಈ ಬಗೆಗಿನ ಚರ್ಚೆಗೆ ಜಿಜ್ಞಾಸೆಗೆ ಅವಕಾಶವಿದೆ.

ಅಧ್ಯಾಯ ಮೂರು

ಚೋಮನದುಡಿ ಮತ್ತು ಕುಸುಮಬಾಲೆ ಕಾದಂಬರಿಗಳ ವಸ್ತು ಪರಿಶೀಲನೆ, ಪಾತ್ರ ವಿಶ್ಲೇಷಣೆ ಸಾಮಾಜಿಕ – ಸಾಂಸ್ಕೃತಿಕ ನೆಲೆಯಲ್ಲಿ

ಚೋಮನದುಡಿ

ವಸ್ತುಪರಿಶೀಲನೆ

ಈ ಕಾದಂಬರಿ ಮುಖ್ಯವಾಗಿ ದಲಿತ ಬದುಕಿನ ಚಿತ್ರಣ, ಇಡೀ ಕಥೆ ದಲಿತ ಕುಟುಂಬದ ಕಥೆ ಆಗಿರುವುದರಿಂದ ಮನ್ವೇಲ, ಮಿಂಗೇಲ, ಸಂಕಪ್ಪಯ್ಯ ಅವರ ವೈಯಕ್ತಿಕ ಜೀವನದ ವಿವರಗಳಿಗೆ ಕಾರಂತರು ಹೋಗುವುದಿಲ್ಲ. ಆದ್ದರಿಂದ ಕಾದಂಬರಿಯ ಸಾವಯವ ಸಮಗ್ರೀಕರಣ, ಶಿಲ್ಪ, ಬಂಧ ಬಹಳ ಚೆನ್ನಾಗಿ ಮೂಡಿ ಬಂದಿದೆ. ಇಲ್ಲಿನ ದಲಿತ ಸಂವೇದನೆ ದಲಿತೇತರ ಲೇಖಕನಲ್ಲಿ ಆಶ್ಚರ್ಯಕರ ರೀತಿಯಲ್ಲಿ ಮೂಡಿಬಂದಿದೆ. ಇದೇ ರೀತಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿನ ದಲಿತ ಸಂವೇದನೆ ಅತ್ಯಂತ ನೈಜವಾಗಿ ಮೂಡಿಬಂದಿದೆ ಎಂದು ದಲಿತ ಲೇಖಕರೇ ಬರೆದಿದ್ದಾರೆ. ಇದೇ ವಸ್ತುವನ್ನು ದಲಿತ ಲೇಖಕನೆ ಬರೆದಿದ್ದರೆ ಇನ್ನೂ ಸೂಕ್ಷ್ಮವಾಗುತ್ತದೆ. ಹಾಗೆಯೇ ಭಾಷೆಯಲ್ಲಿ ಬದಲಾವಣೆ ಆಗುತ್ತದೆ. ಚೋಮನನ್ನು ಕುರಿತು ದಲಿತ ಲೇಖಕ ಬರೆದಾಗ, ಅದು ಅವನದೇ ಕಥೆ ಆಗಿರುತ್ತದೆ. ಏಕೆಂದರೆ ಆ ಬದುಕನ್ನು ಅವನೇ ಅನುಭವಿಸಿ ಬರೆದಿರುತ್ತಾನೆ. ಕಾದಂಬರಿಯ ಪಾತ್ರಕ್ಕೂ ಅವನಿಗೂ ನಿಕಟ ಸಂಬಂಧ ಇರುತ್ತದೆ. ಆದರೆ ಕಾರಂತರು ಇಲ್ಲಿನ ಪಾತ್ರಕ್ಕೆ ದೂರವಿರುತ್ತಾರೆ. ಆದ್ದರಿಂದ ಸಹಜವಾಗಿಯೇ ಭಾಷೆಯ ಅಭಿವ್ಯಕ್ತಿ ಭಿನ್ನವಾಗಿರುತ್ತದೆ. ಆದರೂ ಕೂಡ ದಲಿತ ಜೀವನವನ್ನು ದಲಿತೇತರ ಲೇಖಕ ತುಂಬ ಸಮರ್ಥವಾಗಿ ಕೊಡಬಲ್ಲ ಎನ್ನುವುದಕ್ಕೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಮತ್ತು ಕಾರಂತರ 'ಚೋಮನದುಡಿ' ಕಾದಂಬರಿಗಳು ಸ್ಪಷ್ಟ ನಿದರ್ಶನಗಳು ಇವಕ್ಕೆ ನೂರು ವರ್ಷ ಕಳೆದರೂ ಇವೊತ್ತಿನ ಸ್ಥಾನಮಾನ ಇದ್ದೇ ಇರುತ್ತದೆ.

ಈ ಕಾದಂಬರಿಯಲ್ಲಿ ಜಾತಿ ಮತ್ತು ವರ್ಗ ಸಂಘರ್ಷಗಳೆರಡೂ ಮಿಳಿತ–ವಾಗಿರುವುದು ಕಂಡುಬರುತ್ತದೆ. ಹೇಗೆಂದರೆ ಚೋಮ ಜಾತಿ ಸಂಘರ್ಷಕ್ಕೆ ಸಂಕೇತವಾದರೆ, ಇಲ್ಲಿನ ಸಂಕಪ್ಪಯ್ಯ ವರ್ಗ ಸಂಘರ್ಷಕ್ಕೆ ಕಾರಣವಾಗಿದ್ದಾನೆ. ಆದ್ದರಿಂದ ಈ ಕೃತಿ ಜಾತಿ ಮತ್ತು ವರ್ಗ ಸಂಘರ್ಷವನ್ನು ಬಹಳ ಸೂಕ್ಷ್ಮವಾಗಿ ತನ್ನ ಕಲೆಯ ಒಡಲಲ್ಲಿ ಅಡಗಿಸಿಟ್ಟುಕೊಂಡಿದೆ. ಆದ್ದರಿಂದ ಇದು ಸಮತಾವಾದಿ ನೆಲೆಯಲ್ಲಿ ರಚಿತವಾದ ಕೃತಿ. ಇಲ್ಲಿನ ಕೂಲಿಕಾರ ಚೋಮ ಜಮೀನ್ದಾರಿ ವ್ಯವಸ್ಥೆಯನ್ನು ಒಡೆಯಬೇಕು ಎಂದು ಯೋಚಿಸುತ್ತಿರುವುದರಿಂದ ಈ ಮಾತನ್ನು ಹೇಳಬಹುದು.

ಈ ಕಾದಂಬರಿಯ ಅಧ್ಯಾಯಗಳು ೧೮ ಇರುವುದರಿಂದ ಮಹಾಭಾರತದ ೧೮ ಅಧ್ಯಾಯಗಳಂತೆ ಇದು 'ದಲಿತ ಭಾರತ' ಎಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ ಇಲ್ಲಿ ದಲಿತ ಭಾರತದ ಚಿತ್ರಣವನ್ನು ಕಾಣಬಹುದು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಪ್ರಕಟಗೊಂಡಾಗ ಪಿ.ಲಂಕೇಶ್ ಈ ಕಾದಂಬರಿಯನ್ನು ಕುರಿತು 'ದಲಿತ ದಿಗ್ವಿಜಯ' ಎಂದು ಬರೆದಿದ್ದರು. ಈ ಮಾತು 'ಚೋಮನದುಡಿ' ಕಾದಂಬರಿಗೂ ಅನ್ವಯವಾಗುತ್ತದೆ. ಚೋಮ ಆ ವರ್ಗದ ಜನರ ಪ್ರಾತಿನಿಧಿಕ ವ್ಯಕ್ತಿಯಾಗಿ ಬರುವುದರಿಂದ ದಲಿತ ಭಾರತದ ಒಂದು ಸಾಂಕೇತಿಕ ರೀತಿಯಲ್ಲಿ ಕೃತಿ ಕೆಲಸಮಾಡುತ್ತದೆ.[೧]

ಚೋಮ ಬೇಸಾಯಗಾರನಾಗಬೇಕೆಂಬ ಕನಸನ್ನು ನನಸು ಮಾಡಿಕೊಳ್ಳದಿದ್ದರೂ ಕೂಡ ವ್ಯವಸ್ಥೆಯ ಜೊತೆ ಬಹಳ ಮೌನವಾಗಿ ಹೋರಾಟ ಮಾಡುತ್ತಾನೆ. ಏಕೆಂದರೆ ಪ್ರತಿಬಾರಿಯು ಚೋಮ ಗೇಣಿಗೋಸ್ಕರವಾಗಿ ಸ್ವತಂತ್ರವಾಗಿ ಭೂಮಿ ಪಡೆಯಬೇಕು ಎಂದು ಹೇಳುವಾಗಲೆಲ್ಲ ಘರ್ಷಣೆಗೆ ಇಳಿಯದಿದ್ದರೂ, ಹೋರಾಟದ ಮನೋಭಾವ ವೈಯಕ್ತಿಕ ಹಂತದಲ್ಲಿ ಹಾಗೂ ಸಾಮಾಜಿಕ ಹಂತದಲ್ಲಿ ತುಂಬ ಸೂಕ್ಷ್ಮವಾಗಿ ವ್ಯಕ್ತಮಾಡುವುದಿದೆ. ಈ ಹಿನ್ನೆಲೆಯಲ್ಲಿ ಚೋಮನಿಗೆ ಗೊತ್ತಾಗದ ಹಾಗೆ ಹೋರಾಟದ ಪ್ರಕ್ರಿಯೆ ರೂಪುಗೊಳ್ಳುತ್ತದೆ. ಇದರಿಂದ ಇದೇ ಸಮಾಜವ್ಯವಸ್ಥೆ ಬದಲಾವಣೆ ಆಗದಿದ್ದರೂ, ಸಂಕಪ್ಪಯ್ಯ ನಂತಹ ಜಮೀನ್ದಾರ ಚೋಮನಿಗೆ ಭೂಮಿಕೊಡಲು ತನ್ನ ಅಡ್ಡಿಯೇನೂ ಇಲ್ಲ ಎನ್ನುವಷ್ಟರಮಟ್ಟಿಗೆ ಅವನ ಹೋರಾಟ ಕೆಲಸ ಮಾಡಿದೆ. ಮುಂದಿನ ದಿನಗಳಲ್ಲಿ ಹೋರಾಟ ಸಾಧ್ಯವಾಗದಿದ್ದರೂ ಭೂಮಿಯನ್ನು ಪಡೆಯಲು ಜೀವನವನ್ನು ತ್ಯಾಗಮಾಡುವುದಕ್ಕೆ ಹೊರಟಿದ್ದಾನೆ.

ಇಡೀ ಕಾದಂಬರಿಯಲ್ಲಿ ಚೋಮ ಪಂಜೂರ್ಲಿ ಭೂತದ ಗುಡಿಯಿಂದ ವಾಪಸ್ಸು ಬಂದದ್ದು ಒಂದೇ ಬಾರಿ. ಪ್ರಾಯಶಃ ಮುಂದೆ ಹಿಂದಿರುಗಿದ ಮೇಲೆ ತನ್ನ ನಿಲುವಿನಲ್ಲಿ ಮತ್ತೆ ಮತ್ತೆ ಮತಾಂತರದ ಬಗ್ಗೆ ತಾಕಲಾಟವನ್ನು ಮಾಡುತ್ತಿದ್ದನೇನೊ ಎನ್ನಿಸುತ್ತದೆ. ಏಕೆಂದರೆ ಚೋಮ, ಬೆಳ್ಳಿ ಮತ್ತು ಮನ್ವೇಲರಿಬ್ಬರು ಒಂದೇ ಚಾಪೆಯಲ್ಲಿ ಕುಳಿತು ಮಾತನಾಡುತ್ತಿದ್ದುದನ್ನು ನೋಡದೆ ಹೋಗದಿದ್ದರೆ, ಮುಂದೆ ಮತಾಂತರದ ಆತನ ನಿಲುವಿನಲ್ಲಿ ಬದಲಾವಣೆ ಆಗುತ್ತಿತ್ತು. ಏಕೆಂದರೆ ತನ್ನ ಕುಟುಂಬದ ಎಲ್ಲಾ ಸರ್ವಸ್ವವನ್ನು ಮತ್ತು ಸರ್ವನಾಣ್ಯಗಳನ್ನು 'ಬೆಳ್ಳಿ' ಎಂಬ ಬ್ಯಾಂಕಿನಲ್ಲಿ ಇಟ್ಟಿದ್ದ. ಅಂತಹ ಬೆಳ್ಳಿಯೇ ದಿವಾಳಿಯಾದದ್ದರಿಂದ ಅವನಿಗೆ ಬೇರೆ ಮಾರ್ಗ ಇರಲಿಲ್ಲ. ಅವನು ಚನಿಯ, ಗುರುವ, ನೀಲ ಮತ್ತು ಕಾಳರನ್ನು ಕಳೆದುಕೊಳ್ಳಬಹುದು. ಆದರೆ ಬೆಳ್ಳಿಯನ್ನು ಕಳೆದುಕೊಳ್ಳುವುದಕ್ಕೆ

---

೧. ಷಷ್ಟಿ ಸಂಪದ, ಡಾ. ರಾಗೌ, ಪು. ೧೧೫-೧೧೬

ಅವನಿಗೆ ಇಷ್ಟವಿರಲಿಲ್ಲ. ಬೆಳ್ಳಿಯು ಸಹ ತನ್ನ ತಂದೆಯ ಜೊತೆ ಪ್ರೀತಿ ವಿಶ್ವಾಸದಿಂದ ನಡೆದುಕೊಂಡಿರುತ್ತಾಳೆ.

ಇಂತಹ ಪ್ರೀತಿಯ ಮಗಳು ಅನೈತಿಕ ಲೈಂಗಿಕ ವ್ಯವಹಾರಗಳಿಗೆ ಇಳಿದಾಗ ಅವನಿಗೆ ಹೆಚ್ಚು ಆಘಾತವಾಗುತ್ತದೆ. ಅವನು ತನ್ನ ಶ್ರಮನಿವಾರಣೆಗೆ ಕುಡಿಯುವುದು ಮತ್ತು ದುಡಿಯುವುದು, ಬಡಿಯುವುದು ಮಾಡುತ್ತಾನೆ. ಆದರೆ ಅನೈತಿಕ ವ್ಯವಹಾರ ಕುರಿತಾದ ಚೋಮನ ನಿಲುವು ತುಂಬ ಖಚಿತವಾಗಿರುತ್ತದೆ. ಆ ವಿಷಯದಲ್ಲಿ ಅವನು 'ಕಾಂಪ್ರಮೈಸ್' ಮಾಡಿಕೊಳ್ಳುವುದಕ್ಕೆ ಸಿದ್ಧನಿರಲಿಲ್ಲ. ಆದ್ದರಿಂದ ಚೋಮದುಡಿಯನ್ನು ಎತ್ತುಕೊಂಡಿದ್ದು, ಪಂಜುರ್ಲಿಭೂತದ ಗುಡಿಯಿಂದ ವಾಪಸ್ಸು ಬಂದ ಎನ್ನುವ ಕಾರಣಕ್ಕಾಗಿ ಅಲ್ಲ. ಹಾಗೆಯೇ ಚೋಮ ಪ್ರಾಣಬಿಡಲು ಕಾರಣ ಬೆಳ್ಳಿ ಆ ರೀತಿ ಅನೈತಿಕ ಮಾರ್ಗದಲ್ಲಿ ತೊಡಗಿದ್ದರಿಂದ.

ಚೋಮ ಮೊದಲನೆಯ ಬಾರಿ ಪಂಜುರ್ಲಿ ಗುಡಿಗೆ ಹೋಗಿದ್ದಕ್ಕೆ ಭೂತ ಆ ರೀತಿ ಹೇಳಿರಬಹುದು. ಆದರೆ ಮುಂದೆ ಚೋಮ ಬದುಕಿ ಹಿಂದಿನಂತೆಯೇ ಪಂಜುರ್ಲಿ ಭೂತ ಹೇಳಿದ್ದರೆ ಅದನ್ನು ತಿರಸ್ಕರಿಸಿ ಮತಾಂತರ ಹೊಂದುತ್ತಿದ್ದ. ಆತನಿಗೂ ಪಂಜುರ್ಲಿ ಭೂತಕ್ಕೂ ಸಂಘರ್ಷವಾಗುತ್ತಿತ್ತು. ಆದರೆ ಬೆಳ್ಳಿಯ ಅನೈತಿಕ ವರ್ತನೆ ಅವನಿಗೆ ಆಘಾತವಾದದ್ದರಿಂದ ಮರಣಹೊಂದುತ್ತಾನೆ.[೧]

ಚೋಮನದುಡಿ ಪಾತ್ರವಿಶ್ಲೇಷಣೆ:

ಚೋಮ ಒಬ್ಬ ಜೀತದಾಳು; ಜೊತೆಗೆ ಅಸ್ಪೃಶ್ಯ. ತಾನು ಬೆವರು ಸುರಿಸಿ ದುಡಿಯುತ್ತಿರುವ ನೆಲದ ಮೇಲೆಯೇ ಆತನಿಗೆ ಒಡೆತನವಿಲ್ಲ. ಇದು ನಮ್ಮ ನಾಡಿನ ಚಾರಿತ್ರಿಕ ಸತ್ಯ. ತಾನು ಸ್ವಂತಕ್ಕೆ ಗೇಣುನೆಲ ಸಂಪಾದಿಸಬೇಕೆಂಬ ಹಂಬಲ. ಅದಕ್ಕಾಗಿ ಹೋರಾಟ ಇದರ ವಸ್ತು. ಕೊನೆಗೆ ಆ ಪ್ರಯತ್ನದಲ್ಲಿ ಚೋಮ ವಿಫಲನಾಗುತ್ತಾನೆ. ಈ ಚೋಮ ಕುಡುಕ, ಸಂಪಾದಿಸಿದ್ದನ್ನೆಲ್ಲಾ ಕುಡಿದು ಹಾಳುಮಾಡಿದ. ಆದ್ದರಿಂದ ನೆಲ ದಕ್ಕಲಿಲ್ಲ, ಚೋಮನ ಮಕ್ಕಳು ಅವನ ಬಳಿ ನಿಲ್ಲಲಿಲ್ಲ; ಆತನ ಒಡೆಯರು ನೆಲಕೊಡುವ ದೊಡ್ಡ ಮನಸ್ಸು ಮಾಡಲಿಲ್ಲ.

ಚೋಮನ ದುರಂತ ಇಳಿಜಾರಿಗೆ ಬಿದ್ದ ಬಂಡಿಯಂತೆ ದುರಂತದ ಕಡೆಗೆ ವೇಗವಾಗಿ ಸಾಗಿದೆ. ಅವನ ದುಡಿಯ ಬಡಿತ ಈ ವೇಗದ ಸಂಕೇತದಂತಿದೆ. ಕತ್ತಲಿನಲ್ಲಿ, ಆ ನಿಶ್ಯಬ್ದದಲ್ಲಿ ಕೇಳುವ ಒಂದೇ ಸದ್ದೆಂದರೆ ಚೋಮನ ದುಡಿಯಿದು. ಅವನ ಆತ್ಮದ ದುಡಿಯಿದು. ಈ ಬಗೆಯ ಕಲಾತ್ಮಕ ಆರಂಭ ನಮಗೆ ಕಾದಂಬರಿಯಲ್ಲಿ ಸಿಗುತ್ತದೆ. ಚೋಮನಿಗೂ ಶ್ರಮಮಾಡುವ ಹಂಬಲ, ಬೇಸಾಯ ಮಾಡುವ ಆಸೆ ಧನಿಯರೇ

---

೧. ಕಾದಂಬರಿಕಾರರಾಗಿ, ಕಾರಂತ, ಪು. ೫೪–೫೫

[illegible]

[illegible]

[illegible]

[illegible]

[illegible]

ದಯಪಾಲಿಸಿದರೆ, ಆದರೆ ಚೋಮ ಹೊಲೆಯ ಇದೇ ಈ ಗಾಥೆಯ ಸಾರ. ಆತನ ಕಷ್ಟನಷ್ಟಗಳನ್ನು ಮರೆಯಿಸುವಂಥ ವಸ್ತುಗಳು ಎರಡು. ಒಂದು ಹೆಂಡ, ಎರಡನೆದ್ದು ದುಡಿ. ಒಂದು ಆತನ ಚೇತನಾಶಕ್ತಿಯನ್ನೇ ಹೀರಿ ಆತನನ್ನು ನಿಶ್ಚೇಷ್ಟ ಮಾಡಿ ಕ್ಷಣಹೊತ್ತು ಆಸರೆ ಕೊಡುವುದು. ದುಡಿ ಆತನನ್ನು ಅಗೋಚರ ಆಜ್ಞೇಯ ಸ್ವಸಂವೇದ್ಯ ನಿರಾಮಯ ಆನಂದದಲ್ಲಿ ಒಯ್ದುಬಿಡುವುದು. ಚೋಮನು ಮನುಷ್ಯನು ಚೋಮನು ಹಿಂದೂ ಸಮಾಜದಲ್ಲಿ ಹುಟ್ಟಿದವನು. ಚೋಮನಿಗೆ ಜೀವಧಾರಣೆಯ ಅಧಿಕಾರವಿರುವುದು, ಆದರೆ ಅವಕಾಶವಿಲ್ಲ. ಆತನು ಹೊಲೆಯ.

ಚೋಮ ಕೇವಲ ಒಬ್ಬ ಶೋಷಿತ ದಲಿತ ಮಾತ್ರನಾಗಿರದೆ ದುಡಿಯ ಮೂಲಕ ತನ್ನ ನೋವನ್ನು ತೋಡಿಕೊಳ್ಳಬಲ್ಲ ಸೂಕ್ಷ್ಮಜೀವಿಯೂ ಆಗಿರುತ್ತಾನೆ. ಚೋಮನಿಗೆ ಭೂಮಿ ದಕ್ಕಬೇಕಾದ್ದು ಜನ್ಮಸಿದ್ಧ ಹಕ್ಕು ಎಂಬ ನಿಲುವಿಗಿಂತ, ಆತನಿಗದು ದಕ್ಕಬಾರದೆ ಎಂದು ಮಿಡಿಯುವ ಅಂತಃಕರಣ ಈ ಕಾದಂಬರಿಯ ಹಿನ್ನೆಲೆಗಿದೆ. ಚೋಮ ನಾವು ಕಂಡಿರಬಹುದಾದ ಯಾವ ಒಬ್ಬ ಅಸ್ಪೃಶ್ಯನಲ್ಲದಿದ್ದರೂ, ಎಲ್ಲ ಕಾಲದ ಎಲ್ಲ ದೇಶದ ದಲಿತನ ನೋವನ್ನು ಪ್ರಕಟಿಸಬಲ್ಲವನಾಗುತ್ತಾನೆ ಯಾಕೆಂದರೆ ಅವನು ವಿಶೇಷ ವ್ಯಕ್ತಿಯಾದ್ದರಿಂದ.

ಅಸಹಾಯಕತೆಯಲ್ಲಿ, ಮಿಂಗೇಲನ ಪಾಶವೀ ಕಾಮಕ್ಕೆ ಬೆಳ್ಳಿ ಈಡಾಗುವ ಈ ಚಿತ್ರಣಕ್ಕೆ ಸಂವಾದಿಯಾಗಿ ಬರುವ ಇನ್ನೊಂದು ಚಿತ್ರಣ, ಬೆಳ್ಳಿ ಮತ್ತು ಸೆರೆಗಾರ ಮನ್ವೇಲನ ವಿಷಮ ಸ್ನೇಹದ್ದು. ಈ ಸ್ನೇಹದ ಚಿತ್ರಣದಲ್ಲಿಯೂ, ಬೆಳ್ಳಿಯ ಮುಗ್ಧತೆ ಅಸಹಾಯಕತೆ, ಮನ್ವೇಲನ ಬಲಾತ್ಕಾರದ ಧ್ವನಿಗಳು ಇವೆ. ಆದರೆ ಕಾರಂತರು ಎಂದೂ ಮನುಷ್ಯನ ಸ್ವಭಾವವನ್ನು ಮರೆಯದ ಲೇಖಕರಾಗಿರುವುದರಿಂದ ಮತ್ತು ಬರವಣಿಗೆಯ ಪರಿಣಾಮದ ತೀವ್ರತೆಯನ್ನು ಬೇಕೆಂದೇ ಬಯಸುವ ಲೇಖಕರಲ್ಲವಾದ್ದರಿಂದ, ಈ ಸ್ನೇಹವನ್ನು ಅವರು ಚಿತ್ರಿಸುವುದು. ಹೀಗೆ "ಏಕೋ ಮನ್ವೇಲನು ಬೆಳ್ಳಿಯ ಜೀವನದಲ್ಲಿ ಆಸಕ್ತಿಯನ್ನು ತೋರಿಸಿ ತೊಡಗಿದಂತೆ ಕಾಣಿಸಿತು. ದಿನ ಹೋದಂತೆ ಅವನು ಅವಳೊಡನೆ ಮಾತನಾಡುವುದು, ನಗುವುದು, ಚೇಷ್ಟೆ ಮಾಡುವುದು ಹೆಚ್ಚುತ್ತಲೂ ಹೋಯಿತು. ಅವಳಿಗೂ ಅವುಗಳ ಅರ್ಥ ಹೊಳೆಯುತ್ತ ಬಂದಿತು. ಜೀವನದಲ್ಲಿ ಮೊದಲನೆಯ ಬಾರಿಗೆ ಯೌವನದ ದುಡುಕುತನವನ್ನು ಅವಳಾದರೂ ಅನುಭವಿಸತೊಡಗಿದಳು. ಅದರಿಂದಾಗಿ ಮನ್ವೇಲನ ಚೇಷ್ಟೆಗಳನ್ನು ತಿರಸ್ಕರಿಸಲು ಹೋಗಲಿಲ್ಲ. ಮುಂದೆ ಸಮ್ಮತಿಯ ಮುದ್ರೆಯನ್ನು ಕೊಟ್ಟಂತೆ ಕಾಣುತ್ತದೆ. ಅವನ ಕರುಣೆಯಿಂದಾಗಿ ತಂದೆಯ ಸಾಲ ತೀರುವುದಾದರೆ ಏನಾದರೇನೆಂಬ ಉದಾಸೀನ ತಾಳಿದಳು"[೧] ಇಲ್ಲಿನ ಧ್ವನಿ ಈ ಮಾತುಗಳಿಗೆ ಕೊಡುವ ವಿಶೇಷ ಅರ್ಥ, ಕಾದಂಬರಿಯ ಆಶಯದ ದೃಷ್ಟಿಯಿಂದ ಮಹತ್ವದ್ದಾಗಿದೆ. ಏಕಕಾಲಕ್ಕೆ ಬೆಳ್ಳಿ, ತನ್ನ ವಯಸ್ಸಿಗೆ

---

೧. ಚೋಮನದುಡಿ, ಶಿವರಾಮಕಾರಂತ, ಪು. ೬೧

ಸಹಜವಾದ ಲೈಂಗಿಕ ಕಾಮನೆಗಳನ್ನು ಅನುಭವಿಸುವುದು, ತನ್ನ ಶೀಲ ಸಂಸ್ಕೃತಿಗಳಿಗೆ ಸಲ್ಲದ ಪರಿಸರದಲ್ಲಿ ಆ ಕಾಮನೆಗಳನ್ನು ಪೂರೈಸಿಕೊಳ್ಳುವುದು, ತನ್ನ ನೈಸರ್ಗಿಕ ಹಂಬಲಗಳ ಬಗ್ಗೆ ಮೂಕ ಪ್ರಾಣಿಯಂತಹ ಉದಾಸೀನ ಭಾವ ತಾಳಿರುವುದು – ಇವೆಲ್ಲವೂ ಇಲ್ಲಿ ಧ್ವನಿತವಾಗಿದೆ.

ಗುರುವನ ಮತಾಂತಾರಕ್ಕೆ ಮುಖ್ಯ ಕಾರಣ. ಆತನ ಪ್ರೇಮ ಪ್ರಕರಣ. ಬೇಸಾಯಗಾರನಾಗುತ್ತೀನಿ ಎಂದು ಹೇಳುವುದು ಎರಡನೆಯ ವಿಷಯ. ಮೇರಿಯನ್ನು ಮದುವೆ ಮಾಡಿಕೊಳ್ಳಬೇಕಾಗಿರುವುದರಿಂದ ಅವಳನ್ನು ಪಡೆಯಲು ಮತಾಂತರ ಹೊಂದುತ್ತಾನೆ. ತನ್ನ ಪ್ರೇಮಸಮಸ್ಯೆಯನ್ನು ಮತಾಂತರ ಹೊಂದುವ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಚೋಮನ ಹೋರಾಟದ ಪ್ರಶ್ನೆ ಮತ್ತು ತಾಕಲಾಟಗಳು ಅವನಿಗಿರುವುದಿಲ್ಲ. ಪ್ರೇಮವೇ ಆತನಿಗೆ ಬಹಳ ಮುಖ್ಯವಾದದ್ದು.

ಸಂಕಪ್ಪಯ್ಯನು ಸಂತೋಷವಾಗಿ ಚೋಮನ ಇಷ್ಟ ಪೂರ್ತಿ ಮಾಡುತ್ತಿದ್ದನು. ಆದರೆ ಅವನ ತಾಯಿ ಸಂಪ್ರದಾಯದ ಮೂರ್ತಿಯಾಗಿ ಚೋಮನ ಆಸೆಗೆ ಅಡ್ಡಬಂದು ನಿಲ್ಲುತ್ತಾಳೆ. ಚೋಮನೆ ನಿರಾಶನಾಗುತ್ತಾನೆ. ಇದೇ ಅವನ ಜೀವನದ ದುರಂತತೆಗೆ ಮುಖ್ಯಕಾರಣ. ಕಾದಂಬರಿಯುದ್ದಕ್ಕೂ ಚೋಮನಿಗೆ ಭೂಮಿ ಲಭ್ಯವಾಗಬೇಕಾದ್ದು ನ್ಯಾಯವೆಂಬ ಭಾವಬೆಳೆಯುತ್ತದೆ. ಆದರೆ ಊಳಿಗಮಾನ್ಯ ಪದ್ಧತಿಯ ಪ್ರತಿನಿಧಿಯಾದ ಸಂಕಪ್ಪಯ್ಯ ಅದರ ಎಲ್ಲ ಸೂಕ್ಷ್ಮಗಳನ್ನೂ ಪ್ರಕಟಿಸುವ ಪಾತ್ರವಾಗುವುದಿಲ್ಲ. ಆತನಿಗೆ ಹೊಲ ಕೊಡುವ ಆಸೆಯಿದೆ. ಆದರೆ ಮನೆಯಲ್ಲಿರುವ ಮುದುಕಿಯ ತಡೆ ಇದೆ. ಮುದುಕಿ ಸಾಂಪ್ರದಾಯಿಕತೆಯ ಸಂಕೇತವಾದರೆ ಸಂಕಪ್ಪಯ್ಯ ಅದರ ಸುಳಿಯಲ್ಲಿರುವ ವ್ಯಕ್ತಿಯಾಗಿದ್ದಾನೆ. ಸಂಕಪ್ಪಯ್ಯನ ನಿರ್ಧಾರ ಮತ್ತು ಚೋಮನ ದುರಂತಗಳಲ್ಲಿ ಮುಖ್ಯವಾಗಿ ಎದ್ದು ಕಾಣುವ ಘಟಕವೆಂದರೆ ಕುಟುಂಬವೇ ಆಗಿದೆ. ಸಂಕಪ್ಪಯ್ಯನಿಗೆ ಭೂಮಿಯ ವಿಷಯ ಒಂದು ಕೌಟುಂಬಿಕ ವಿಷಯವಾಗುತ್ತದೆ. ಆದ್ದರಿಂದಲೇ ಮುದುಕಿಯ ಮನಸ್ಸಿಗೆ ವಿರುದ್ಧವಾಗಿ ನಡೆಯುವುದಿಲ್ಲ. ಆದರೆ ಈ ಕುಟುಂಬ ಹೊರಗಿನ ಸಾಮಾಜಿಕ ಆರ್ಥಿಕ ಅಂಶಗಳ ಸಾಂದ್ರಸ್ಥಳವೆಂಬುದು ಸತ್ಯ.

ಚೋಮನ ಕುಟುಂಬದ ಒಟ್ಟಂದದ ವಿನಾಶ – ಚೋಮ ಮಾಡಿದ್ದ ಸಾಲವನ್ನು ತೀರಿಸಲೆಂದು ಅವನ ಹಿರಿಯ ಗಂಡುಮಕ್ಕಳಿಬ್ಬರು (ಅದುವರೆಗೂ ಮನೆಬಿಟ್ಟು ಹತ್ತು ಹರದಾರಿಯೂ ಹೊರಡದ ಮಕ್ಕಳು). ಅನಂತರ ಮಗಳು ಬೆಳ್ಳಿ, ಇನ್ನೊಬ್ಬ ಮಗ ತಮ್ಮ ಊರು ಬಿಟ್ಟು ಘಟ್ಟದಾಚೆಯ ಕಾಫಿತೋಟಕ್ಕೆ ತೆರಳುವುದು ಒಬ್ಬ ಮಗ ಜಾತಿ ಬಿಟ್ಟು ಕಿರಿಸ್ತಾನದ ಹುಡುಗಿಯನ್ನು ಮದುವೆಯಾಗಿ ಕುಟುಂಬಕ್ಕೆ ಹೊರತಾಗುವುದು, ಇನ್ನೊಬ್ಬ ಮಗ ಯಾರೂ ರಕ್ಷಿಸುವವರಿಲ್ಲದೆ ನೀರಿನಲ್ಲಿ ಮುಳುಗಿ ಸಾಯುವುದು, ಮಗಳು ಶೀಲಮಾರಿಕೊಳ್ಳುವುದು, ಸ್ವತಃ ಚೋಮನೇ ಬೇಸಾಯಗಾರನಾಗುವ ಆಸೆಗೆ ಮತಾಂತರ–

ವಾಗಿ ಊರು ಬಿಡುವ ಯೋಚನೆ ಮಾಡುವುದು – ಈ ದುರಂತಕ್ಕೆ ಆರ್ಥಿಕ ಶಕ್ತಿಗಳ ಸೆಳೆತಗಳೇ ಕಾರ್ಯ ಕಾರಣ ಹಿನ್ನೆಲೆಯಾಗಿರುವುದನ್ನು ಕಾದಂಬರಿ ಯಥಾವತ್ತಾಗಿ ಚಿತ್ರಿಸುತ್ತದೆ. ಆದರೆ ಕಾದಂಬರಿಯ ಹೆಚ್ಚುಗಾರಿಕೆಯೆಂದರೆ, ಈ ಸೆಳೆತ ಚೋಮನಂತಹವರ ಬದುಕಿಗೆ ಅನನ್ಯವಾದ ಆರ್ಥಿಕ ವ್ಯವಸ್ಥೆಯ ಹೊಸ ಬೆಳವಣಿಗೆಗಳು ಅನೈತಿಕ ಎಂಬ ಧ್ವನಿ ಕಾದಂಬರಿಯ ಉದ್ದಕ್ಕೂ ಮಿಡಿಯುತ್ತದೆ. ಉದಾಹರಣೆಗೆ ಚೋಮನ ಕುಟುಂಬಕ್ಕೆ ತಮ್ಮ ಧನಿ ಸಂಕಪ್ಪಯ್ಯನ ಜೊತೆ ಕಾಫಿ ತೋಟದ ಮಾಲಿಕ, ಸೇರೆಗಾರರ ಜೊತೆ ಇರುವ ಎರಡು ರೀತಿಯ ಸಂಬಂಧಗಳನ್ನು ನೋಡಬಹುದು. ಸಂಕಪ್ಪಯ್ಯನ ಕುಟುಂಬಕ್ಕೆ ಚೋಮ ಮೂಲದ ಹೊಲೆಯ; ಎಂದರೆ ಅವರ ಆಶ್ರಯದಲ್ಲಿದ್ದು, ಅವರು ಹೇಳಿದ ಕೆಲಸ ಮಾಡಿಕೊಂಡಿರುವ, ನಿಗದಿಯಾದ ದಿನಕೂಲಿ ಪಡೆಯುವ ಜೀತದ ಆಳು, ಸಂಕಪ್ಪಯ್ಯ ಬ್ರಾಹ್ಮಣ; ಚೋಮ ಹೊಲೆಯರಲ್ಲೂ ನಿಕೃಷ್ಟವಾದ ಒಂದು ಪಂಗಡದವನು. ಈ ಕಾರಣದಿಂದ ಚೋಮ ಅವರ ನೆಲವನ್ನಾಗಲಿ, ಊರಿನ ಯಾರ ನೆಲವನ್ನಾಗಲೀ ಗೇಣಿಗೆ ಸಾಗುವಳಿ ಮಾಡಲಾರ. ಕುರುಡು ಶ್ರದ್ಧೆಯ ತಮ್ಮ ತಾಯಿ ಅಡ್ಡ ಬರದಿದ್ದರೆ, ಸಂಕಪ್ಪಯ್ಯ ಚೋಮನಿಗೆ ಒಂದು ತುಂಡು ನೆಲವನ್ನು ಗೇಣಿಗೆ ಕೊಡುತ್ತಿದ್ದರೋ ಏನೋ. ಆದರೆ ಅವರ ತಾಯಿ ಬದುಕಿರುವವರೆಗೆ ಅದು ಸಾಧ್ಯವಿಲ್ಲ. ಚೋಮ ಹೇಗೆ ಸಂಕಪ್ಪಯ್ಯನವರ ಜೀತದಿಂದ ಸ್ವತಂತ್ರನಾಗಲಾರನೋ ಹಾಗೆಯೇ, ಅವರ ಕುಟುಂಬವೂ ಚೋಮನ ಸಂತತಿಯವರನ್ನು ''ಸಾಲವಿರಲಿ, ಮೂಲವಿರಲಿ, ನಡೆಯಿಸಿಕೊಂಡು ಹೋಗಬೇಕು''[೧] ಈ ಸಂಬಂಧ ವಿಷಯವಾದರೂ, ಒಂದು ಮಿತಿಯೊಳಗೆ, ಈ ಎರಡು ಕುಟುಂಬಗಳ ನಡುವೆ ಅನ್ಯೋನ್ಯಭಾವವೂ ಇದೆ.

ಆದರೆ ಕಳಸದ ಕಾಫಿ ತೋಟದ ಮೂಲಕ ಮಿಂಗೇಲ ದೊರೆಗಳ ಜೊತೆ, ಸೇರೆಗಾರರ ಮನ್ವೇಲನ ಜೊತೆ ಚೋಮನ ಕುಟುಂಬಕ್ಕಿರುವ ಸಂಬಂಧ ಈ ರೀತಿಯದ್ದಲ್ಲ. ಇದು ಕೇವಲ ಕೂಲಿಯಾಳು ಮತ್ತು ಸಂಬಳ ಕೊಡುವ ಮಾಲಿಕನದ್ದು. ಚೋಮನಂತಹ ಕೆಳಜಾತಿಯ ಅನಕ್ಷರಸ್ಥ ಬಡವರ ಮುಗ್ಧತೆಯನ್ನು ಬಳಸಿಕೊಂಡು, ಅವರ ಮೇಲೆ ವಿಪರೀತ, ಬಡ್ಡಿಯ ಸಾಲಗಳನ್ನು ಹೇರಿ, ತಮ್ಮ ತೋಟಗಳಿಗೆ ಕೂಲಿಗಳ ಕೊರತೆಯಾಗದೆ ಹಾಗೆ ನೋಡಿಕೊಳ್ಳುವ ತೋಟದ ಮಾಲೀಕರ ಮೋಸ, ಯಾವ ದಯದಾಕ್ಷಿಣ್ಯವೂ ಇಲ್ಲದೆ ಕೂಲಿಗಳನ್ನು ತಮ್ಮ ಊರು ಮನೆಗಳಿಂದ ಬೇರ್ಪಡಿಸಿ, ಗಾಳಿ ಬೆಳಕಿಲ್ಲದ, ನಗರದ ಜಾಲುಗಳಂತಹ[೨] ಲಾಯಗಳಂತಹ ಗೂಡುಗಳಲ್ಲಿ ಅವರನ್ನು ಇಟ್ಟು ದುಡಿಸಿಕೊಳ್ಳುವುದು ಬಡ್ಡಿ ಸಾಲದಿಂದ ಕೂಲಿಗಳು ಎಂದೂ ಬಿಡುಗಡೆ ಪಡೆಯಲಾರದಷ್ಟು ಕಡಿಮೆ ಸಂಬಳ ಕೊಡುವುದು, ಇವು ಸಂಬಂಧದ ವಿವರಗಳು.

---

೧. ಚೋಮನದುಡಿ, ಶಿವರಾಮಕಾರಂತ, ಪು. ೭

೨. ಅದೇ, ಪು. ೪೯

ಕುಸುಮಬಾಲೆ

ವಸ್ತುಪರಿಶೀಲನೆ, ಪಾತ್ರ ವಿಶ್ಲೇಷಣೆ

ಸಾಮಾಜಿಕ – ಸಾಂಸ್ಕೃತಿಕ ನೆಲೆಯಲ್ಲಿ

ಕುಸುಮಬಾಲೆ ಕಿರುಕಾದಂಬರಿಯ ಪ್ರಕಟಣೆ ಇಂದಿನ ಸೃಜನಶೀಲ ಸಾಹಿತ್ಯದ ಸಂದರ್ಭದಲ್ಲಿ ಒಂದು ಮಹತ್ವದ ಸಾಹಿತ್ಯಕ ಘಟನೆಯಾಗಿದೆ. ಅದರ ರಚನಾ ವಿಧಾನ, ಭಾಷೆಯ ಬಳಕೆ, ನಿರೂಪಣೆಯ ಸ್ವರೂಪ, ದೃಷ್ಟಿ–ಧೋರಣೆ ಇತ್ಯಾದಿಗಳಲ್ಲಿ ಹೊಸತನವಿದೆ; ತಾಜಾತನವಿದೆ; ಜೊತೆಗೆ ವಿಲಕ್ಷಣ ಎನಿಸಬಹುದಾದಂಥ ಕೆಲವು ಅಂಶಗಳೂ ಇವೆ. ಆ ಕಾರಣಗಳಿಂದಾಗಿ ಕಾದಂಬರಿಯ ರೂಪ, ಸಂವಹನ, ಕೇಂದ್ರಪ್ರಜ್ಞೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಓದುಗರಿಗೆ, ವಿಮರ್ಶಕರಿಗೆ ಎದುರಾಗಿವೆ. ಮಹಾದೇವ ಅವರು ಕುಸುಮಬಾಲೆಯ ಮೂಲಕ ದಲಿತ ಪ್ರಪಂಚದ ಸ್ಥಿತಿ, ಸಾಧ್ಯತೆಯ ಅಪ್ಪಟ ಹೊಸ ಸಂವೇದನೆಯನ್ನು ಕನ್ನಡ ಸಾಹಿತ್ಯಲೋಕಕ್ಕೆ ನೀಡಿರುವ ಅವರು ತಮ್ಮ ಪರಿಸರದ ಗ್ರಾಮೀಣ ಸಮೂಹ ಸಂವೇದನೆಯನ್ನು ಅದರಲ್ಲಿ ವೈವಿಧ್ಯ, ವೈಚಿತ್ರ್ಯಗಳೊಂದಿಗೆ ನೀಡಿ ಮತ್ತೊಂದು ವೈಶಿಷ್ಟ್ಯವನ್ನು ಮೆರೆದಿದ್ದಾರೆ, ಕರೆದಿದ್ದಾರೆ. ಆದರೆ ಗಾತ್ರದಲ್ಲಿ ಕಿರಿದಾಗಿ ಕಾಣುವ ಈ ಕಾದಂಬರಿ ಸತ್ವದಲ್ಲಿ ಬಹುದೊಡ್ಡ ಕಾದಂಬರಿಯೇ ಆಗಿದೆ ಎಂಬುದನ್ನು ಅರಿಯಬೇಕಾಗಿದೆ. ನೂರು ಪಂಕ್ತಿಗಳಲ್ಲಿ ಹೇಳಬೇಕಾದುದ್ದನ್ನು ಮೂರು ಪಂಕ್ತಿಯಲ್ಲಿ ಹೇಳಿಬಿಡುವ ಮಾಂತ್ರಿಕ ಸ್ವರೂಪದ ಕಾವ್ಯದ ಪರಿಭಾಷೆಯ ಬೆಡಗಿನಲ್ಲಿ, ಪ್ರತಿಮೆ ರೂಪಕಗಳಲ್ಲಿ ಬೆಳೆದು ನಿಲ್ಲುವ ಈ ಕೃತಿ ನಾಲ್ಕೈದು ತಲೆಮಾರುಗಳ ಕಥೆಯನ್ನು ತನ್ನ ಒಡಲಿನಲ್ಲಿಟ್ಟುಕೊಂಡಿದ್ದು, ನಿರೂಪಣ ವಿಧಾನ, ಶೈಲಿ, ಭಾಷಾಪ್ರಯೋಗ, ದೃಷ್ಟಿ–ಧೋರಣೆಯಲ್ಲಿ ಕನ್ನಡ ಕಾದಂಬರಿ ಕ್ಷೇತ್ರದಲ್ಲೇ ವಿಶಿಷ್ಟವಾಗಿ ನಿಲ್ಲುತ್ತದೆ. ಮೇಲ್ನೋಟಕ್ಕೆ ಈ ಕೃತಿಗೆ ಕೇಂದ್ರವೊಂದು ಇದ್ದಂತೆ ತೋರುತ್ತಿಲ್ಲವಾದರೂ ಹಲವು ಕಥೆಗಳ ಹಲವು ಕೇಂದ್ರಗಳ ವ್ಯಾಪಕ ನೆಲೆಯ ಸಮೂಹ ಸಂವೇದನೆಯ ಕೇಂದ್ರವೊಂದು ಇರುವುದು ಮನದಟ್ಟಾಗುತ್ತದೆ. ಕುವೆಂಪು ಅವರು ತಮ್ಮ ಮಲೆಗಳಲ್ಲಿ ಮದುಮಗಳು ಕೃತಿಯ ಆರಂಭದಲ್ಲಿ ಇಲ್ಲಿ ಯಾರು ಮುಖ್ಯರಲ್ಲ; ಯಾರು ಅಮುಖ್ಯರಲ್ಲ. ಯಾವುದೂ ಯಃಕಶ್ಚಿತವಲ್ಲ ಎಂಬ ಮಾತಿನ ಆಶಯವನ್ನು ದೇವನೂರರ ಈ ಕಾದಂಬರಿಗೂ ಅನ್ವಯಿಸಿಕೊಳ್ಳಬಹುದಾಗಿದೆ. ಸಮೂಹದ ಸಾಂಸ್ಕೃತಿಕ ಬದುಕಿನ ಸಂವೇದನೆಯನ್ನು ಪರಂಪರೆಯ ಎಳೆಯನ್ನು ತನ್ನೊಡಲಲ್ಲಿ ಹುದುಗಿಸಿಕೊಂಡಿರುವ ಈ ಕೃತಿ ಗಮನಾರ್ಹವಾಗಿದೆ. ಭೂತ ವರ್ತಮಾನ, ಭವಿಷ್ಯತ್ತುಗಳನ್ನು ಏಕತ್ರದಲ್ಲಿ ಹಿಡಿದಿಡುವ ಇದರ ನಿರೂಪಣಾ ವಿಧಾನ ಓದುಗನಿಗೆ ಸಹನೆಯ ಪಾಠವನ್ನು ಬೋಧಿಸುತ್ತದೆ.

ಜನಪದ ನಂಬಿಕೆ, ಪುರಾಣ, ದಂತಕಥೆಗಳನ್ನು ತನ್ನೊಡಲಿನ ರಕ್ತಮಾಂಸ ಉಸಿರೆಂಬಂತೆ ನೆಚ್ಚಿಕೊಂಡಿರುವ ಈ ಕೃತಿ ಆರಂಭದಿಂದ ಹಿಡಿದು ಉಪಸಂಹಾರದವರೆವಿಗೂ

ಒಂದು ಬಗೆಯ ಜಾನಪದೀಯ ಆವರಣವನ್ನು ಸೃಷ್ಟಿಸಿಕೊಂಡು ಮುನ್ನಡೆಯುತ್ತದೆ. ಆ ಮೂಲಕ ತನ್ನೊಡಲ ಜೀವಸ್ವರವನ್ನು ಜತನದಿಂದ ಕಾಪಾಡಿಕೊಳ್ಳುವ ತಂತ್ರಗಾರಿಕೆಯನ್ನು ಅನುಸರಿಸುವಂತೆ ಕಾಣುತ್ತವೆ. ಇಲ್ಲಿ ಸಹಜವಾಗಿ ಘಟಿಸುವ ವರ್ಣಸಂಕರಗಳ ಮೂಲಕ ಸ್ಥಾಪಿತ ಜಾತಿವ್ಯವಸ್ಥೆಯ ಭಾವನೆಯ ಅನಿವಾರ್ಯತೆಯನ್ನು ಒತ್ತಿಹೇಳಿ ಮಾನವೀಯ ನೆಲೆಯ ಸಮಾನತಾ ಆಶಯವನ್ನು ಸ್ಫುರಿಸುವ ಸಂಗತಿ ಗಮನಕ್ಕೆ ಬಾರದಿರದು. ಜೀವಕಾರುಣ್ಯ, ಮಾನವಪ್ರೀತಿ, ಇಲ್ಲಿ ಮುಖ್ಯ ನೆಲೆಯಾಗಿ ಕಾದಂಬರಿಯ ಉದ್ದಕ್ಕೂ ಹಾಸುಹೊಕ್ಕಾಗಿ ಸಂಚಲನಗೊಳ್ಳುವುದರಿಂದ ಕೃತಿಯ ಮೌಲ್ಯ ದ್ವಿಗುಣಗೊಂಡಿದೆ ಎಂದು ಹೇಳಬೇಕು. ಈ ಕೃತಿಯ ಭಾಷಾಪ್ರಯೋಗ ಮತ್ತು ನಿರೂಪಣಾ ವಿಧಾನ ಸಂವಹನದ ಸಮಸ್ಯೆಯನ್ನು ಉಂಟುಮಾಡಿದೆ ಎಂಬಂಥ ಮಾತುಗಳೂ ಕೇಳಿಬಂದಿವೆ. ಆದರೆ ಕೃತಿ ನೀಡುವ ಅನುಭವಲೋಕಕ್ಕೆ, ಭಾಷಾ ಬೆಡಗಿಗೆ ಓದುಗ ಸಂಪೂರ್ಣ ತನ್ನನ್ನು ತಾನು ತೆರೆದುಕೊಂಡಾಗ, ಅದರೊಳಗೆ ತಾದಾತ್ಮ್ಯ ಸಾಧಿಸಿದಾಗ ಅರ್ಥವಿನ್ಯಾಸಗಳು ಅನಾವರಣಗೊಳ್ಳುತ್ತವೆ ಎಂಬ ಮಾತೂ ಅಷ್ಟೇ ನಿಜ.

ಕಾದಂಬರಿಯನ್ನು **ಜೋತಮ್ಮ**ಗಳೇ ಆರಂಭಿಸಿಕೊಡುತ್ತವೆ. ಒಂದು ರಾತ್ರಿ ಆ ಊರ ಜೋತಮ್ಮಗಳಲ್ಲಿ ತಮ್ಮ ಕೆಲಸಗಳನ್ನು ಮುಗಿಸಿ ಊರಿನ ಮುಂದೆ ರೂಢಿಯಂತೆ ಕೂಡುತ್ತವೆ. ಅಲ್ಲಿಗೆ ದೊಡ್ಡೋರ ಹಟ್ಟಿಯ ಆದರೆ ಸೋಮಪ್ಪನ ಮನೆಯ ಜೋತಮ್ಮನೂ ಬಂದಿದ್ದಾಳೆ ತಾನು ಬೆಳಗುವ ಮನೆಯವಳು ಹಾಗೂ ತಾನು ದೊಡ್ಡವಳು ಎಂಬ ಗತ್ತು ಅವಳ ಮಾತಿನ ದಾಟಿಯಲ್ಲಿದೆ. ಅಂದು ಹೊಸದಾಗಿ ಅಲ್ಲಿಗೆ ಬಂದಿದ್ದ ದೊಂಬರ ಜೋತಮ್ಮನನ್ನು ವಿಚಾರಿಸುವವಳೂ ಅವಳೇ ಅನಂತರ ಉಳಿದ ಜೋತಮ್ಮಗಳು ಹೊಸಬಳೊಂದಿಗೆ ಸೇರಿ 'ಗುಲುಗು ಗದ್ದಲ' ಎಬ್ಬಿಸಿದಾಗ.

ಊರ್ಗ ದಡೋರ ಹಟ್ಟೀ, ಜೋತಮ್ಮನು

'ಅದ್ಯಾನಾ ಅಸ್ಟು ಮಾತಾಡೀರಿ ಕೇಳ್ರಮ್ಮಿ ಯಮ್ಮಗಳ, ಇವತ್ತು ನಮ್ಮಟ್ಟಿ ಕುಸುಮ್ನ ಗಂಡ ಬಂದಿದ್ದ.

ಬಂದವ ಕೂಸ್ನೂ ಹೆಡ್ತೀನೂ ಚಣೊತ್ತು ನೋಡ್ದನೋ ನೋಡ್ಕ ಇಲ್ಲೊ! ನಿಲ್ದೆ ಹೊಂಟೇ ಬುಡಾಡ ಮಣ್ಯಾತ್ತಾ....... !"

ಅಯ್ಯಯ್ಯೋ ಎಲ್ಲಾದ್ರೂ ಉಂಟವ್ವಾ! ಅಥರ್‍ವಾಗಿ ಯಾಕಂರೂ ಮಾಡ್ದನವ್ವ...........?

ನಾಯಾನ್ ಹೇಳಲವ್ವ ತಾಯಿ? ಕೂಸ ನೋಡ್ತ ಕೆಂಪ್ಗಿರೋ ಅವ್ನ ಮಾಕವು ಕಪ್ಪಾಗೋಯ್ತು[೧]

೧. ಕುಸುಮಬಾಲೆ, ದೇವನೂರ ಮಹಾದೇವ, ಪು. ೩೩

ಕುಸುಮೀನ ಯಾನ ಅನ್ನಿಲ್ಲಂ.........ಎತ್ತ ಅನ್ನಿಲ್ಲ..... ಸಟುಗು ಕಣ್ಣೆತ್ತೂ ನೋಡ್ಲಿಲ್ಲಾ. ಕಡ್ದು ಹೊಂಟೋಯ್ತಿದ್ದ......"

ಈ ವಿಚಾರದಲ್ಲಿ ಅವರುಗಳ ಮಾತು ಸಾಗುತ್ತಿರುವಾಗ ತೂರಾರ ಹಟ್ಟಿ ಜೋತಮ್ಮ ಏನೋ ಹೇಳಲು ಪ್ರಯತ್ನಿಸುತ್ತಿದ್ದನ್ನು ದೊಡ್ಡೋರ ಹಟ್ಟಿ ಜೋತಮ್ಮ ಅಡಗಿಸಲು ಪ್ರಯತ್ನಿಸಿದಾಗ ಹೊಲಾರ ಮಾರಿಗುಡಿ ಜೋತಮ್ಮನು.

ಅದ್ಯಾಕ ಅವ್ಳ ಬಾಯ್ ಮುಚ್ಚಿಸಿರಿ ನೀವು? ಏನೇಸ್ ಕಂಡಿದ್ದಳೋ ಅವಳು! ಹೇಳ್ಲಿ ಬಿಡಿ ಅದ್ನೂ ಕೇಳವ....' ಅಂದಳು ಆಗ ದೊಡ್ಡೋರ ಹಟ್ಟೀ ಜೋತಮ್ಮ ಮಾಕ್ವ ಬಿಕ್ಕಂದು ತಾತ್ಸಾರದ ಉಸುರಾಡ್ದ ಅಂದಳು–

ಊ್ಞ ಹೇಳವ್ವ, ಅದೇಸ್ ನಿಂಗ ಕಂಡಿದ್ದದೋ ಅದ್ನೂ ಕೇಳವು....'

ಆಗ ಒಂದ್ಸಲ ಸುತ್ತಾಲೂ ನೋಡಿ ತೊರಾರ ಹಟ್ಟಿ ಜೋತಮ್ಮನು

ಅದಿಯಾ ಅತ್ತಮ್ಮೋರ ..... ನೀ ಕುಸುಮುವಿ ಆ ಹೊಲಾರ ಚನ್ನನೂವಿ ಕೂಡೋ ತಳವು ನಮ್ ಜೋಪಡಿ ತಾನೀಯ? ಕೆಂಪಾಗಿರೋ ಗಂಡ ಹೆಂಡತೀಗ ಹುಟ್ಟಿರೋ ಕೂಸು ಚನ್ನನ ಥರ್ವಾಗಿ ಕಪ್ಪಾಗಿ ಅದು ಹುಟ್ಟೀ... ಅದನೀಗ ಕುಸುಮಳ ಗಂಡ ಅರುತ್ಗಂಡು... ಅಂತೇನಾರು.....[೧]

ಹೀಗೆ ಕಾದಂಬರಿಯ ಕಗ್ಗಂಟಿಗೆ ಕಾರಣವಾದ ಘಟನೆಯನ್ನು ಇದ್ದುವಿದ್ದಂತೆ ಬಯಲು ಮಾಡುವವಳು ಸಾಕ್ಷಿ ದೇವತೆಯಾದ ಜೋತಮ್ಮ, ನಾವು ಹುಡುಗರಾಗಿದ್ದಾಗ, ಯಾರದ್ದಾದರೂ ಮಾತಿಗೆ ಅನುಮಾನ ವ್ಯಕ್ತವಾದಾಗ ಅವರು 'ಜ್ಯೋತಿ ಸಾಕ್ಷಿಯಾಗಿ' 'ದೀಪದಾಣೆ'ಯಾಗಿ ಎಂದು ಪ್ರಮಾಣ ಮಾಡುವ ರೂಢಿಯಿತ್ತು.

ಈ ಕಥೆಯಲ್ಲಿ ಇನ್ನೊಂದೆಡೆ ಜೋತಮ್ಮನು ಪ್ರವೇಶಿಸುವುದನ್ನು ಕಾಣುತ್ತೇವೆ. ಆ ಪ್ರಸಂಗದಲ್ಲಿ ನಾವು ಕಾಣುವುದು ಇಬ್ಬರೇ ಇಬ್ಬರು ಜೋತಮ್ಮಗಳನ್ನು, ಒಂದು ರಾತ್ರಿ ಎಷ್ಟು ಹೊತ್ತಾದರೂ ಹೊಲಾರ ಮಾರಿಗುಡಿ ಜೋತಮ್ಮ ಸಭೆಗೆ ಬಾರದಿದ್ದಾಗ, ತೊರಾರ ಜೋತಮ್ಮ ಅವಳನ್ನು ಹುಡುಕಿಕೊಂಡು ಗುಡಿಗೆ ಬರುತ್ತಾಳೆ. ಅಲ್ಲಿ ಮರುದಿನ ಏರ್ಪಾಡಾಗಿದ್ದ ಜೀತ ವಿಮೋಚನಾ ಮೆರವಣಿಗೆಗಾಗಿ ಜನ ಕೂಡಿರುತ್ತಾರೆ. ತೊರಾರ ಜೋತಮ್ಮ 'ಅಕ್ಕಾ' ಅಂದಾಗ ಮಾರಿಗುಡಿ ಜೋತಮ್ಮ.

'ನಾ ತಾನೇ ಯಾನ್ನ ಮಾಡ್ಲವ್ವ? ಇವ್ರು ಈ ಥರವಾಗಿ ಗುಡ್ಗು ಸಿಡ್ಲು ರಾಕ್ಸರಥರ್ವಾಗಿ ಕೂತಿರ್ವಾಗ...' ಅಕ್ಕೈ ಅದಿರ್ಲಿಕನ, ಇಲ್ಲಿ ಕುಂತಿರೋ ಹೈಕಳು ಯಾನ್ನೋ ಓದಿ ಬರ್ದು ಕೆರ್ಬಾಕದವರು ತಾನಿಯಾ? ನಾನು ಯಾರ್ದಾರು ಮಯ್ದುಂಬಿ ಸಾವಿರಾರ್ ವರ್ಸದ

೧. ಕುಸುಮಬಾಲೆ, ದೇವನೂರ ಮಹಾದೇವ, ಪು. ೫೩

ತಲತಲಾಂತರದ ನನ್ನಿ ನುಡಿನಿ ವಸಿ ಚಿಟುಕು ಮುಳ್ಳು ಆಡಿಸ್ಲ್ಯ?" ಎಂದು ಹೇಳಿ ಅಲ್ಲಿದ್ದ ಮುದುಕ ಕುರಿಯಯ್ಯನ ಮೈದುಂಬುತ್ತಾಳೆ. ಆಗ ಕುರಿಯಯ್ಯ ನುಡಿಯುವನನ್ನಿ. ಅದರಿಂದ ಹುಟ್ಟುವ ಚರ್ಚೆ-ಜಿಜ್ಞಾಸೆ ಇವೆಲ್ಲಾ ಬಹಳ ತಮಾಷೆಯಾಗಿವೆ. ಕಾದಂಬರಿಯಲ್ಲಿ ದೇವನೂರ ಮಹಾದೇವ ಅವರ ಪ್ರಸ್ತಾಪವಿರುವುದು ಇದೊಂದೇ ಜಾಗದಲ್ಲಿ. ಇಲ್ಲಿ ಬರುವ ಕುರಿಯಯ್ಯ ಅಮಾಸ ದ್ಯಾವನೂರು ಕಥಾ ಸಂಗ್ರಹದಲ್ಲಿ ನಾವು ಕಂಡ ಕುರಿಯಯ್ಯ, ಅಮಾಸರೇ

ಅಕ್ಕಮಾದೇಮ್ಮಾ ಕಾದಂಬರಿಯ ಮೊದಲ ಭಾಗದ ಕೇಂದ್ರ ಪಾತ್ರ. ಗಂಡನನ್ನು ಕಳೆದುಕೊಂಡು ತೌರು ಮನೆಗೆ ಹೋದವಳು. ಆರು ವರ್ಷ ಬಿಟ್ಟು ಗಂಡನ ಮನೆಗೆ ಬರುತ್ತಾಳೆ. ಅವಳು ಗಂಡ ಸತ್ತ ಹನ್ನೆರಡು ತಿಂಗಳಿಗೆ ಒಬ್ಬ ಮಗನನ್ನು ಹಡೆದಿದ್ದಾಳೆ. ಆ ಹುಡುಗ ಜೀತಗಾರನೊಬ್ಬನಿಗೆ ಅಂದರೆ ಬಹುಶಃ ದಲಿತನೊಬ್ಬನಿಗೆ ಹುಟ್ಟಿದವ ಎಂಬ ವದಂತಿಯಿದೆ. ಭಾವ ಬಸಪ್ಪ ಸೋಮಿ ಕಟುವಾಗಿ "ಗಂಡ ಸತ್ತ ಹನ್ನೆರಡನೇ ತಿಂಗಳಿಗೆ ಯಾರಿಗಾದರೂ ಎಲ್ಲಾದರೂ ಈ ನರಲೋಕದ ರೂಢಾವಳಿಯಲ್ಲಿ ಮಕ್ಕಳಾಗಿರುವಂಥ ಪ್ರಸಂಗ ಏನಾದರೂ ಇದ್ದಲ್ಲಿ ಅದನ್ನು ನಮಗೆ ತೋರಿಸಿ ಬರುವಂಥವಳಾಗು, ಈಗ ನಡೆಯಾಚೆ" ಎಂದು ಹೇಳಿದಾಗ ಆಣೆ ಪ್ರಮಾಣ ಸತ್ಯ ಮಾಡುತ್ತಾಳಾದರೂ ಆ ಪ್ರಶ್ನೆಗೆ ಅವನಲ್ಲಿ ಉತ್ತರವಿಲ್ಲ. ಮೈದುನ ಸಿದ್ದೂರ ಅವಳನ್ನು ಗೋಮಾಳದಲ್ಲಿ ದೂಡಿ ಅವಳ ಬೆಳ್ಳಿ ಕರಡಿಗೆಯನ್ನು ಕಿತ್ತುಕೊಂಡು ಹೋಗುತ್ತಾನೆ. ಅವಳು ಅವಳ ಹೊಸಬಟ್ಟೆ ಹಾಕ್ಕಂಡಿದ್ದರೂ ಸಾಕ್ಷಾತ್ ಕೋತಿಮರಿಯಂತೆ ಇದ್ದ ಯಾಡ ಕಂದನೂ ಹೀಗೆ ನಿರಾಶ್ರಿತರಾಗಿ, ನಿರಾಧಾರವಾಗಿ ನಿಂತಾಗ ಅವಳು ತೋರಿದ ದಿಟ್ಟತನ ಅಪೂರ್ವವಾದದ್ದು.

ಆ ಕಾಲದಲ್ಲಿ .... ಗಕ್ಕಿಟ್ಟ ಕೂತಿದ್ದ ಅಕ್ಕ ಮಾದೇವಮ್ಮನ ಕಣ್ಣುಗಳ ನೀರ್ನ ಕೋಡಿಯ ಹರ್ದ್ದೂ ಕೆರೆಯ ಸೇರುತ್ತಿರಲು........ ಯಾಡನ...... ಅವನ ಬಳಗಲದ್ರವವೆಲ್ಲ ಹಿಂಗಿದುದಾಗಿ ಅವನ ಒತ್ತಿದ್ದ ನೇತ್ರಗಳಿಂದ ನೀರು ಅಂಬುದು ತಾನೇ ಬರಲು ಎಲ್ಲಿತ್ತು ಎಂಬುವಂತಿರಲು.

ಯಾಡನ ತಲ್ಬ ಭೂಮಿ ಮ್ಯಾಲ ಇಟ್ಟವಳಾಗಿ

ಎದ್ದು ಅಕ್ಕಮಾದೇವಮ್ಮ ನಡೆದವಳಾಗಿ ಬಂದಳು

ಆ ಕಣ್ಣೀರು ತುಂಬಿದ್ದ ಕೆರೆಯ ಕೆರೆಗ, ಸರಣು

ಆ ಕೆರೆಗ ಮೂರು ಸಲ ಮಾಡಿದಳು. ಕಣ್ಣಿಗೆ

ಆ ಕೆರೆಯ ನೀರ ಮೂರು ಸಲ ಒತ್ತಿಕೊಂಡಳು, ಪ್ರಾರ್ತಿಸುತ

ಆ ಮೂರು ಬೊಗಸ ನೀರ ಕುಡ್ದಾಳು ಆ

ಸೆರಗೀನ ತುದಿಯಾ ನೀಲಿಗದ್ದಿದಳೂ[೧]
ಆ ನೀರೂ ಕುಡುದಾ ಸೆರುಗಾ ತುದಿಯಾ ತನ್ನೆಡೂ ಕೈಲೂ ಹಿಡಿದು ತಂದೂ
ಆ ಯಾಡನಾ ಬಾಯಾ ಆ ಹಕ್ಕಿಯಾ ಬಾಯಾ ಬಿಡುಸೂತ ಕುಂತೂ
ಆ ನೀರು ಕುಡುದಾ ತುದೀ ಸೆರುಗಾ ನೀರ ತೊಟ್ಟಿಕ್ಕಿಸುತ್ತಿರಲೂ
ಆ ಆಗ ಆ ಯಾಡನ ದೇಹದಲ್ಲೂ ದ್ರವವಾಡೀ ಬಂತೂ
ಆ ಆಗ ಆ ಯಾಡನಾ ಕಣ್ಣುಗಳಲ್ಲೂ ನೀರಾಡಿ ಬಂತೂ
ಅಲ್ಲುಗ ಭೂಮತಾಯ ತನ್ನೇಡು ರೆಕ್ಕಗಳೂ
ತೆಂಗಿನ ಗರಿಯ ರೂಪದಲ್ಲಿ ಬರುವಂತಾಗಲೂ
ಅಕ್ಕಮಾದೇವಮ್ಮ ಯಾಡರು ಕೂತ ಜಾಗವ್ಪೂ
ಅಲ್ಲಿಂಗ ನೆರಳಾಯ್ತು[೨]

ಆ ತೆಂಗಿನ ಗರಿಯ ನೆರಳು ಆ ರಾತ್ರಿಗೆ ಅವಂಗೆ ಮಲಗುವ ತಾಣವಾಯಿತು. ಕ್ರಮೇಣ ಅವರಟೀ ಕಡುಬಿನ ಅಂಗಡಿಯಾಯಿತು. ಆ ಊರಿಗೆ ಬಸ್ಸು ಬಂದು ಅದು ತಂಗುದಾಣವಾಗಿ,

ಅಕ್ಕಮಾದೇವಮ್ಮನ ಹೊಟ್ಲು ಬರಕಾಸ್ತು. ಆಗೈ ಹುಲಿಮ್ಯಾಲ ಕೂತ ಮಲೈಮಾದೇಶ್ವರನ ಪೋಟ, ಕುದರಮ್ಯಾಲ ಕುಂತ ಬಸವಣ್ಣನ ಪೋಟ, ನೆರುಕಗ ನೇತಾಡೀ, ದಿನಾ ಅದಕ ಹೂ ಹಣ್ಣು ಊದುಬತ್ತಿ ಬೀಳವು. ರಾತ್ರನಗ ಅನ್ನ ವಗ್ರಾಣಿ ಸಾರೂ ತಯಾರಾಗ್ತ ಆ ವಗ್ರಾಣಿ ಸಾರ್‍ಗ ಬೆದುಕೀರು ಬೆಂಮನ್ಸೀರಾಗಿ ಬಾಪ್ಕ ಪಡುತಾ

ಹೀಗೆ ಭಾವಮ್ಮೈದುನರಿಂದ ಅಪವಾದಗ್ರಸ್ತಳಾಗಿ ಹೊರದೂಡಿಸಿಕೊಂಡ ಅಕ್ಕಮಾದೇವಮ್ಮ ಆ ಗ್ರಾಮ ಸಮಾಜದಲ್ಲಿ ತಾನೂ ತಲೆಯೆತ್ತಿ ತಿರುಗಬಲ್ಲ ಸ್ವಾವಲಂಬಿ ಜೀವನವೊಂದನ್ನು ಕಂಡುಕೊಂಡುದು ಆಕೆಯ ದಿಟ್ಟತನ. ಸಾಹಸಗಳಿಗೆ ಒಂದು ಸಾಕ್ಷಿ. ಅವಳಿಗೆ ಇದ್ದ ಒಂದು ಅನುಕೂಲಕರ ಸಂಗತಿಯನ್ನು ಇಲ್ಲಿ ಗುರುತಿಸಬಹುದು. ಅವಳು ಶಿವಾಚಾರದವಳು. ಆ ಸಮುದಾಯದವರು ಮೈಸೂರು ನಂಜನಗೂಡು ಸೀಮೆಯಲ್ಲಿ ತಿಂಡಿ ತೀರ್ಥಗಳ ವ್ಯಾಪಾರ ಹಿಡಿದು ಬದುಕುವುದು ಸಾಮಾನ್ಯ. ಅವರು ಇಡೀ ಬ್ರಾಹ್ಮಣೇತರ ಜಾತಿಗಳವರಿಗೆಲ್ಲಾ ಒಪ್ಪಿಗೆಯಾಗುವವರು. ಅವಳು ಮಾಂಸಾಹಾರಿ ಪಂಗಡದವಳೋ, ದಲಿತಳೋ ಆಗಿದ್ದರೆ ಈ ಕಸುಬು ಅವಳ ಪಾಲಿಗೆ ಇರುತ್ತಿರಲಿಲ್ಲ.

---

೧. ಕುಸುಮಬಾಲೆ, ದೇವನೂರ ಮಹಾದೇವ, ಪು. ೩೫

೨. ಅದೇ, ಪು. ೫೫

ತೂರಮ್ಮಳ ವ್ಯಕ್ತಿತ್ವ ವೈವಿಧ್ಯಪೂರ್ಣವಾದುದು. ಅವಳು ಹೊಣೆ ಅರಿತ ಸಂಸಾರಿ ತಾಯಿ ತೂರಮ್ಮನು ಅಳೆದೂ, ಸುರಿದೂ ತೂರಿ ನೋಡಿ ಕೊನೆಗೆ ತನ್ನ ಕಣ್ಣು ಕಿತ್ತುಕೊಡುವಂತೆ ಮಗಳು ಕೆಂಪೀಯ ಅಣೆಯಾಗಿ ಅಚ್ಚುಕಟ್ಟಾಗಿದ್ದ ಚೆಲುವನ್ನು ಒಳ್ಳೆ ಯಾಪಾರಸ್ತಗಾರನಿಗೇ ಧಾರೆ ಎರೆದಿದ್ದಳು. ಕೆಂಪಿ ಗಂಡನಾದ ಸಂಭಾವಸ್ತಗಾರ ಕಿಟ್ಟಯ್ಯನೂ ಸಾಮ್ಯಾರರು ಇಟ್ಟುಕೊಳ್ಳುವಂತೆ ಒಂದು ಸೈಯ್ಯಲ್ಲನ್ನು ಅದಕ್ಕೂ ಒಂದು ಪಂಪನ್ನು ಇಟ್ಟುಕೊಂಡೂ. ಒಂದಲ್ಲಾ ಅಂತ ಏಡು ಚೋಗ ಚಡ್ಡೀ ಬನೀನೂ ಜೊತೆಗ ಪಂಚೆ ಟವಲ್ಲೂ ಉಳ್ಳವನಾಗಿ ಹಾಗೂ ಕೇಳ್ದವರಗ ಬೀಡ್ಯ ಜೋ ಬಂದ ತಗ್ದು ಕೊಡುವಷ್ಟು ಆಗಿದ್ದನು. ಈ ದಕ್ಷತ್ತಗೆ ಕಾರಣ ಅವ್ನು ಊರೂರು ಸುತ್ತುತ್ತಾ ಹುಣಸ ಬೇವ್ನ ಬಿತ್ತಗಳ ಸೇರು ಪಾವ್ಲಿ ಥಳ್ಳಾಗಿ ತಕ್ಕಂಡು ಸಾಬರ್ಗ ಮಾರುತ್ತಿದ್ದುದಾಗಿತ್ತು.

ಆದರೇನು? ಮಗಳು ಕೆಂಪಿಗೆ ''ಹುಟ್ಟೋ ಕುಡಿಗಳು ಮೂರು ತಿಂಗ್ಳಾದ ಮ್ಯಾಲ'' ನಿಲ್ಲುತ್ತಿರಲಿಲ್ಲ. ಕ್ರಮೇಣ ಕೆಂಪಿ ಅಪ್ಪನ ಮನೆಯಲ್ಲಿರುವುದು ಹೆಚ್ಚಿತು.

ಆಗ ರಾತ್ರನಗ ದೋಣೀಲಿ ಗಾಳಿ ಪಿಸುಗುಟ್ಟಿದಂತಾಗುವುದು ಅಮೇಕಾಮೇಕ ಅದು ಹುಟ್ಟಿ ಒಳಗೂ ಸದ್ದು ಸುಳುವಾಗುವುದೇ ಮುಂತಾದ್ದು ಮುಪ್ಪಾದರೂ ಕಣ್ಣು ಕಿವಿ ಹಲ್ಲು ಗಟ್ಟಿಗಿದ್ದ ತೂರಮ್ಮನು ಬಂಜನ, ಆ ಕಡೆ ಭಾಗದಲ್ಲಿರೋ ವಾರಗಿತ್ತಿ ಮಗಳಾದ ಈರಿಯು ತನ್ನ ಹೈದನನ್ನು ದೇವನ ಸನ್ನಿಧಿಗೆ ಕರ್ರಂಡು ಹೋಗಿರೋ ಆ ಸರಿಯಾದ ಟೇಮು ಸಿಕ್ಕಿಸಿಕೊಂಡು ತೂರಮ್ಮನ್ನು ಎಡಗೈಲಿ ಮಗಳ ಮಂಗಲ್ವ ಹಿಡ್ಕಂಡೂ ಬಲಗೈಲಿ ಈಚಲ ಇಡಗಲು ಹಿಡ್ಕಂಡು ಬಗ್ಗಿದ್ದ ಬೆನ್ನ ಇನ್ನೂ ಬಗ್ಗಿಸಿ, ಕಪ್ಪು ಹಚ್ಚಿದ್ದ ಕಪ್ಪು ಹಲ್ಲೂನ ನೊರಗುಟ್ಟಿ' ಯಾನಮ್ಮಿ? ಯಾನ ಇದು ನಿನ್ ಮಾಯಾ ಮುಂಗಾಟ? ಚಾಲು ಚಾಲಾಕು'? ಎಂದು ಗುದ್ದಿದಳು.

ಅದಕ್ಕೆ ಕೆಂಪಿ ಹಲುಬಿ ತನಗೆ ಮಕ್ಕಳಾಗದಿರುವುದನ್ನು ಹೇಳಿಕೊಂಡಳು. ತೂರಮ್ಮ ಒತ್ತಾಯಪಡಿಸಿದ್ದಕ್ಕೆ ಅವಳು,

ನೀನು ಹೇಳೂ ಅಂತಂದ್ರ ಅದ ನಾ ಹೆಂಗೇಳಲವ್ವಾ? ಅದ ಯಾವ ಬಾಯಿಂದ ಹೇಳ್ಲಿ? ಕೋಳಿ ಕೆದ್ಕಂಗಾ ಕೆದ್ಕವನ್ಗ ನನ್ ಕಟ್‌ಬಿಟ್ಟೂ..... ಮಕ್ಕಳ ಫಲ್ದ ಊರ್ಜಿತ್ವಾನಾ ಹೆಂಗ್ ಕಾಣ್ಲಿ? ನಾ ಹೇಗ್ ಕಾಣ್ಲಿ? ಎಂದು ಸೊರಗುಟ್ಟಿದಳು.

ಅನಂತರವೂ ಕೆಂಪಿಗೆ ಮಕ್ಕಳ ಫಲವು ಮೂರು ತಿಂಗಳ ಮೇಲೆ ಊರ್ಜಿತವಾಗಲಿಲ್ಲ. ಆಗ, ಚಿಂತ್ಯ ಪಕ್ಕದಲ್ಲಿ ಇಟ್ಟುಕೊಂಡವಳಾಗಿ ತೂರಮ್ಮನು, ಯಾವ ದ್ಯಾವ್ರ ಕೇಳಕ ಅಂತ ವೋದ್ರುನುವ, ಆ ದ್ಯಾವ್ರು ನಾ ವೋದೋಟ್ಗಿಯ ಕುರುತುಗಳ್ಳದಕೂ ಮೊದ್ಲು ಕರ್ದು ಸಿನೇತಗಾರಳ ಕಂಡಂತೆ ಮಾತಾಡುಸ್ತ.... ''ವೋ ವೋ, ಬಾ, ಬಾ, ಮಗಳೇ ಬಾ ತೂರಮ್ಮ ನನಕಂದಾ ಈ ಸಲ ಮಾತ್ರ ಸಟಗೂಮಾ ಚಿಂತ ಮಾಡಬ್ಯಾಡ....'' ಎಂದು

ತಲ ಸವುರೀ ಕಾಣ್ಕ ತಕ್ಕಂಡು ಕಳಿಸುತ್ತಿದ್ದಂತೆ ಮಾರಮ್ಮದೀರ ನುಡಿಯು ಹುಸಿಯಾಗೋ ಮಾಯದ ಪತ್ತೆಗಾಗಿ ಆ ಚಿಂತ್ಯವು ಸೆಣುಸಾಡ್ತು.

....ವೋ ವೋ. ಆಥರ್ವಾಗಿಲ್ಲಾ ಅದೂ ಈ ಥರ್ವಾಗಿ ಅದ ಅದು. ಈ ತೂರಮ್ಮ ಅವ್ಳಲ್ಲಾ ಅವ್ಳು ಮದ್ದು ಮಾಟ ಬಲ್ಲೋಳು. ಕಟ್ಟುಪಾಡು ಮಾಡ್ತಾಳ. ಹಟ್ಟಿ ಆಚ್ಗ ನಿಲ್ಲುಸ್ತಾಳೆ. ಸಿಕ್ಕು ಕಂಡ್ರ ಹಿಂದ್ಲ ಪಾದ್ವ ಮುಂದ್ಕ ಬರುಸ್ತಾಳೆ... ಈ ಥರ್ವಾಗಿ ಯಾವುದೋ ಪಿಲಾನುಗಾರ ಗಾಳೋ ಗರಾವ್ರೋ ದೇವ ಮಾನವರ ಬಳಾಕಿಕೊಂಡು ನನ್ ಕಂದನ್ಗ ಹುಟ್ಟೋ ಕೂಸ ಮುರೀತಾ ಇರೋ ಅದು ಈ ಸಲ ಯಾನಾರೂ ಬಂದುದೇ ಉಂಟಾದ್ರೇ ಈ ನನ್ ಹಳ ಚದಾವು ತಕ್ಕಂಡು ಅದ್ನೀಗ ಇಸ್ಡೂ ಪಾಲು ಮಾಡಿ ತಿಂತೀನಿ... ತಿಂತೀನಿ........' ಅಂತ ಉಂಡು ಉಸುರಾಡಿದಳು".[೧]

ಈಗ ಓದುಗನಿಗೆ ಈ ಹಿನ್ನೆಲೆಯಲ್ಲಿ ಕೆಂಪಿಯ ಹೆರಿಗೆಯಲ್ಲಿ ಅವಳು ತೆಗೆದುಕೊಳ್ಳುವ ಕಟ್ಟೆಚ್ಚರ ಅವಳ ಶಾಸ್ತ್ರಗಳ ಕಟ್ಟುಪಾಡು ಎಲ್ಲ ಸ್ಪಷ್ಟವಾಗುತ್ತದೆ.

ಹೀಗೆ ತೂರಮ್ಮ ತನ್ನ ಹಟ್ಟಿಗೆ ಹಿರಿಯಳಾಗಿ ತನ್ನ ಮಗಳು, ಅಳಿಯ, ಅವರ ಮಗು, ವಾರಗಿತ್ತಿಯ ಮಗಳು ಈರಿ, ಅವಳ ಹೈದ ಎಲ್ಲರ ಹಿತದಲ್ಲಿ ಆಸಕ್ತಿ ವಹಿಸಿ ಶ್ರಮ ತೆಗೆದುಕೊಳ್ಳುವ ಕಷ್ಟಜೀವಿ. ಅವಳ ತಿಳಿವಳಿಕೆಯ ವ್ಯಾಪ್ತಿ ಹಾಗೂ ಅದರ ಹರಹು ಈಗಾನ ನಮಗೆ ಪರಿಚಯವಿಲ್ಲದ್ದು. ಆದರೆ ಅದಕ್ಕೆ ಅದರದೇ ಒಂದು ತರ್ಕ, ಕಲ್ಪನೆಗಳೂ, ಕಾರ್ಯ ಕಾರಣ ಸಂಬಂಧ ಎಲ್ಲ ಇದೆ. ಆ ಜಗತ್ತಿನಲ್ಲಿ ಅವಳು ಉಪಯುಕ್ತಳು. ಮರೆಯಬಲ್ಲವಳು. ದೇವನೂರರು ಇನ್ನೊಂದೆಡೆ ವರ್ಣಿಸುವಂತೆ ಅವಳು 'ರಾತ್ರನಗ ಕಂದಮ್ಮಗಳ ಕಾಯ್ವ ಆ ತಾಯಿ ದೇವತೆಯಂತೆ.

ಈ ಇಡೀ ಕಾದಂಬರಿಯಲ್ಲಿ ನಮ್ಮ ಮುಂದೆ ಎದ್ದು ನಿಲ್ಲುವಂತಹ ಗಂಡು ಪಾತ್ರ ಎಂದರೆ **ಗಾರಸಿದ್ದಾವ.** ಯಾಡನು ಸಹ ಅವನ ಮಟ್ಟವನ್ನು ಮುಟ್ಟುವನೋ ಇಲ್ಲವೋ? ಅವನ ಹೊರ ರೂಪದ ವಿವರ ನೋಡಿ.

ಆ ಹಗೆಯು ಒಂದು ಬೆಟ್ಟಿನ ಅಗಲವಿದ್ದರೆ ಈ ಹುಬ್ಬು ಎರಡು ಬೆಟ್ಟಿನ ಅಗಲವಾಗಿದ್ದ ಆ ಗಾರಸಿದ್ದಾವನ ಮೈ ತುಂಬಾ ರೋಮವು ತುಂಬ್ಕಂಡು ಅವನು ಏನಾರು ಬೆತ್ತಲು ಮಾಡಿ ನಿಲ್ಸದಲ್ಲಿ ಅವನು ಆ ಗುಂಪಿಗೂ ಮೂಲ ಪುರುಷನಾದ ಆದಿ ಮಾನವನಾಗಿ ಕಂಡುಬರುವವನು. ಅವನ ದೇಹಬಲ

ಆ ಕಟ್ಟಾಕಿಸಿಕೊಂಡ ಅವನ ದೇಹವು ಹೊಡೆದವರ ಕಯ್ಗಳನ್ನು ನೋಯುಸ್ತ ಹಾಗಾಗಿ ನೊಂದ ಕಯ್ಗಳಿಗೆ ವಿಶ್ರಾಂತಿ ಕೊಡಲೋಸುಗ ಪ್ರತಿ ಹೊಡ್ತದ ನಡುವೂ

---

೧. ಕುಸುಮಬಾಲೆ, ದೇವನೂರ ಮಹಾದೇವ, ಪು. ೭೮–೮೦

ಡೈಲಾಗ್ ಅವನು ಹದಿನಾರು ಎಳನೀರು ಕದ್ದು ನ್ಯಾಯದಲ್ಲಿ ಅವನ್ನೆಲ್ಲ ತಾನು ಕುಡಿಯಲು ಕಿತ್ತುದಾಗಿ ವಾದಿಸಿ, ನ್ಯಾಯದವರ ಬೈಗುಳಕ್ಕೆಲ್ಲಾ ಒಡ್ಡುವ ಸವಾಲು ಇದು.

ಎಲ್ಲನುವಿ ನಿಮೆದ್ರು ಕುಡುದ್ರ ಒಪ್ಪಗಂಡರ್‍ಯಪ್ಪ ಆಗ್ಲಾರವಿ? ಗಾರಸಿದ್ಧಾವನ ಸವಾಲು ಮೊಕಂಡನಿಗೆ ತಬ್ಬಿಬ್ಬು ಮಾಡೀ ಈಗೇನಾರ ಬಾಜಿಗೆ ಬಿದ್ದು ಇರ ಎಳ್ನೀರುವ ದಿಕ್ ತಪ್ಪಿದು ಅಂತ ಮುಂದಕ ತೋಟದವ ಮಾತು ತಗ್ದುವರಸೆ ಬದಲಿಸಿದನು.

ಆ ಎಳನೀರು ಕಳ್ಳತನದ ನ್ಯಾಯದಲ್ಲಿ ಅಮಾ ಸದ್ದಿಲ್ಲದೆ ನಂಜನಗೂಡಿಗೆ ಹೋಗಿ ದಲಿತ ಮುಖಂಡ ಹಾಗೂ ಮೇಷ್ಟರು ನಾಗರಾಜುವನ್ನು ಕರೆತಂದಾಗ, ಆತನ ಮಾತಿನ ಚಮತ್ಕಾರದಿಂದ ಕಟ್ಟುಗಳಿಂದ ಪಾರಾದ ಗಾರ ಸಿದ್ಧಾವ ಮತ್ತೆ ತನ್ನ ಚಮತ್ಕಾರ ತೋರಿಸುತ್ತಾನೆ. ನಾಗಾರಾಜುವಿನ ಪ್ರಕಾರ ಇವನು ಕದ್ದದ್ದು ತಪ್ಪು, ಅವರು ಪೊಲೀಸಿಗೆ ಕೊಡದೆ ಕಟ್ಟಿ ಹೊಡೆದದ್ದು ತಪ್ಪು ಎಂದು ಆದಾಗ ನ್ಯಾಯದ ಮುಖಂಡನು ತನ್ನ ಜೇಬಿನಿಂದ ನೂರೊಂದು ರೂಪಾಯಿ ನೋಟು ತೆಗೆದು ನಾಗರಾಜುವಿನ ಮುಂದೆ ಹಿಡಿದು "ಅವನ ತಪ್ಪನೂ ಮಡುಗ್ಸುಬುಡು ಮತ್ತ ಈಗ. ಎಲ್ರುಗೂವಿ ಒಂದೇ ತಾನೀಯ ನ್ಯಾಯಾ....." ಅಂದಾಗ, ಗಾರಸಿದ್ಧಾವ ಅದನ್ನೇ ತನ್ನ ಕೈಚಳಕದಿಂದ, "ತನ್ನ ಕಯ್ಗ ಚಿಮ್ಮುಸ್ಕಂಡು ದಂಡವಾಗಿ ಒಪ್ಪಿಸಿ ಅದನ್ನು ತಾನು ಪಡೆದ ಸಾಲ ಎಂದು ಪರಿಗಣಿಸಿ" ಎಂದು ಹೇಳಿ ಪಾರಾಗುತ್ತಾನೆ.

ಅನಂತರ ನಾಗರಾಜು ಜೊತೆ ತಮ್ಮ ಕೇರಿಯತ್ತ ನಡೆಯುವಾಗ ತನ್ನ ಬಲದ ಬಗ್ಗೆ ಅವನ ಸ್ವಂತ ಮಾತು ಕೇಳಿ:

'ಅವ್ವ ನನ್ನ ಕಟ್ಟಾಕಂಡು ಹೊಡೀತಿದ್ರ.....? ಆ ಬಡ್ಡೆತ್ತವು ಎಸ್ಟ್ ಜನ ಇದ್ದರೂ ನಾ ದಕ್ಕೀನಾ ಸೋಮಿ! ನನ್ನ ಕಟ್ಟಾಕ್ದ ಹೊಡಿಯೋ ಗೋರಂಜ್ದ ಗಂಡ್ಸು ಊರಲ್ಲಿ ಇನ್ನೂವಿ ಹುಟ್ಟಿಲ್ಲ ಅಂದ್ಕಳಿ....... ಅಮ್ಮಮ್ಮಾ!'

'ಏನ್ರೀ ನಿವು ಆಡ ಮಾತು? ತಪ್ಪೂಕೊಟ್ಟೂ......'

"ಅದ ಯಾವ ಸೀಮಾ ತಪ್ಪಾಸ್ವಾಮಿ ಅದು? ನಾನೇ ಒಂದ್ ರೂಪಾಯ ತಪ್ಪು ತಕ್ಕ ಬರ್‍ಲಿಲ್ವಾ?" ಸಾಲವಲ್ಲವೇನ್ರಿ ಅದು?'

ಎಂಥ ಸಾಲ್ವಸೋಮಿ ಅದು? ಅವ ಬಂದು ನನ್ತಪು ತರ್‍ಕಂದನ್'.......[೧]

ಹೀಗೆ ಬೆಳೆದಿರುವ ಅವನ ಪಾತ್ರ ದಲಿತರ ಜೀತ ವಿಮೋಚನಾ ಮೆರವಣಿಗೆಯಲ್ಲಿ ಹೇಗೆ ಬೆಳದಿದೆ ನೋಡಿ: ಗಾರೆ ಸಿದ್ಧಾವ ಮಾಡುವ ಕೆಲಸ ಮೂಲತಃ ಗಾರೆ ಕೆಲಸವಾದರೂ ಕುಸ್ತಿಕಲೆಯನ್ನು ಬಲ್ಲವನೂ ಆಗಿದ್ದಾನೆ ಮಾತ್ರವಲ್ಲ ತನ್ನ ಸಾಂದರ್ಭಿಕವಾದ

೧. ಯಾರ ಜಪ್ತಿಗೂ ಸಿಗದ ನವಿಲುಗಳು – ಪುಟ. ೧೩೫–೧೩೬

ಹಾಸ್ಯದ ಚಾಲಾಕಿ ಮಾತುಗಳ ಮೂಲಕ ಸಮೂಹವನ್ನು ನಗೆಗಡಲಲ್ಲಿ ತೇಲಿಸುವ ಹಾಸ್ಯಕಲೆಯಲ್ಲಿ ಪಳಗಿದ ಚತುರನೂ ಆಗಿದ್ದಾನೆ. ಜೀತ ವಿಮೋಚನಾ ಚಳವಳಿಯ ಅಂಗವಾಗಿ ನಡೆಯುತ್ತಿದ್ದ ಮೆರವಣಿಗೆಯ ಆರಂಭದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ನಮಸ್ಕರಿಸಿ ಏಳು ಮಲೇ ಎಪ್ಪತ್ತೇಳು ಮಲೇ ನಮ್ ಎತ್ತಪ್ಪಸೋಮಿ ಮಾದಪ್ಪಗ ಉಘೇ ಅನ್ನೀ ಎಂದು ತೆಂಗಿನಕಾಯಿ ಒಡೆದು ಚರಿತ್ರೆಯ ಮಲೆಯ ಮಹದೇಶ್ವರನ ಸಾಂಸ್ಕೃತಿಕ ಹೋರಾಟದ ಸತ್ವವನ್ನು ಸಮಕಾಲೀನ ಸಾಮಾಜಿಕ ಚಿಂತಕ ಅಂಬೇಡ್ಕರ್ ಅವರಲ್ಲಿ ಕಂಡು ತನ್ನ ಭಾವುಕ ನೆಲೆಯ ಭಕ್ತಿಗೌರವವನ್ನು ತೋರಿಸುವಂಥ ಮುಗ್ಧನೂ ಆಗಿದ್ದಾನೆ. ಅದೇ ಮೆರವಣಿಗೆಯಲ್ಲಿ ಸಿಗರೇಟು ಸೇದುವ ಮೂಲಕ ಮೇಲ್ಜಾತಿ ವರ್ಗದವರು ತನ್ನನ್ನು ಗಮನಿಸಬೇಕೆಂಬ ಇರಾದೆಯವನೂ ಆಗಿದ್ದಾನೆ. ಹೀಗೆ ಇಡೀ ಕಾದಂಬರಿಯಲ್ಲಿ ಗಾರಸಿದ್ದ್ಯಾವನ ಪಾತ್ರ ತನ್ನ ಹಲವು ವಿಶೇಷತೆಗಳ ಮೂಲಕ ಗಮನಾರ್ಹ ಪಾತ್ರವಾಗಿ ಕಂಡುಬರುತ್ತದೆ.

ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೊಂದು ಇದೆ. ''ಮೇಲ್ಜಾತಿಯವರು ತನ್ನ ಮೇಲೆ ನಡೆಸುವ ದಬ್ಬಾಳಿಕೆ, ದೌರ್ಜನ್ಯದ ತೀವ್ರತೆ ಗಾರಸಿದ್ದ್ಯಾವನಿಗೆ ತಟ್ಟುವುದಿಲ್ಲ. ಈತ ತನ್ನ ಮೇಲೆ ಆಗುತ್ತಿರುವ ಆ ದೌರ್ಜನ್ಯ, ಅನ್ಯಾಯ, ದಬ್ಬಾಳಿಕೆಯನ್ನು ಸಹಜವೆಂಬಂತೆ ಸ್ವೀಕರಿಸುತ್ತಾನೆ. ಅದು ಅವನಿಗೆ ಶೋಷಣೆಯ ಅವಮಾನದ ಸಂಗತಿಯಾಗಿ ಅವನು ಬಳಸಿಕೊಳ್ಳುತ್ತಾನೆ. ಇಲ್ಲಿ ಹೊಸ ಸಾಮಾಜಿಕ ಪ್ರಜ್ಞೆ ಕಾಣುವ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳು ಸ್ವತಃ ಅವುಗಳಿಗೆ ಬಲಿಯಾಗುತ್ತಿರುವ ದಲಿತರ ಸಂವೇದನಾ ಸೀಮೆಯೊಳಗೆ ದಾಖಲಾಗದೆ ಹೋಗುವ ವಿಸಂಗತ ಮತ್ತು ದುರಂತ ಇವು ಸಂವೇದನಾಶೀಲ ಓದುಗರ ಅನುಭವಕ್ಕೆ ಬರುತ್ತದೆ ಎಂದಿರುವ ಪ್ರೊ. ಜಿ.ಎಚ್.ನಾಯಕ ಅವರ ಅಭಿಪ್ರಾಯವನ್ನು ಒಪ್ಪಿ ಸ್ವೀಕರಿಸಬಹುದಾಗಿದೆ. ಹೀಗೆ ಒಂದು ಬಗೆಯ ಸಂವೇದನಾ ಜಡತೆ ಈ ಕೃತಿಯ ಅನಕ್ಷರಸ್ಥ ದಲಿತ ಪಾತ್ರಗಳ ಸನ್ನಿವೇಶದಲ್ಲಿ ಕಾಣಿಸಿಕೊಳ್ಳುವುದನ್ನು ನಾವು ನೋಡುತ್ತೇವೆ. ನಿರಂತರ ಶೋಷಣೆ, ದೌರ್ಜನ್ಯಕ್ಕೆ ಒಳಗಾದ ದಲಿತ ಜನಾಂಗದವರು ಶೋಷಿತ ತಳಸಮುದಾಯದವರ ಈ ಬಗೆಯ ಸಂವೇದನಾ ಜಡತೆ ಅವರ ರಿಕ್ತ ಆರ್ಥಿಕ, ಸಾಮಾಜಿಕ ಸಂದರ್ಭದಲ್ಲಿ ಅನಿವಾರ್ಯವೆಂದು ತೋರುತ್ತದೆ. ಈ ಬಗೆಯ ಅನಿವಾರ್ಯ ಸಂವೇದನಾ ಜಡತೆಗೆ ಅವರು ಒಳಗಾಗಿದ್ದರೆ ಅವರ ಬದುಕು ಇನ್ನೂ ದುರಂತವಾಗುವ ಅಪಾಯಕ್ಕೆ ಒಳಗಾಗಬೇಕಾಗಿತ್ತೆಂದು ತೋರುತ್ತದೆ.[೧]

ಕುಸುಮಾಳು ಹೆಸರಿಗೆ ತಕ್ಕನಾಗಿ ಕುಸುಮದಂತೆ ಸುಕೋಮಲಳೂ ಪರಿಶುದ್ಧಳೂ ಬಾಲೆಯಾ ಮುಗ್ಧಳೂ ಅನುಪಮ ಸುಂದರಿಯೂ ಆಗಿದ್ದಾಳೆ. ಎಳೆ ನಗುವನ್ನು ಮತ್ತು

---

೧. ಯಾರ ಜಪ್ತಿಗೂ ಸಿಗದ ನವಿಲುಗಳು, ಪುಟ. ೫

ಎಳೆ ಚೆಲುವನ್ನು ಸೇರಿಸಿ ಭಟ್ಟಿ ಇಳಿಸಿ ಮಾಡಿದಂಥ ಚೆಲುವೆ ಇವಳು. ಲೇಖಕರು ಹೇಳುವಂತೆ ಸಿವ ಸಿವಾ. ಅವಳು ನಕ್ಕರೋ ಅವಳ ಹಲ್ಲಿನ ಮ್ಯಾಗಲ ಆ ಒಂಚುಟ್ಟಿ ಸಿಂಗಲ್ಲಿನಲ್ಲೆ ಈ ಲೋಕದ ಚಲೂನಲ್ಲಿ ಆ ಭಗವಂತ್ನು ಇಟ್ಟೂ ಆ ರತಿ ಅಂಬವಳ್ಗಿಯಾ ಅದ್ನೀಗ ಹೆಂಗಾರೂ ಮಾಡಿ ಕಿತ್ಕಂಡು ತನ್ನ ಹಲ್ಲ್‌ನ ಮ್ಯಾಕ್ ಇಟ್ಟಗಬೇಕೂ ಅನ್ಸಂಗ ಇದ್ದವಳು ಅವಳು. ಆದರೆ ಈಗ ಅವಳಲ್ಲಿ ಬಸ್ಕಂಡ್ರು ಒಂದು ಚಟಾಕು ರಗ್ತ ಇದ್ದುದೂ ಇಲ್ವೊ ಅನ್ನಂಗವ್ಳೆ. ಅವಳ ಈ ಮ್ಲಾನ ಸ್ಥಿತಿಗೆ ಅವಳು ಹೊಲೆಯರ ಚೆನ್ನನ ಸಂಗಮಾಡಿ ಮಗುವನ್ನು ಪಡೆದದ್ದೆ ಕಾರಣವಾಗದೆ. ಇವಳ ಗಂಡ ಕೂಸಿನ ರೂಪ ಮತ್ತು ಬಣ್ಣವನ್ನು ನೋಡಿ ಕುಸುಮಾ ಮತ್ತು ಚೆನ್ನರ ನಡುವಿನ ಸಂಬಂಧವನ್ನು ದೃಢಪಡಿಸಿಕೊಂಡು ಇವಳನ್ನು ನೋಡದೆ ಮಾತಾಡಿಸದೆ ಮುಖ ಕಪ್ಪಿಟ್ಟುಕೊಂಡು ಹೊರಟು ಹೋಗುತ್ತಾನೆ. ಅಂದರೆ ಇನ್ನು ಮುಂದೆ ಇವಳು ಗಂಡನ ಮನೆಯ ಆಶ್ರಯ ಮತ್ತು ಹಕ್ಕನ್ನು ಕಳೆದುಕೊಂಡಳೆಂದೇ ತಿಳಿಯಬೇಕಾಗುತ್ತದೆ. ಕುಸುಮಾಳ ತಂದೆ ಸೋಮಪ್ಪರು ಯಾರಿಗೂ ತಿಳಿಯದ ರೀತಿಯಲ್ಲಿ ಚೆನ್ನನ ಕೊಲೆ ಮಾಡಿಸಲಾಗಿ ಅದು ಕುಸುಮಾಳಿಗೂ ತಿಳಿದು ಅವಳು ಇನ್ನೂ ಚಿಂತಿತಳಾಗುತ್ತಾಳೆ. ಹಾಗಾಗಿ ಅವಳ ದುಃಖ ಅಧಿಕಗೊಂಡು ಕಣ್ಣೀರು ಬತ್ತಿಹೋಗಿ ಒಂದು ರೀತಿಯಲ್ಲಿ ಮಂಕು ಕವಿದಂತಾಗಿ ಅವಳ ಸ್ಥಿತಿ ಚಿಂತಾಜನಕವಾಗುತ್ತದೆ. ಕುಸುಮಾಳ ಈ ಸ್ಥಿತಿಯನ್ನು ಅರ್ಥಮಾಡಿಕೊಳ್ಳದ ಅವಳ ಮನೆಯವರು ಅವಳಿಗೆ ಭೂತ–ಪ್ರೇತ ಮೆಟ್ಟಿಕೊಂಡಿವೆ ಎಂದು ಭಾವಿಸಿ ಅವಳನ್ನು ಅದರಿಂದ ಪಾರುಮಾಡಲು ಮಾಂತ್ರಿಕರ ಮೊರೆಹೋಗುತ್ತಾರೆ.

ಮೊದಲು ಊರಸುತ್ತಿನ ಎಂಟುಜನ ಮಾಂತ್ರಿಕರು, ನಂತರ ಕೊಳ್ಳೇಗಾಲದ ಎಂಟು ಜನ ಮಾಂತ್ರಿಕರು, ಅನಂತರ ಮಲೆಯಾಳದ ಎಂಟು ಜನ ಮಾಂತ್ರಿಕರು, ತದನಂತರ ದೇಶದೇಶದ ಎಂಟು ಜನ ಮಾಂತ್ರಿಕರು ಸರದಿಯಂತೆ ಬಂದು ಅವಳಿಗೆ ನಾಗಬೆತ್ತದಿಂದ ಬಲವಾಗಿ ಹೊಡೆಯಲು ನಾಗಬೆತ್ತಗಳೇ ಮುರಿದು ಹೋಗುತ್ತವೆ. ಮತ್ತು ಆ ಮಾಂತ್ರಿಕರು ಕ್ರಮವಾಗಿ ಎಂಟು, ಹದಿನಾರು, ಮೂವತ್ತೆರಡು ಹಿಡಿ ಕೂದಲನ್ನು ಆ ಬಾಣಂತಿ ಕುಸುಮಾಳ ತಲೆಯಿಂದ ಕಿತ್ತು ಅವಳ ತಲೆ ದೇಶವಿದೇಶದ ಮಾಂತ್ರಿಕರು ಬರುವಷ್ಟರಲ್ಲಿ ಸಂಪೂರ್ಣ ಬೋಳಾಗಿ ಬಿಟ್ಟಿರುತ್ತದೆ. ಈ ಮಾಂತ್ರಿಕರು ಕುಸುಮಾಳನ್ನು ಅಮಾನವೀಯವಾಗಿ ಹೊಡೆದು ಬಡಿದು ಚಿತ್ರಹಿಂಸೆ ನೀಡಿ, ಅವಳ ಕೂದಲನ್ನು ಕಿತ್ತು, ಅವಳನ್ನು ಮುಂಡೆ ಮಾಡಿದರೂ ಅವರಿಗೆ ಅವಳ ಚಿಂತೆ ನೋವಿನ ಕಾರಣವು ತಿಳಿಯುವುದಿಲ್ಲ. ಮಾಂತ್ರಿಕರು ಅವಳ ಕೂದಲನ್ನು ಕಿತ್ತು ತಲೆಬೋಳು ಮಾಡುವುದು. ಚನ್ನನ ಸಾವಿನ ಸಂಕೇತವೆಂದು ತಿಳಿಯಲು ಅವಕಾಶವಿದೆ. ಮನುಷ್ಯನಿಗೆ ಬದುಕುವ ಪ್ರೀತಿಯ ನೆಲೆ ತಪ್ಪಿ, ಅತ್ಯಂತ ಕಷ್ಟದ ಸನ್ನಿವೇಶ ನಿರ್ಮಾಣಗೊಂಡು, ಸಹಾಯದ ಹಸ್ತಗಳು ಮಾಯಾವಾದಾಗ ಬದುಕು ತೀರಾ ಅಸಹನೀಯವೆನಿಸಿ ಸಹಿಸಲಸಾಧ್ಯವಾದ

ನೋವು ಸಂಕಟದ ದುಃಸ್ಥಿತಿಗೆ ತಲುಪಿದಾಗ ಚಿತ್ತವಿಕಾರಕ್ಕೆ ಒಳಗಾಗುವುದು ಸಹಜವೆಂದು ತೋರುತ್ತದೆ. ಅಂಥ ಸಂದರ್ಭದಲ್ಲಿ ಆತ ಅಸಹಜವಾಗಿ ವರ್ತಿಸುವುದು ಸಾಮಾನ್ಯವಾದ ಸಂಗತಿ. ಆ ಸಂದರ್ಭವನ್ನು ಸರಿಯಾಗಿ ಅರಿಯದ ಜನ ಅವನಿಗೆ ಭೂತಮೆಟ್ಟಿದೆ ಎಂದು ಭಾವಿಸುವುದು ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಇದು ಕುಸುಮಾಳ ಬದುಕಿನ ಸಂದರ್ಭದಲ್ಲೂ ಜರುಗಿದೆ. ಹಾಗಾಗಿಯೇ ಮನೆಯವರ, ಗಂಡನ ಪ್ರೀತಿ, ಸಾಂತ್ವನಕ್ಕೆ ಬದಲಾಗಿ ಅವಳು ವಿಪರೀತ ಶಿಕ್ಷೆಗೆ ಒಳಗಾಗುತ್ತಾಳೆ. ಕುಸುಮಾಳ ತಲೆಗೂದಲನ್ನು ಕಿತ್ತು ಹಿಂಸಿಸಿ ಅವಳನ್ನು ಮುಂಡೆ ಮಾಡಿ ವಿಕಾರಗೊಳಿಸುವುದು ಸಮಾಜದ ಕ್ರೌರ್ಯ, ಅಂಧಶ್ರದ್ಧೆ ಮತ್ತು ವಿಕಾರಕ್ಕೆ ಹಿಡಿದ ಕನ್ನಡಿಯಾಗಿದೆ.[೧] ಇದು ಕೇವಲ ಕುಸುಮಾಳೊಬ್ಬಳ ಜೀವನ ಸಂದರ್ಭದ ವ್ಯಥೆಯ ಕಥೆಯಾಗಿರದೆ ನಮ್ಮ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಯಾವ ರೀತಿಯ ಕ್ರೌರ್ಯ, ಮಾನಸಿಕ ಹಿಂಸೆಗೆ ಈಡಾಗುತ್ತಾಳೆಂಬ ವ್ಯಥೆಯ ಕಥೆಯನ್ನು ಧ್ವನಿಸುತ್ತದೆ. ಕೆಲವರು ನಾಗಬೆತ್ತವನ್ನು ಲೈಂಗಿಕ ಒಳಾರ್ಥದ ಪದ ಎಂದು ಭಾವಿಸಿ, ಮಾಂತ್ರಿಕರು ನಾಗಬೆತ್ತದಿಂದ ಅವಳನ್ನು ಹೊಡೆಯುವುದನ್ನು ಆಕೆಯ ಪ್ರೇಮದ ಬದುಕಿನ ಮೇಲೆ ಸಮಾಜ ಮಾಡುವ ಲೈಂಗಿಕ ದೌರ್ಜನ್ಯತೆಯ ಸಂಕೇತವಾಗುತ್ತದೆ.

ಕುಸುಮಾಳ ಪಾತ್ರ ಇಲ್ಲಿ ಮುಖ್ಯ ಪಾತ್ರವಾಗಿ, ಕೇಂದ್ರಬಿಂದುವಾಗಿ ಕಾಣಿಸದಿದ್ದರೂ ಕೃತಿಯಲ್ಲಿನ ಎಲ್ಲ ಸ್ತ್ರೀಪಾತ್ರಗಳ ದುಃಖತಪ್ತತೆಯ ಪ್ರತೀಕವೆಂದು ತಿಳಿಯಬೇಕಾಗುತ್ತದೆ. ಈ ಕಾರಣದಿಂದಾಗಿಯೇ ಈ ಕೃತಿಯ ಶೀರ್ಷಿಕೆ ಸಾಂಕೇತಿಕ ಸ್ವರೂಪದ್ದಾಗಿದ್ದು ಅರ್ಥಪೂರ್ಣವೆನಿಸಿದೆ ಎನ್ನಬೇಕು.

ಕುಸುಮಬಾಲೆಯ **ಅಮಾಸ** ಹಿಂದೆ ದ್ಯಾವನೂರು ಕಥಾಸಂಗ್ರಹದಲ್ಲಿ ನಾವುಕಂಡ. 'ಹುಲಿಯಾಸ' ಅಮಾಸನೇ. ಆ ಅನಾಥ ಹುಡುಗ ಬೆಳೆದು ಹಿಡಿದಿರುವ ಕಸುಬು ಜಿಗುಪ್ಸೆ ತರುವಂಥಹದು.

ಕುಟ್ಟೋ ತಮ್ಮಟ ಮುಂದ ಕುಣೀತಾ ಬೆಳೆದ ಅಮಾಸನಿಗ, ಅವ್ನ ಸೈಕಲಲ್ಲಿ ನೇತಾಡೋ ಗೋಣಿಚೀಲ್ದ ಸಾಮಾನನ್ನು 'ಯಾನುಡ ಅದು' ಅಂತ ಯಾರಾರು ಕೇಳುದ್ರ 'ಐ ಚರ‍್ಮ ಕನ್ನ ಬುದ್ಯೆ' ಅಂತಿದ್ದಾನಾದರೂ ಅವು ಚರ್ಮವಾಗಿರದೆ ಮುಟ್ಟಿನ ಸ್ಯಾಲವಾಗಿದ್ದುವು. ಮುಟ್ಟಿನ ಸ್ಯಾಲ ಸಂಪಾದನ ಕಾಯಕದ ಯಶಸ್ಸಿಗಾಗಿ ಅಮಾಸನು ನೂರರವರ್ಗ ನಂಬರ್ ಕಲ್ತು ಅದು ಜ್ಯೋತಿಷಿಗಳ ಮಂತ್ರದ ಅಂಕಿಯಂತೆ ಬಳುಸ್ತಾ, ಊರಲ್ಲಿ ಯಾವಾವ ಹಟ್ಟಿಯಲ್ಲಿ ಯಾವಾವ ಹೆಂಗಸು ಯಾವಾವಾ ದಿನವು ಮುಟ್ಟಾಗುವಳು ಎಂಬುದರ ಒಂದು ಕರಾರುವಾಕ್ಕಾದ ಪಂಚಾಂಗ್ವ ರಚುಸಿಕೊಂಡಿದ್ದನೆ....

---

೧. ಸಂಕ್ರಮಣ, ಚಂಪಾ, ಪು. ೪೮

ಈ ಪಂಚಾಂಗದ ಪ್ರಕಾರವಾಗಿ 'ಮುಟ್ಟಿನ ಸ್ಯಾಲಗಳ' ಮಾಯಾವಾಡುತ್ತಾ ''ನೇಮ ನಿಷ್ಠೆಗೆ ಹೆಸುರಾದ ಮ್ಯಾಗಲ ಕೇರಿ ಯಮ್ಕಗಳ್ಗ'' ದಿಕ್ಕಟಿಸಿದ್ದನು. ಅವನ್ನು ''ಪ್ರೆಸ್ಸಾಗಿ ಬಿಕರಿ ಮಾಡಲು ಸಿಕ್ಕದಂದೇ ನೇರ್ವಾಗಿ ನಂಜನಗೂಡಿನ ಹೊಳೆ ತಲುಪಿ ಅಲ್ಲಿ ಅಗಸನ ಯಾಸದಲಿ ಮಾಲು ಹಸನು ಮಾಡಿ ಅಡ್ವಾನ್ಸಾ ಕೊಟ್ಟಿದ್ದ ಸಾಬರ್ಗ ನಿಯತ್ತಲಿ ಮಾರುತ್ತಿದ್ದನು. ''ಇದರಿಂದ ಅವನ ಹೊಟ್ಟೆ ಬಟ್ಟೆ, ಬೀಡಿ, ಸಿನಿಮಾ, ಸೈಕಲ್ ಬಾಡಿಗೆ ಆಗಿ, ಉಳಿದುದರಲ್ಲಿ ಮಾರಿಗುಡಿಯ ಕುರಿಯಯ್ಯನಿಗೆ ಗಂಜಿ ಏರ್ಪಾಡೂ ಆಗಿತ್ತು.

ಚನ್ನ, ಅವನ ಅಪ್ಪ – ಅಮ್ಮ

ಚನ್ನ, ಅವನ ಅಪ್ಪ, ಅಮ್ಮ – ಇವು ಕಾದಂಬರಿಯ ದುರಂತ ಪಾತ್ರಗಳು. ಚನ್ನನಲ್ಲಿ ಮೋಹಗೊಂಡ ಕುಸುಮಳೂ ದುರಂತಕ್ಕೀಡಾಗುವಳಾದರೂ, ಈ ತರುಣ ಪ್ರಣಯಿಗಳು ಕಾದಂಬರಿಯ ಪ್ರಮುಖ ಪಾತ್ರಗಳಾದರೂ ಅವರ ಪ್ರೇಮ ಪ್ರಸಂಗವು ಇಲ್ಲಿ ಮಹತ್ವದ್ದಾಗಿಲ್ಲ, ಮಹತ್ವದ್ದಾಗಿರುವುದು, ಆ ಪ್ರಸಂಗದ ಹಿನ್ನೆಲೆಯಲ್ಲಿ ಚಿತ್ರಿತವಾಗಿರುವ ಆ ಗ್ರಾಮ ಸಮುದಾಯದ ವೈವಿಧ್ಯಪೂರ್ಣ ಜೀವನ.

ಚನ್ನ ಅವನ ತಂದೆ ತಾಯಿಗಳ ಮೊದಲ ಮಗ. ಇಂಗ್ಲಿಷೊಡನೆ ಗುದ್ದಾಡಿ ಬೀಯೆ ಎಂಬ ಏಡಕ್ಷರ ಆಗದೆ, ಎತ್ತೂ ಇಲ್ಲದ ಚನ್ನನಿದ್ದನು. ಹೊಟ್ಟಗ ಯಾನಾರು ಕಮ್ಮಿ ಬಿದ್ದು ಗಡುಗೆಗೆ ಗತ್ತು ಬಾರದಿದ್ದರೆ, ನಡೆಯುವುದ ಬುಟ್ಟು ಕೂರುತ್ತಿದ್ದ ಚನ್ನನು ತಮ್ಮದೀರ ಜೀತದ ತಂಗಳಲ್ಲಿ ನಿಂತು ಚನ್ನರಸ ಎಂದು ಹೆಸರು ಬದಲಾಯಿಸಿಕೊಂಡಿದ್ದ...........

ತಾನೂ, ತನ್ನ ಕೇರಿಯ ಜನವೂ ಜಬರ್ದಸ್ತಾಗಿ ಬಾಳಬೇಕು ಎಂಬುದು ಅವನ ಆಸೆ. ಇತರರೆದುರು ತಾವು ಜಗಳವಾಡದಿರುವುದು, ''ಮೇಲ್ಜಾತಿಗೆ ಕಣ್ಣುರಿಮಾಡಲು ಮೀಸೆಬುಡುವುದು'' – ಆ ಆಸೆ ಈಡೇರಲು ಅವನಿಗೆ ಹೊಳೆಯುವ ಮಾರ್ಗಗಳು. ಅದರಿಂದಲೇ ಗಾರಸಿದ್ದ್ಮಾವ ''ಕಂಡವ್ರ ಎಳ್ನೀರ ಮುಟ್ಟಲ್ಲ'' ಎಂದು ಹೇಳಿ ಕಂಡವರ ತೆಂಗಿನ ಮರ ಹತ್ತದೆ ಇರಬೇಕು ಎಂದು ಅವನು ಬಯಸುತ್ತಾನೆ.

ಗಾರಸಿದ್ದ್ಮಾವಗೆ ಬಿದ್ದ ಏಟುಗಳನ್ನು ಬೀಜ್ವಮಾಡಿ ನೆಟ್ಟು ಊರಲ್ಲಿ ದಲಿತ ಸಂಘವ ಚಿಗುರಿಸುತಲಿದ್ದ ನಾಗರಾಜುವಿನಿಂದ ತಪ್ಪಿಸಿಕೊಳ್ಳಲೇನೋ ಎಂಬಂತೆ....... ಚನ್ನನು ಕೈಲೊಂದು ಹಳ ಇಂಗ್ಲಿಷ್ ಪೇಪರ್ ಹಿಡ್ದು ಬಸ್ಸುಗ ಕಾಯ್ತ ಅರಳಿಮರದ ಕೆಳೂಗ ನಿಂತಿದ್ದನು.

ಹೀಗೆ ಒಂದು ತರಹದ ಥಳಕು ವ್ಯಕ್ತಿತ್ವ ಅವನದು.

ಇವನಿಗೆ ಹೋಲಿಸಿದರೆ ಚನ್ನನ ಅಪ್ಪನು ಕಾದಂಬರಿಯು ಚಿತ್ರಿಸಿರುವ ಅತ್ಯಂತ ವಿವೇಚನಾ ಪೂರ್ಣವಾದ ಮನುಷ್ಯನಾಗಿದ್ದಾನೆ.

[illegible]

[illegible]

[illegible]

[illegible]

[illegible]

[illegible]

[illegible]

ಚನ್ನನ ಅಪ್ಪ ಬಳಿ ದುಪ್ಪಟ ಹೊದ್ದುಕೊಂಡು, ಪಕ್ಕದಲ್ಲಿ ಊರ್ಗೋಲು ಇಟ್ಟುಕೊಂಡು, ಇತ್ತಗ ಬೀದೀಗೂ ಸೇರ್ದಂಗ ಅತ್ತಗ ಹಟ್ಟಿಗೂ ಸೇರ್ದಂಗ ಇರೋತಾವುನಲ್ಲ ಕೂತವನು ದುಪ್ಪಟ ಒಳಗಿಂದ ಕಯ್ಯ ತಗುದು' 'ಜಪ್ಪೋ...... ನಮ್ಮ ತೂರಮ್ಮನ ಅಳಿಮಯ್ಯರಲ್ವ! ನಿಮ್ಗೂ ನಿಮ್ಗೂವ ಹತ್ರದ ಸಂಬಂಜಕನ, ಒಂದ್ ಬೀಡಿ ಎಸ್ದುಬುಟ್ಟು ಹೋಗ್ರಪ್ಪೋ.... ಎಂದು ಕಯ್ಯ ನೀಡಿದನು.

ಹೀಗೆ ಕಂಡ ಕಂಡ ತಮ್ಮವರಿಂದ ಬೀಡಿ ಪೀಕಿಸುವ ಮುದುಕನಾಗಿ ಕಂಡುಬರುವವನು ದಲಿತರ ಜೀತ ವಿಮೋಚನಾ ಮೆರವಣಿಗೆಯ ಬಳಿಕ ಆ ಊರಿನ ಶಿವಾಚಾರದವರು ಮಾಡುವ ಗೇಲಿಯನ್ನು ಎದುರಿಸುವಾಗ ತನ್ನ ಚಮತ್ಕಾರದ ಮಾತಿನಿಂದ ನಮ್ಮನ್ನು ಅಚ್ಚರಿಗೊಳಿಸುತ್ತಾನೆ.

ಬೀಡಿ ಅಂಗಡಿಯಲ್ಲಿ ಕೂಡಿದ್ದ ಶಿವಾಚಾರದವರು. ಅಲ್ಲಿಗೆ ಬಂದ ಆ ಮುದುಕನನ್ನು "ಬನ್ನಿ ಬುದ್ದೇ, ಬನ್ನಿ ಸೋಮೋ" ಎಂಬುದು ಗೇಲಿಮಾಡಿ ತಲೆಗೊಂದು ಮಾತನಾಡುತ್ತಾ, ಒಬ್ಬನು ಜೀತಬುಟ್‌ಮ್ಯಾಲ ಹೊಲೊರ್ನೇನ ಮಾತಾಡ್ಸಕ ಆದ್ದಯ್ಯ! ಯಾನಾರು ನೋಡಕ್ಕ ಆದ್ದಯ್ಯ! ಆಗ ಹೊಲಂದ್ರ ಅನ್ನ ತುಪ್ಪನಿಯ ಕಯ್ಯೋ ಉಣ್ಣಾದು... ಎಂದಾಗ ಚನ್ನನ ಅಪ್ಪ ತನ್ನ ನಿಲ್ಲದ ನಗುವಿನಿಂದ ಎದುರಿಸುತ್ತಾ, ಕೊನೆಗೆ 'ಗುಳ್ಳೆನರಿ ಲಿಂಗ ಕಟ್ಟಿಸ್ಗಂಟ' ಅವರನ್ನು ತೆಪ್ಪಗಾಗಿಸಿ, ಬೀಡಿ ಪಡೆದುಬರುತ್ತಾನೆ.

ಆ ಗುಳ್ಳೇನರಿ ಲಿಂಗ ಕಟ್ಟಿಸಿಕೊಂಡ ಕಥೆಯಲ್ಲಿ ಗುಳ್ಳೇ ನರಿಯು ನಳ್ಳಿ ತಿನ್ನುವುದನ್ನು ಬಿಡುವುದು ಸಾಧ್ಯವಾಗದೆ ಹೋದ ಹಾಗೆ, ದಲಿತರೂ ಜೀತ ಬಿಡುವುದು ಸಾಧ್ಯವಿಲ್ಲ ಎಂದು ಆ ಮುದುಕ ಹೇಳಿದ ಎಂದು ಅರ್ಥ ಹೇಳುವವರೂ ಇರಬಹುದು. ಇಲ್ಲಿನ ಪ್ರಶ್ನೆ ಜೀತ ನಿವಾರಣೆಯಲ್ಲ. ಗೇಲಿ ಮಾಡುವವರ ಬಾಯಿ ಮುಚ್ಚಿಸುವ ಮಾತುಗಾರಿಕೆ. ಒಂಟಿ ಮುದುಕ ಬೇರೇನು ಮಾಡಬಹುದಿತ್ತು?

ಆದರೆ ಅವನು ಮತ್ತು ಬಹುಮಟ್ಟಿಗೆ ಕಾದಂಬರಿಯಲ್ಲಿ ಕಾಣಿಸಿಕೊಂಡಿಲ್ಲದ ಚನ್ನನ ಅಮ್ಮ ಕಾದಂಬರಿಯ ಕೊನೆಯಲ್ಲಿ ನಮ್ಮ ಹೃದಯಗಳನ್ನು ಕಲುಕುತ್ತಾರೆ. ಚನ್ನ ವೈಭವದಿಂದ ಬೊಂಬಾಯಿಯಲ್ಲಿದ್ದಾನೆ ಎಂದು ಹರಡಿದ ಗಾಳಿ ಸುದ್ದಿಯಿಂದ ಆಶಾಗೋಪುರವನ್ನು ಕಟ್ಟಿಕೊಂಡಿರುವ ಆ ತಾಯಿ ಮಾತು ಆರಂಭಿಸಿ, 'ಆದಿಯಾ ಎಲ್ರೂ ಅಂತಾರಲ್ಲಾ..... ನಾವೂ ಬಂಜಿನ ಹೋಗಿ ವಸಿ ನೋಡ್ಕಂದಾರೂ ಬರಾವು' ಅಂದಳು. ಅದುಕ ಚನ್ನನ ಅಪ್ಪ ಕೆಮ್ಮಲ್ಲ ನೆಗಾಡ್ತ ಮಾತಾಡಿದನು. ಅಯ್ಯೋ ಪೆಚ್ಚೀ...... ಬೊಂಬಾಯಿ ಅಂದ್ರ ಯಾನಂದ್ಕಂಡಿದ್ದೀಯಾ..... ಇನ್ನು ನಮ್ಮಂಥವರ್ಗ ಅದೂದೂ? ಅಯ್ಯೋ ಅದ್ರ ಕಥ್ಯಾ ಅನಾ ಏನೇಳ್ಳಿ ತಕ್ಕಾ....

ಅವನು ಹಣದ ಮಾತು ಎತ್ತಿದಾಗ ಅವಳು ಹೇಳುತ್ತಾಳೆ.

ಅದಿಯಾ, ಇನ್ನೊಂದು ಗಂಡ್ನೂ ಜೀತ್ಕ ಇರುಸ್ ಬುಡಾವು. ಹೊಲ್ವ ಭೋಗ್ಯಕ್ಕ ಹಾಕ್ ಬುಡಾವು. ಅವನು ಎತ್ತುವ ಎಲ್ಲ ಆಕ್ಷೇಪಣೆಗೂ ಆ ತಾಯಿ ಹೃದಯ ಸಮಜಾಹಿಷಿ ಕಂಡುಕೊಳ್ಳುತ್ತದೆ. ಕೊನೆಯಲ್ಲಿ ಅವನು ವಿಧಿವಾರದ ಮೊರೆಹೋಗುತ್ತಾನೆ. ಕೊನೆಗೆ,

ಅಯ್ಯಯ್ಯೋ ಪೆದ್ದ್ ಬಡ್ಡೀ ಕೇಳಾ..... ನಿನ್ ಮಾತ್ ಕಟ್ಗಂಡೂ ಯಾನೂ ಮಾಡಕ ಅಂತ ಹೋಗಿ ಇನ್ನೇನೋ ಆದೂದು. ಸುಮ್ಕಿರೂ, ನಮ್ಮ ಆ ಕ್ರಯಾ ಬಂದು ಸುದ್ದ ಇದ್ರ ಒಂದಲ್ಲಾ ಒಂದಿನ ಅವ್ನೇ ಬತ್ತ ಕಣ. ಸಾಸ್ತ್ರ ಹೇಳಾವ್ನ ರೂಪ್ದಲ್ಲ ಬರವಾದು ದಾಸಯ್ಯನ ರೂಪ್ದಲ್ಲ ಬರಬಾದು.... ಮಾಟ ಮಂತ್ರದವ್ನ ರೂಪ್ದಲ್ಲಿ ಬರಬೌದು....' 'ಯಾನ್ ರೂಪ್ದಲ್ಲಾದರೂ ಆಗ್ಲಿಕನಾ...... ಯಾವತ್ತಾರೂ ... ಒಂದಿನಾರೂ.... ಬಂದಾನಾ?" ಬರ್ದೆ? ಸಂಬಂಜ ಅನ್ನೋದು ದೊಡ್ಡದು ಕನ.........!

ಮಗ ಬದುಕಿದ್ದಾನೆ, ವೈಭವದಿಂದ ಬಾಳುತ್ತಿದ್ದಾನೆ ಎಂಬ ಭ್ರಮೆಯಲ್ಲಿದ್ದಾಳೆ ಆ ತಾಯಿ. ಅದನ್ನೇ ಬೇರೊಂದು ರೀತಿಯಲ್ಲಿ ನಂಬಿರಬಹುದಾದ ಆದರೆ ಖಚಿತವಾದ ತನಗೆ ತಿಳಿದ ದಾರಿಯನ್ನೇ ತುಳಿಯುತ್ತಾನೆ. ಆ ತಂದೆ ಹೆಂಡತಿಯ ಬಾಯಿ ಬಡೀಯದೇ, ಗದರದೇ, ಅವಳನ್ನೂ ತನ್ನ ವಿವೇಕ ಮಾರ್ಗಕ್ಕೆ ಕರೆತರುವ ಆ ಮುದುಕನ ಮಾತಿನ ಜಾಣ್ಮೆ ಅಮೋಘ! ಈ ಮುದಿ ದಂಪತಿಗಳ ಸಂಭಾಷಣೆ ಕಾದಂಬರಿಯ ಅತ್ಯಂತ ಮನೋಜ್ಞ ಭಾಗಗಳಲ್ಲಿ ಒಂದು.

ನನ್ನಿಯ ಪ್ರಸಂಗ: ಕುರಿಯಯ್ಯ ನುಡಿಯುವ ನನ್ನಿಯ ಪ್ರಸಂಗವನ್ನೀಗ ನೋಡಬಹುದು. ಗೊತ್ರಯ್ಯಾ ಕೇಳೀ....... ನಂ ಜಾತಿ ಬಡ್ಡೆತ್ತವು ಕಾಯ್ಕಂಡಿದ್ದು ತಂ ಕಣ್ಣುಗ ಬೇಕ್ ಬೇಕಾದ ಉತ್ತಮ ಜಾತ್ಯವರ ಹೆಡ್ತೀರ ಹೊತ್ಕಂಡು ನಡ್ದ ಬುಡೋರು. ಎಲ್ಲಗ್ಯ? ಬೆಟ್ಟದ ಕಿಬ್ರಿಗೆ ಆಯ್ತಾ? ವಸಿ ದಿನಗಂಟ ಅಲ್ಲೆ ಇರಾರು. ಆಯ್ತಾ? ಅಮ್ಯಾಕ ಕೇಳೀ ಆ ಬಡ್ಡೆತ್ತವು ತಿರ್ಗಾ ತಂ ಊರ್ಗಿಯ ಬರೋವು.[೧] ಆದರೆ ಈ ರೀತಿ ತಮ್ಮ ಜಾತಿಯ ಹೆಂಡಂದಿರನ್ನು ಬಲವಂತವಾಗಿ ಹೊತ್ತುಕೊಂಡು ಹೋದದ್ದಕ್ಕಾಗಿ ಆ ಉತ್ತಮ ಜಾತಿಯವರ ರಕ್ತಕುದಿಯುತ್ತಿರುತ್ತದೆ. ಆ ಕಾರಣಕ್ಕಾಗಿಯೇ ಅವರು ಹೊಲೆಮಾದಿಗರ ಬಗ್ಗೆ ದ್ವೇಷದ ಭಾವ ತಾಳಲು ಕಾರಣವಾಯಿತೆಂದು ಕುರಿಯಯ್ಯ ನುಡಿಯುತ್ತಾನೆ. ಉತ್ತಮ ಜಾತಿಯವರು ಹೊಲೆಮಾದಿಗಾದಿ ತಳಮೂಲ ಸಂಸ್ಕೃತಿಯವರನ್ನು ಕಂಡರೆ ದ್ವೇಷ ಸಾಧಿಸಲು ಇರಬಹುದಾದ ಕಾರಣವನ್ನು ಕುರಿಯಯ್ಯ ತನ್ನ ನನ್ನಿಯ ಮೂಲಕ ನೀಡಿ ದಲಿತ ಸಮಿತಿಯ ಮುಖಂಡರನ್ನು ಬೆಚ್ಚಿಸಿಬಿಡುತ್ತಾನೆ. ಆದರೆ ನನ್ನಿಯನ್ನು ಐತಿಹಾಸಿಕ ಮಹತ್ವದ ಸತ್ಯವೆಂದು ಪರಿಭಾವಿಸಲು ಸಾಧ್ಯವಾಗುವುದಿಲ್ಲ. ಚರಿತ್ರೆಯ ಯಾವುದೇ ಸಂದರ್ಭದಲ್ಲಿ ಸವರ್ಣೀಯರು ದಲಿತರ ಬಗ್ಗೆ ದ್ವೇಷ ಸಾಧಿಸಲು ಕುರಿಯಯ್ಯ ಮೇಲೆ

೧. ದೇವನೂರ ಮಹಾದೇವ ಸಾಹಿತ್ಯದ ಒಳನೋಟ, ಡಾ. ಸಿ.ಪಿ.ಸಿದ್ದಾಶ್ರಮ, ಪುಟ. ೧೨೯–೧೩೦

ನಿರೂಪಿಸಿರುವಂಥ ಕಾರಣವೆಂಬುದಾಗಿ ಎಲ್ಲೂ ಕಂಡುಬರುವುದಿಲ್ಲ. ಆದ್ದರಿಂದ ಈ ನನ್ನಿಯನ್ನು ಈಗ ಕೆಲವರು ಗ್ರಹಿಸಿರುವಂತೆ ದಂತಕಥೆ ಎಂದೇ ತಿಳಿಯಲು ಸಾಧ್ಯವಿದೆ.

ಸಿ.ಎನ್.ರಾಮಚಂದ್ರನ್ ಅವರು ಈ ನನ್ನಿಯ ಪ್ರಸಂಗವನ್ನು ರಷ್ಯನ್ ವಿಮರ್ಶಕ ಮಿಖೈಲ್ ಬಕ್ತಿನ್ ಗುರುತಿಸಿರುವ ಟ್ರಿಕಸ್ಟರ್ ಫಿಗರ್‌ಗಳ ಅಂದರೆ ಧೂರ್ತ ಪಾತ್ರಗಳ ಲೈಂಗಿಕ ಸಾಮರ್ಥ್ಯ ಹಾಗೂ ಪುರಾಣಗಳಲ್ಲಿನ ರಾಕ್ಷಸ ಪಾತ್ರಗಳು ಸುಂದರ ಸ್ತ್ರೀಯರನ್ನು ಅಪಹರಿಸುವ ಸಾಮರ್ಥ್ಯದ ಹಿನ್ನೆಲೆಯಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ.[೧] ದೈಹಿಕ ಶ್ರಮಮೂಲದ ಕೆಳವರ್ಗದವರ ಲೈಂಗಿಕ ಸಾಮರ್ಥ್ಯವು ದೈಹಿಕ ಶ್ರಮವಿಲ್ಲದ ಮೇಲ್ವರ್ಗ, ವರ್ಣದವರ ಅಸೂಯೆ, ಭೀತಿಗೆ ಕಾರಣವಾಗಿ ಜಾತಿ ಸಂಘರ್ಷಕ್ಕೆ ಅವಕಾಶ ಮಾಡಿಕೊಡುವ ಸಂದರ್ಭವನ್ನು ಸೃಷ್ಟಿಸುತ್ತದೆಂಬ ಹಿನ್ನೆಲೆಯಲ್ಲಿ ಈ ನನ್ನಿಯ ಪ್ರಸಂಗವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿರುವುದನ್ನು ಆಂಶಿಕವಾಗಿ ಒಪ್ಪಿಕೊಳ್ಳಬಹುದಾದರೂ ಸಂಪೂರ್ಣವಾಗಿ ತೃಪ್ತಿ ನೀಡುವುದಿಲ್ಲ. ಆದರೆ ಈ ಬಗೆಯ ಪ್ರಯತ್ನವೊಂದನ್ನು ಸಿ.ಎನ್.ಆರ್. ಅವರು ಮಾಡಿರುವುದನ್ನು ಮೆಚ್ಚಬಹುದಾಗಿದೆ. ಹೀಗೆ ಈ ತಳಮೂಲದವರು ಗುಲಾಮರಂತೆ ದುಡಿಯುತ್ತ, ದುಡಿಮೆಯ ಫಲವನ್ನು ತಮ್ಮನ್ನು ಶೋಷಿಸುತ್ತಿರುವ ಬಲಾಢ್ಯರಿಗೆ ಬಳುವಳಿಯಾಗಿ ಬಿಡುತ್ತಬಂದಿರುವವರು. ಆದ್ದರಿಂದಲೇ ತಳಮೂಲ ಸಂಸ್ಕೃತಿಯವರು ಕುರಿಯಯ್ಯನ ನನ್ನಿಯಂಥ ಕ್ರಮಗಳ ಮೂಲಕ ತಮ್ಮನ್ನು ತಾವು ಸಂತೈಸಿಕೊಳ್ಳುವ, ಸಮಾಧಾನಪಡಿಸಿಕೊಳ್ಳುವ ಅನಿವಾರ್ಯತೆಗೆ ಪಕ್ಕಾಗಿದ್ದಾರೆಂದು ತಿಳಿಯಬಹುದಾಗಿದೆ. ಹೀಗೆ ಈ ನೆಲೆಯಲ್ಲಿ ಕುರಿಯಯ್ಯನ ನನ್ನಿಯನ್ನು ಗ್ರಹಿಸಿದರೆ ಹೆಚ್ಚು ಅರ್ಥಪೂರ್ಣವೆನ್ನಬಹುದು. ಈಗಾಗಲೇ ಕುರಿಯಯ್ಯನ ನನ್ನಿಯ ಪ್ರಸಂಗ, ಮತ್ತು ಜ್ಯೋತಮ್ಮದಿರ ಪ್ರಸಂಗಗಳನ್ನು ಸ್ವಲ್ಪ ವಿವರವಾಗಿಯೇ ಚರ್ಚಿಸಲಾಗಿದೆ. ಈಗ ಮಂಚದ ಕಥೆಯನ್ನೂ ಗಮನಿಸಬಹುದು. ಮಂಚ ತನ್ನ ಆತ್ಮಕಥೆಯನ್ನು ಹೇಳುತ್ತಲೇ ಹಿಂದಿನ ಕಾಲದ ರಾಜಪ್ರಭುತ್ವದ ವಿಲಾಸ ಜೀವನದ ಪರಿಯನ್ನು ಮತ್ತು ಅದರ ಅವನತಿಯನ್ನು, ರಾಣಿಯಂಥವರ ಸ್ವೇಚ್ಛಾ ಬದುಕಿನ ಸ್ವರೂಪವನ್ನು ಹಾಗೂ ಪ್ರಜಾಪ್ರಭುತ್ವ, ಕಾಲದ ಯಾಡೇಗೌಡನಂಥವನ ಬದುಕಿನ ರೀತಿ ನೀತಿಗಳನ್ನು, ಖೋಟಾನೋಟಿನ ವ್ಯವಹಾರದಲ್ಲಿ ಆತ ಶ್ರೀಮಂತನಾದ ಬಗೆಯನ್ನು ನಿರೂಪಿಸುತ್ತದೆ. ಹೀಗೆ ಮಂಚದ ಆತ್ಮಕಥೆಯ ನೆಪದಲ್ಲಿ ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಬದುಕಿನ ಮಾದರಿಗಳೆರಡನ್ನು ದೇವನೂರರು ನಿರೂಪಿಸಲು ಇಚ್ಛಿಸಿದಂತೆ ತೋರುತ್ತದೆ. ಹೀಗೆ ಮಂಚದ ಕಥೆ, ಕಥಾನಿರೂಪಣೆಯ ತಂತ್ರದ ಭಾಗವಾಗಿಯೇ ಇಲ್ಲಿ ಬಳಕೆಗೊಂಡಿರುವುದು ಸುಸ್ಪಷ್ಟ. ಇದು ವಿಕ್ರಮಾದಿತ್ಯನ ಸಿಂಹಾಸನದ ಮೇಲಿನ ಬೊಂಬೆ ಹೇಳಿದ ಕಥೆಯನ್ನು ಜ್ಞಾಪಿಸುತ್ತದೆ.

---

೧. ಯಾರ ಜಪ್ತಿಗೂ ಸಿಗದ ನವಿಲುಗಳು, ಪುಟ. ೭೩, ೭೪

ವ್ಯಕ್ತಿ ಮರಣಹೊಂದಿದ ಮೇಲೆ ಆತನ ಜೀವಾತ್ಮವು ಏನಾಗುತ್ತದೆಂಬುದರ ಬಗ್ಗೆ ನಮಗೆ ಸ್ಪಷ್ಟವಾಗಿ ತಿಳಿದಿಲ್ಲ. ಶರೀರದಿಂದ ಬೇರ್ಪಡಿಸಲ್ಪಟ್ಟ ಜೀವಾತ್ಮವು ಏಳುದಿನ, ಹನ್ನೆರಡು ದಿನ – ಹೀಗೆ ಅವರವರ ನಂಬುಗೆಗೆ ಅನುಸಾರವಾಗಿ ಕೆಲವು ದಿನ ಹಸಿರು ಮರದ ಮೇಲೋ ಬೇಲಿಯ ಮೇಲೋ ಅಥವಾ ಇನ್ನೆಲ್ಲಿಯಾದರೋ ಇದ್ದು, ತದನಂತರ ಇನ್ನಾವುದಾದರೂ ಜನಿಸುವ ಕೂಸಿನ ಶರೀರದಲ್ಲೋ ವಿಶ್ವಶಕ್ತಿಯಲ್ಲೋ ವಿಶ್ವಾತ್ಮನಲ್ಲೋ ಸೇರಿಕೊಳ್ಳುತ್ತದೆಂಬ ನಂಬುಗೆಯೊಂದು ಜನಪದರಲ್ಲಿ ಇದೆ. ಈ ನಂಬುಗೆಯ ಎಳೆಯನ್ನೇ ಹಿಡಿದು ತೂರಮ್ಮ ಹ್ಯಾತೆಹುಳದ ಜೀವವನ್ನು ಅದರ ಶರೀರದಿಂದ ತೆಗೆದು ಅದನ್ನು ತನ್ನ ಮೊಮ್ಮಗನ ದೇಹಕ್ಕೆ ಅವಾಹಿಸುವ ಸಂಪ್ರದಾಯವೂ ಕೂಡಾ ಕಥೆಯಲ್ಲಿ ಮೈಪಡೆದಿದೆ. ಅದೇ ಸಂದರ್ಭದಲ್ಲಿ ಕೊಲೆಯಾದ ಚನ್ನನ ಜೀವಾತ್ಮ ಹಾಗೂ ಮರಣಹೊಂದಿದ ಈರಿಯ ಹೈದನ ಜೀವಾತ್ಮಗಳೂ ತೂರಮ್ಮನ ಮೊಮ್ಮಗನ ಅಥವಾ ಕೆಂಪಿಯ ಮಗನ ಶರೀರದಲ್ಲಿ ಸೇರಿಕೊಳ್ಳುವ ಸಾಧ್ಯತೆಯ ಜನಪದ ನಂಬುಗೆಯನ್ನು ಲೇಖಕರು ನೀಡುತ್ತಾರೆ. ಹೀಗೆ ಬಾಳಿ ಬದುಕಬೇಕಾದ ಚನ್ನ ಮತ್ತು ಈರಿಯ ಹೈದನ ಜೀವಾತ್ಮಗಳು ಕೆಂಪಿಯ ಕೂಸಿನ ಶರೀರವನ್ನು ಪ್ರವೇಶಿಸಿ ತಮ್ಮ ಬದುಕಿನ ಸಾಧ್ಯತೆ, ಸಾರ್ಥಕತೆಗಳನ್ನು ಕಂಡುಕೊಳ್ಳುವಂಥ ಜಾನಪದೀಯ ನೆಲೆಯ ನಂಬುಗೆಗೆ ಅವಕಾಶ ಕಲ್ಪಿಸಿರುವುದು ಕಥೆಯ ಜಾನಪದೀಯ ಲೇಪನದ ತಂತ್ರಗಾರಿಕೆಯ ಭಾಗವಾಗಿಯೇ ಇದೆ ಎಂದು ತಿಳಿಯಬಹುದಾಗಿದೆ.

ಅಧ್ಯಾಯ ನಾಲ್ಕು

ಚೋಮನ ದುಡಿ ಮತ್ತು ಕುಸುಮ ಬಾಲೆ ಕಾದಂಬರಿಯಲ್ಲಿ ಸನ್ನಿವೇಶ ನಿರ್ವಹಣೆ ಮತ್ತು ಸ್ತ್ರೀವಾದಿ ಧೋರಣೆ

ಚೋಮನದುಡಿ ಕಾದಂಬರಿಯಲ್ಲಿ ಸನ್ನಿವೇಶ ನಿರ್ವಹಣೆ:

ಕಾರಂತರು ದಲಿತನ ಬಾಳಿನ ಹೋರಾಟವನ್ನು ವಸ್ತುವನ್ನಾಗಿಸಿ ಬರೆದ ಮೊತ್ತಮೊದಲಿನ ಕನ್ನಡ ಕಾದಂಬರಿ ಮುಲ್ಕ್‌ರಾಜ್ ಆನಂದರ 'the untouchable' ಇಂತಹದ್ದೇ ಕಾದಂಬರಿ. ಚೋಮನದುಡಿಯು ಅದಕ್ಕಿಂತ ಮೊದಲೇ ಪ್ರಕಟವಾಗಿದೆ.

'ಚೋಮನದುಡಿ' ಕಾದಂಬರಿಯಲ್ಲಿ ಆಧುನಿಕತೆಯ ಪ್ರವೇಶದಿಂದಾಗಿ ಜಡಗೊಂಡ ಸಮಾಜವೊಂದು ಚಲಿಸಲು ಪ್ರಾರಂಭಿಸುವ ಮಹಾದರ್ಶನವಿದೆ. ಚೋಮನ ಸಮಸ್ಯೆ ಬಗೆಹರಿಯಲೇಬೇಕಾದ ಒತ್ತಾಯ ಇದೆ. ಹಿಂದೂ ಸಂಸ್ಕೃತಿ ಇನ್ನು ಮುಂದೆ ಕಣ್ಣುಮುಚ್ಚಿ ನಿರಾತಂಕವಾಗಿ ಕುಳಿತಿರಲು ಸಾಧ್ಯವೇ ಇಲ್ಲ ಎನ್ನುವ ಸ್ಫೋಟಕ ಪರಿಸ್ಥಿತಿಯ ಮುನ್ನೋಟವಿದೆ. ಹಿಂದೂ ಸಂಸ್ಕೃತಿ ತನ್ನ ಜಡತ್ವ ತ್ಯಜಿಸಿ ಸಡಿಲಗೊಳ್ಳಬೇಕು. ಹೆಚ್ಚು ಉದ್ದಾರವಾಗಬೇಕು ಎನ್ನುವ ಎಚ್ಚರವಿದೆ. ಹಿಂದೂ ಸಮಾಜ ಎಚ್ಚರಗೊಳ್ಳದಿದ್ದರೆ ತನ್ನ ಎಲ್ಲಾ ಶ್ರೇಣಿಯ ಜನಗಳ ಆಶೋತ್ತರಗಳಿಗೆ ಸ್ಪಂದಿಸದಿದ್ದರೆ ಎಲ್ಲ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ಸಂಭವಿಸುವ ವಿನಾಶದ ಆತಂಕವಿದೆ. ಚೋಮನೊಂದಿಗೆ ಸಂಕಪ್ಪಯ್ಯ ಕೂಡ ಬಿಡುಗಡೆ ಪಡೆಯಬೇಕಾದ ಅನಿವಾರ್ಯತೆ ಇದೆ. ಹಿಂದೂ ಸಮಾಜ ಈ ಸಮಸ್ಯೆಗಳಿಗೆ ಪ್ರತಿಕ್ರಿಯಿಸಲೇಬೇಕಾಗಿದೆ. ಸುಮ್ಮನೆ ಕೂರಲು ಸಾಧ್ಯವೇ ಇಲ್ಲ. ಹಾಗಾಗಿ 'ಚೋಮನದುಡಿ' ಭಾರತದ ಭೂತ–ವರ್ತಮಾನಗಳ ಬಗ್ಗೆ ಮಾತ್ರ ಹೇಳುತ್ತಿಲ್ಲ. ಅದರ ಭವಿಷ್ಯವನ್ನು ಹುಟ್ಟುಹಾಕಿರುವ ಹೊಸ ಸಂಘರ್ಷದಲ್ಲಿ ಹುಟ್ಟಲಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಂಸ್ಕೃತಿಯನ್ನು ಉಗ್ರವಾಗಿ ಖಂಡಿಸುತ್ತಲೇ ಭಾರತವು ಬದಲಾಗಬೇಕಾದ ಸೂಚನೆ ನೀಡುತ್ತದೆ.

'ಚೋಮನ ದುಡಿ'ಯು ಅಸ್ಪೃಶ್ಯರು ಎದುರಿಸುತ್ತಿದ್ದ ಸಾಮಾಜಿಕ ಅನ್ಯಾಯಗಳ ವಿರುದ್ಧ ಭಾರತ ದೇಶದಲ್ಲಿ ಮೊಟ್ಟಮೊದಲ ದನಿಯೆತ್ತಿದ ಸಾಮಾಜಿಕ ಕಾದಂಬರಿಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು ಏಳು ದಶಕಗಳು ಸಂದರೂ ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಕಾದಂಬರಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಆರ್ಥಿಕ ಸಮೀಕ್ಷೆಯಲ್ಲಿ ಕಾರಂತರು ತೊಡಗಿದ್ದಾಗ ಉಂಟಾದ ಪ್ರತ್ಯಕ್ಷ ಅನುಭವದಿಂದ ಬರೆದ ಕಥೆ. ನಮ್ಮ ಸಮಾಜದ ತೀರ ಕೆಳಗಣ ಜಾತಿಯವರೆಂದು ಇಂದಿಗೂ ಪರಿಗಣಿಸಲ್ಪಡುತ್ತಿರುವ ಹೊಲೆಯರು ಸತ್ತ ಜಾನುವಾರುಗಳನ್ನು ತಿಂದೋ ಇಲ್ಲವೆ ನಿಂದನೀಯವಾದ ಇನ್ನೊಬ್ಬ ವೃತ್ತಿಯಿಂದಲೋ ಜೀವನವನ್ನು ಸಾಗಿಸುತ್ತಿದ್ದ ದೃಶ್ಯ. ಅದರ

ದಯನೀಯ ಬದುಕನ್ನೇ ಕಂಡು ಅನುಕಂಪದಿಂದ ಬರೆದ ದುರಂತ ಕತೆಯೇ ಚೋಮನ ದುಡಿ. ಚೋಮ ಸಾಮಾಜಿಕವಾಗಿ ದಲಿತನಾಗಿದ್ದು ಗೇಣಿಗೆ ಭೂಮಿಯನ್ನು ಹೊಂದಲಾಗದ ಜಾತಿಯವನಾಗಿ, ಬೇಸಾಯಗಾರನಾಗಬೇಕೆಂಬ ಹಂಬಲದಲ್ಲಿ ಒದ್ದಾಡುವ ಜೀವನಚಿತ್ರ ಕಣ್ಣಿಗೆ ಕಟ್ಟುತ್ತದೆ.

ಚೋಮ ಒಬ್ಬ ಅಸ್ಪೃಶ್ಯ. ಹೆಂಡತಿಯನ್ನು ಕಳೆದುಕೊಂಡವ. ಸಾಕಿ ಬೆಳೆಸಲು ಐದುಮಂದಿ ಮಕ್ಕಳಿದ್ದಾರೆ. ಕಡುಬಡತನದ ಬದುಕು ಹಾಗಿದ್ದರೂ ಹೆಂಡವಿಲ್ಲದೆ ಅವನಿಗೆ ಬದುಕಲಾಗದು. ತನ್ನ ಬದುಕಿನ ಕಷ್ಟವನ್ನು ಮರೆಯಲು ಹೆಂಡದ ಅಮಲಿನ ಆವೇಶದಲ್ಲಿ ದುಡಿಬಾರಿಸುತ್ತ ಮೈ–ಮರೆಯುವುದು ಅವನ ಹವ್ಯಾಸ ಚೋಮನದುಡಿಯ ಧ್ವನಿ ಜಡವಾದನವಾದರೂ ಅದರಲ್ಲೇ ಜೀವಧ್ವನಿಯನ್ನು ಮೊಳಗಿಸುವ ಅಗಾಧ ಶಕ್ತಿಯಾಗಿ ಮೂಡಿರುತ್ತದೆ. ಚೋಮನ ಕುಟುಂಬದಲ್ಲಿ ಚನಿಯ, ಗುರುವ, ಬೆಳ್ಳಿ, ನೀಲ, ಕಾಳ ಎಂಬ ೫ ಜನ ಮಕ್ಕಳು. ‘ಬಾಡು’ ಎಂಬ ಕರಿನಾಯಿ ಮತ್ತು ಎರಡು ಹಸುಕರುಗಳಿದ್ದು ಹಸಿವಿನಲ್ಲೂ – ಸುಖ ಸಂಭ್ರಮಗಳನ್ನು ಅರಸುವ ಜೀವನಿಷ್ಟತೆ ಅವನ ಬದುಕಿನಯಾನದಲ್ಲಿ ಕಂಡುಬರುತ್ತದೆ.

ಚೋಮನಿಗೆ ಬ್ರಾಹ್ಮಣಧನಿ ಸಂಕಪ್ಪಯ್ಯನವರ ಹೊಲದ ಕೂಲಿಕೆಲಸ ಮಾಡಿ ಹಾಗೂ ಹೀಗೂ ಜೀವನ ತಳ್ಳುತ್ತಿದ್ದವನಿಗೆ ಒಮ್ಮೆ ತಾನೂ ಬೇಸಾಯಗಾರನಾಗಬೇಕೆಂಬ ಬಯಕೆಯುಂಟಾಗುತ್ತದೆ. ಅವರ ಊರಲ್ಲಿ ಹೊಲೆಯ ಬೇಸಗಾರನೆಂಬ ಜಾತಿಯೇ ಇಲ್ಲ. ಚೋಮ ಆಸೆಯಿಂದ ಧಣಿಯನ್ನು ಮೂರು ಸಂದರ್ಭದಲ್ಲಿ ಕೇಳುತ್ತಾನೆ. ಪ್ರತೀ ಸಂದರ್ಭದಲ್ಲಿ ಆತನಿಗೆ ನಿರಾಸೆ ತಪ್ಪಿದಲ್ಲ. ಧಣಿಯೊಡನೆ ಈ ಪ್ರಸ್ತಾಪ ಮಾಡಿ ಮರ್ಯಾದೆ ಕಳೆದುಕೊಳ್ಳಬೇಡವೆಂದು ಮಗಳು ಬೆಳ್ಳಿ ಬುದ್ದಿ ಹೇಳುತ್ತಾಳೆ. ಆದರೂ ಚೋಮನ ಆಸೆ ತಣಿಯುವುದಿಲ್ಲ. ಈತನ ಆಸೆ ಸಂಪ್ರದಾಯಮೀರಿದ ಆಸೆ. ಅದೇ ಕ್ರಾಂತಿ. ಚೋಮನ ಮೇಲೆ ಅನುಕಂಪವಿದ್ದರೂ ಜಮೀನ್ದಾರನಿಗೆ ‘ಇನ್ನೊಬ್ಬ ಮಾಡಿಲ್ಲ ನಾವು ಹ್ಯಾಗೆ ಮಾಡಲಿಕ್ಕೆ ಬರೋದು ಅನ್ನೋ ಭಾವನೆ ಬರೋದು ಸ್ವಾಭಾವಿಕ.

ಚೋಮನ ‘ದುಡಿ’ ಒಂದು ಸರಳ 'Instrument' ಆ ಸರಳ 'Instrument' ನಲ್ಲೂ ಒಂದು ಮನೋಯಾತನೆ ತೋರಿಸಬಹುದು ಎಂಬ ತೀಕ್ಷ್ಣತೆಯನ್ನು ಕಾದಂಬರಿಯಲ್ಲಿ ಕಾರಂತರು ತೋರಿಸಿದ್ದಾರೆ. ದುಃಖಿಯಾದ ವ್ಯಕ್ತಿಗೆ ಅವನ ಚಿಂತನೆಯನ್ನು ಮರೆಯಲಿಕ್ಕೆ ಒಂದು ಸರಳ ಕುಣಿತ. ಒಂದು ಸರಳವಾದ್ಯ ಸಹಾಯಮಾಡುತ್ತದೆ. ಹಾಗೆ ಚೋಮ ತನ್ನ ನೋವು, ಸಂಕಟ, ಯಾತನೆಗಳನ್ನು ಹಂಚಿಕೊಳ್ಳಲಾಗದ ಅಸಹಾಯಕತೆಯಲ್ಲಿ ಪರಿಹಾರತ್ಮಕವಾಗಿ ಹೆಂಡಕ್ಕೆ ಮೊರೆಹೋಗಿ ದುಡಿಯನ್ನು ಬಾರಿಸಿ ಬಿಡುಗಡೆಗೆ ಹಾತೊರೆಯುವ ಕ್ರಿಯೆ ಕಾದಂಬರಿಯ ಉದ್ದಕ್ಕೂ ನಡೆಯುತ್ತದೆ. ದುಡಿ ಬಾರಿಸುತ್ತಾ

ಅಸುನೀಗುತ್ತಾನೆ. ತನ್ನ ಸಿಟ್ಟು, ಸಂಕಟ, ಸಂತೋಷ, ಆವೇಶಗಳಿಗೆ ದುಡಿಯೇ ಅವನಿಗೆ ಆಶ್ರಯವಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ 'ದುಃಖಕ್ಕೆ ದುಡಿ, ಸಂಕಟಕ್ಕೆ ಸೇಂದಿ'.

ಮಾಡಿದ ಸಾಲ ತೀರಿಸಲು ಗಂಡುಮಕ್ಕಳಿಬ್ಬರನ್ನು ಘಟ್ಟದ ಮೇಲಿನ ಕಾಫಿ ತೋಟಕ್ಕೆ ಕೆಲಸಕ್ಕೆ ಕಳಿಸುತ್ತಾನೆ. ಹಿಂದೆಂದೋ ಚೋಮ ಕಾಫಿ ಪ್ಲಾಂಟೇಷನ್‌ನಲ್ಲಿ ಮಾಡಿದ ಐದುರೂಪಾಯಿ ಸಾಲ ಈಗ ಅದು ಬೆಳೆದು ಇಪ್ಪತ್ತು ಎಂದು ಸೇರಗಾರನ ಲೆಕ್ಕದಲ್ಲಿ ಆಗಿರುತ್ತದೆ. ಇದರಿಂದಲೇ ತಿಳಿಯುತ್ತದೆ ದಲಿತರ ಮೇಲೆ ಆಗುವ ಶೋಷಣೆಗೆ ಒಮ್ಮುಖವೆಂಬುದಿಲ್ಲ. ಈ ಕಾರಣಕ್ಕಾಗಿ ಚನಿಯ ಮತ್ತು ಗುರುವ ದುಡಿದರೂ ಸಾಲ ತೀರಿದ ಸುಳಿವಿಲ್ಲ. ಹಿರಿಯಮಗ ಚನಿಯ ಅಲ್ಲಿ ಮಲೇರಿಯಾ ಜ್ವರಕ್ಕೆ ತುತ್ತಾಗಿ ಊರಿಗೆ ಬಂದು ಪ್ರಾಣಬಿಡುತ್ತಾನೆ. ಕಿರಿಯಮಗ ಗುರುವ ಪಾದ್ರಿಗಳು ಒಡ್ಡಿದ ದುಡ್ಡಿನ ಆಸೆಗಾಗಿ ಕ್ರಿಶ್ಚಿಯನ್ ಹುಡುಗಿಯೊಬ್ಬಳ ವಿವಾಹವಾಗಿ ಓಡಿ ಹೋಗುತ್ತಾನೆ. ಚೋಮನಿಗಿದು ತಡೆಯಲಾರದ ಪೆಟ್ಟಾಗುತ್ತದೆ. ಒಬ್ಬ ಸತ್ತು ಕಾಡಿದರೆ ಮತ್ತೊಬ್ಬ ಗುರುವ ಇದ್ದು ಇಲ್ಲದವನಾಗಿ ಜಾತಿಬಿಟ್ಟು ಕ್ರೈಸ್ತ ಧರ್ಮಿಯನಾಗಿ ಚೋಮನಿಗೆ ದೂರವಾಗುತ್ತಾನೆ.

ಚೋಮ ತೀವ್ರ ಅಘಾತಗಳ ಮಧ್ಯೆಯೂ ಎದೆಗಟ್ಟಿಮಾಡಿಕೊಂಡು ಜೀವ ಹಿಡಿದುಕೊಂಡಿದ್ದದ್ದೇ ಸಾಯುವುದರೊಳಗಾಗಿ ತನ್ನದೆನ್ನುವ ಗೇಣು ನೆಲವನ್ನು ಹಿಡಿದು ಸ್ವಂತ ಸಾಗುವಳಿ ಮಾಡಬೇಕೆಂಬ ಏಕಮಾತ್ರ ಹೆಬ್ಬಯಕೆಯಿಂದ. ಈ ದಿಶೆಯಲ್ಲಿ ಪ್ರಯತ್ನಶೀಲನಾದಾಗಲೆಲ್ಲ ನಿರಾಶೆಯ ಉತ್ತರಗಳು ಸಂಕಪ್ಪಯ್ಯನ ಧನಿಯಿಂದ ಬಂದಾಗೂ ಚೋಮ ಭರವಸೆ ಕಳಕೊಂಡದ್ದಿಲ್ಲ. ಧನಿಗಳ ಮನೆಯ ಮುದುಕಮ್ಮ ಅವನ ಆಸೆಗೆ ಅಮಂಗಲೆಯೆಂಬಂತೆ ಅಡ್ಡಿಯಾಗುತ್ತಾಳೆ. ಆ ಕಾಲದ ಮಡಿವಂತ ಸಾಮಾಜಿಕ ವ್ಯವಸ್ಥೆಯ ಸಮರ್ಥ ಸಾಕ್ಷಿಯೆಂಬಂತೆ ಅವಳು ನಡೆಸಿಕೊಳ್ಳುತ್ತಾಳೆ. ಚೋಮನ ದನಿ ಸಂಕಪ್ಪಯ್ಯನಿಗೆ ಚೋಮನಿಗೆ ಒಂದೆರಡು ಗದ್ದೆ ಗೇಣಿಗೆ ಕೊಟ್ಟರಾದೀತೆಂಬ ಆಸೆ ಇದೆ. ಆದರೆ ಅವರ ತಾಯಿ ಬದುಕಿರುವಷ್ಟು ಕಾಲ ಇದು ಸಾಧ್ಯವಿಲ್ಲ. ಸಂಕಪ್ಪಯ್ಯನ ತಾಯಿ ಕಟ್ಟು ಸನಾತನಿ. ಹೊಲೆಯರೂ ಬೇಸಾಯ ಮಾಡುವುದೆಂದರೆ ಕಾಲ ಎಲ್ಲಿಗೆ ಬಂತು ಎಂದು ಈಕೆಯ ವಿಸ್ಮಯ!

'ಚೋಮನಿಗೆ ಚಿಂತೆ ಚಿರಾಯು' ಎನ್ನುವಂತೆ ಮಿಂಗೇಲನ ಸಾಲವನ್ನೀಗ ತೀರಿಸಲು ಬೆಳೆದ ಎತ್ತುಗಳನ್ನು ತನಗೆ ಮಾರಿ ಋಣಮುಕ್ತನಾಗುವ ಸಲಹೆಯನ್ನೇ ಸಂಕಪ್ಪಯ್ಯ ನೀಡಿದಾಗ ಚೋಮ ಬೇಸಾಯಗಾರನಾಗುವ ಮಹದಾಕಾಂಕ್ಷೆಯಲ್ಲಿ ಅದನ್ನೇ ನಿರಾಕರಿಸಿ ತಾನೇ ಮನ್ವೇಲನ ಹಿಂದೆ ತೋಟದ ಕೆಲಸಕ್ಕೆ ಹೊರಡಲು ಅನುವಾಗುತ್ತಾನೆ. ಆದರೆ ಮನ್ವೇಲ ಮುದಿಯ ಚೋಮನಿಗೆ ನಿನ್ನ ದುಡಿತ ಹೆಂಡಕ್ಕೆ ಸಾಲುವುದಿಲ್ಲ. ವಯಸ್ಸಾದ

[illegible]

[illegible]

[illegible]

[illegible]

[illegible]

[illegible]

ನೀನು ಏನು ಮಾಡಬಲ್ಲೆಯೆಂದು ಅವನ ಉದ್ವೇಗಕ್ಕೆ ಅಡ್ಡಿ ಬಂದು ಬೆಳ್ಳಿಯನ್ನು ಕೆಲಸಕ್ಕೆ ಕರೆದುಕೊಂಡು ಹೋಗುವಲ್ಲಿ ಸಫಲನಾಗುತ್ತಾನೆ. ಅಪ್ಪ ಎತ್ತುಗಳನ್ನು ಮಾರಲಾರನೆಂಬ ನಿಶ್ಚಯಕ್ಕೆ ಬಂದ ಬೆಳ್ಳಿ ತಮ್ಮ ನೀಲನೊಂದಿಗೆ ಮನ್ವೇಲನ ಜೊತೆ ಮಿಂಗೇಲನ ಋಣ ತೀರಿಸಲು ಹೋಗಿ ಮನ್ವೇಲ ಮಿಂಗೇಲರ ಕಾಮ ಮೋಹಕ್ಕೆ ಬಲಿಯಾಗಿ ಕಳಂಕ ಹೊತ್ತು ಸಾಲತೀರಿಸಿ ಮನೆಗೆ ವಾಪಸ್ಸಾದರೆ ತಂದೆಯ ದುಗುಡ – ದೂರವಾಗುವುದಿಲ್ಲ. ನೆಲ–ಉಳುಮೆ ಮಾಡಬೇಕೆಂಬ ಆಸೆಯನ್ನು ಸಾಯುವವರೆಗೂ ಬಿಡುವುದಿಲ್ಲ.

ಚೋಮನ ದುಡಿಯಲ್ಲಿ ಬೆಳ್ಳಿಯ ಪಾತ್ರ ಕಸುವುಳ್ಳ ಪಾತ್ರ. ಆಕೆಯ ಬದುಕಿನ ಧಾರುಣತೆ ಮತ್ತು ಶೋಷಣೆಯನ್ನು ಅನುಭವಿಸುತ್ತಾಳೆ. ಬೆಳ್ಳಿ ಬದುಕಿನಲ್ಲಿ ಕಹಿಗಳನ್ನೆಲ್ಲಾ ನುಂಗಿಕೊಂಡು ಬರುವ ಕಷ್ಟವನ್ನು ಸಾಮಾನ್ಯವೆಂಬಂತೆ ಸಹಿಸಿ ಚೋಮನಿಗೆ ಪ್ರತಿಹಂತದಲ್ಲೂ ಸಹಾಯಕ್ಕೆ ಬರುತ್ತಾಳೆ. ಈ ಕಾದಂಬರಿಯಲ್ಲಿ ಕಾರಂತರು ಬೆಳ್ಳಿಗೆ ಗೌರವ ಮತ್ತು ಪ್ರೀತಿಯನ್ನು ಕೊಡುವುದು ಕಾಣುತ್ತೇವೆ. ತಾಯಿಯನ್ನು ಕಳೆದುಕೊಂಡ ಮಕ್ಕಳ ಲಾಲನೆ–ಪಾಲನೆ ಸ್ವತಃ ಬೆಳ್ಳಿಯೇ ಮಾಡುತ್ತಾಳೆ. ಧನಿಗಳ ಮನೆಯ ಕೆಲಸ ಕಾರ್ಯದ ನಡುವೆ ಬರುವ ನೆಂಟರ ಉಪಚಾರ ಬೆಳ್ಳಿಯ ಜಾಣ್ಮೆ ತಿಳಿಸಲು ಕಾದಂಬರಿಯನ್ನೇ ಓದಬೇಕು. ಆಕೆ ತನ್ನ ತಂದೆಗೆ ಬೇಸಾಯದ ಆಸೆ ಬಂದಾಗ ಆಡುವ ಮಾತು. 'ಅಪ್ಪಾ ನಾವು ನಮ್ಮ ಯೋಗ್ಯತೆಗೂ ಮೀರಿ ಆಸೆ ಮಾಡಿದರೆ ನಡೆದೀತು. ಬೇಸಾಯ ಮಾಡಬೇಕಾದರೆ ಬ್ರಾಹ್ಮಣರಾಗಿಯೋ ಬಂಟರಾಗಿಯೋ, ಗೌಡರಾಗಿಯೋ ಹುಟ್ಟಬೇಡವೇ! ಹಾಳಾದ ಹೊಲೆಯರಾಗಿ ಹುಟ್ಟಿ ಬೇಸಾಯ ಮಾಡಬೇಕು. ಅಂದರೆ ಆಗುತ್ತದೆಯೇ! ಎನ್ನುತ್ತಾಳೆ. ಬೆಳ್ಳಿ ಇರುವ ಸ್ಥಿತಿಯನ್ನು ಕಲಕಿ ಇನ್ನೂ ಹೆಚ್ಚಾಗಿ ವೈಯಕ್ತಿಕವಾಗಿ ತೊಂದರೆಗಳನ್ನು ತಂದುಕೊಳ್ಳಲು ಹೆದರುತ್ತಾಳೆ. ಬದಲಾವಣೆಯ ಅಪೇಕ್ಷೆ ಹುಟ್ಟಿಸುವಂಥ ಬೌದ್ಧಿಕ ಪರಿಸರವೂ ಅದಲ್ಲ ಅವರು ನಂಬಿರುವ ಸಾಮಾಜಿಕ ಕಟ್ಟಳೆ, ನಂಬಿಕೆಗಳು ಧನಿಗಳನ್ನು ಬಿಡುವುದಿಲ್ಲ. ಅಪ್ಪನ ಸಾಲ ತೀರಿಸಲೆಂದು ದುಡಿಯಲು ಹೋದ ಮಕ್ಕಳು ಮಿಂಗೇಲ ದೊರೆಗಳ ಲೆಕ್ಕದ ಪಟ್ಟಿಯಲ್ಲಿದ್ದ ಸಾಲ ಚುಕ್ತಾ ಮಾಡುವಲ್ಲಿ ಯಶಸ್ವಿಯಾಗಲಿಲ್ಲ.

ಮಿಂಗೇಲನ ಕಡೆಯಿಂದ ಮನ್ವೇಲ ಮತ್ತೆ ಬರುತ್ತಾನೆ. ಬೇರೆ ಯಾವುದೇ ದಾರಿ ಕಾಣದಿದ್ದಾಗ ''ಬೆಳ್ಳಿ'' ತನ್ನ ಕಿರಿಯ ತಮ್ಮ ನೀಲನೊಂದಿಗೆ ದನಿಗಳ ತೋಟದ ಗೇಮೆಗೆ ಹೊರಡುತ್ತಾಳೆ ಮಾತ್ರವಲ್ಲ. ಅಲ್ಲಿ ಒಂದುಕಡೆ ಮಿಂಗೇಲ ಇನ್ನೊಂದು ಕಡೆ ಮನ್ವೇಲರ ಸುಖಕ್ಕೆ ಹಾಸಿಗೆಯಾಗುತ್ತಾಳೆ. ಅಸಹಾಯಕತೆಯಲ್ಲಿ ಮಿಂಗೇಲನ ಕಾಮಪಾಶಕ್ಕೆ ಬೆಳ್ಳಿ ಈಡಾಗುವ ಈ ಚಿತ್ರಣಕ್ಕೆ ಪ್ರಭಾವ ಬೀರುವ ಇನ್ನೊಂದು ಚಿತ್ರಣ ಬೆಳ್ಳಿ ಮತ್ತು ಸೇರೆಗಾರ ಮನ್ವೇಲನ ವಿಷಮ ಸ್ನೇಹದ್ದು. ಈ ಸ್ನೇಹದ ಚಿತ್ರಣದಲ್ಲಿಯೂ ಬೆಳ್ಳಿಯ ಮುಗ್ದತೆ,

ಅಸಹಾಯಕತೆ, ಮನ್ವೇಲರ ಬಲಾತ್ಕಾರದ ಧ್ವನಿಗಳು ಇವೆ.[೧] ಕಾರಂತರು ಮನುಷ್ಯ ಸ್ವಭಾವವನ್ನು ಮರೆಯದ ಲೇಖಕರಾಗಿರುವುದರಿಂದ ಮತ್ತು ಬರವಣಿಗೆಯ ಪರಿಣಾಮದ ತೀವ್ರತೆಯನ್ನು ಬೇಕೆಂದೇ ಬಯಸುವ ಲೇಖಕರಲ್ಲವಾದ್ದರಿಂದ ಅವರ ಸ್ನೇಹವನ್ನು ಚಿತ್ರಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕೂಲಿಯಾಳುಗಳನ್ನು ಕುರಿಮಂದೆಯಂತೆ ಸಾಗಿಸಿಕೊಂಡು ಹೋಗುವ ದಾರಿಯ ಚೆಲುವಿನ ವರ್ಣನೆ. ಆ ನದಿ ತೀರದ ಮನೋಮೋಹಕತೆ, ಮಗ್ಗುಲಲ್ಲಿ ಹಿರಿಯರಿಗುಪ್ಪೆಯ ಪರ್ವತಶ್ರೇಣಿ! ಅದರ ಮೇಲೆ ಹಾರಾಡುವ ಮೋಡಗಳು, ಕೆಳಕ್ಕೆ ಕಲ್ಲು, ಹರಳುಗಳ ಮೇಲೆ ಕಿಲಕಿಲ ನಗುತ್ತ ಹರಿಯುವ ನದಿ ಕವಿಗಳು ಬಿಟ್ಟೇಳದ ಚೆಲುವಿನ ನೋಟವಾಗಿದೆ. ಆದರೆ ಕೂಲಿಯ ಆಳುಗಳ ಜೀವನದಲ್ಲಿ ಮೋಡ, ವರ್ಣನೆ, ಪರ್ವತ ಇಲ್ಲದೆ ನದಿಗಳು ಮಾತನಾಡುತ್ತವೆಯೇ? ಈ ಮಾತುಗಳು ಬರಿಯ ಕಾದಂಬರಿ ಮಾತುಗಳಾಗಿರದೆ ಆ ನೆಲ ಮತ್ತು ಕೂಲಿಗಳ ವಿಷಮ ಸಂಬಂಧದ ಚಿತ್ರಣದ ನೂರು ವಿವರಗಳಲ್ಲಿ ಒಂದು ವಿವರವಾಗಿದೆ. ಚೋಮನ ಕುಟುಂಬದ ಅನ್ಯೋನ್ಯಕ್ಕೆ ಹೊಸದೊಂದು ನಂಜು ಸೇರಿಸಿದ ಕಳಸದ ಕಾಫಿ ತೋಟದಲ್ಲಿ ಆತ ಮಾಡಿದ್ದ ಸಾಲವನ್ನು, ಅವನ ಮಗಳು ಬೆಳ್ಳಿ ತನ್ನ ಶೀಲಭಂಗದಿಂದ ಬಡ್ಡಿಸಮೇತ ತೀರಿಸುವುದು ಈ ವಿಷಮತೆಯ ಪರಾಕಾಷ್ಠೆಯಾಗಿದೆ.

ಒಮ್ಮೆ ತನ್ನ ಮಕ್ಕಳು ನೀಲ ಮತ್ತು ಕಾಳರನ್ನು ತೋಡಿಗೆ ಸ್ಥಾನಕ್ಕೆಂದು ಚೋಮ ಕರೆದೊಯ್ಯುತ್ತಾನೆ. ನೀರಿನಲ್ಲಿ ಈಜಾಡುತ್ತಿದ್ದ ನೀಲ ಕೈಸೋತು ಮುಳುಗುತ್ತಾನೆ. ಹಳ್ಳದ ಮೇಲಣ ದಂಡೆಯ ಮೇಲೆ ಎಷ್ಟೋ ಜನ ಮೇಲುಜಾತಿಯವರು ಬಟ್ಟೆ ಒಗೆಯುತ್ತಿದ್ದರು. ಕೆಲವು ಹುಡುಗರು ನೀರಿನಲ್ಲಿ ಆಡುತ್ತಿದ್ದರು. ಆದರೆ ಮುಳುಗಿದವನು ಹೊಲೆಯ–ನಾದುದರಿಂದ ಅವನೆನ್ನಲು ಯಾರು ಮುಂದಾಗುವುದಿಲ್ಲ. ಹಳ್ಳದಿಂದ ದೂರದಲ್ಲಿ ಕೆಲಸಮಾಡುತ್ತಿದ್ದ ಚೋಮ ಮತ್ತೊಬ್ಬ ಮಗ ಕಾಳನ ಕೂಗನ್ನು ಕೇಳಿ ಅಲ್ಲಿಗೆ ಧಾವಿಸಿ ಬರುವಷ್ಟರಲ್ಲಿ ನೀಲ ಸತ್ತು ಹೋಗಿರುತ್ತಾನೆ. ಚೋಮನಿಗೆ ಹೊಲೆಯನ ಬಾಳ್ವೆಯ ಹುಣ್ಣು ಎಂಥವೆಂಬುದು ಆಗ ಸಂಪೂರ್ಣ ಅನುಭವವಾಗುತ್ತದೆ. ಮೌನಕ್ಕೆ ಮೊರೆಹೊಕ್ಕು ದುಡಿಯ ಬಡಿತದಲ್ಲಿ ಆಕ್ರೋಶವನ್ನು ವ್ಯಕ್ತಪಡಿಸಿ ಅಸಹಾಯಕನಾಗುತ್ತಾನೆ. ತಾನು ಹೊಲೆಯ–ನಾಗಿರದೇ ಇನ್ನಾವ ಜಾತಿಯಲ್ಲಾದರೂ ಹುಟ್ಟಿದರೂ ತನ್ನ ಮಗ ಬದುಕುತ್ತಿದ್ದ ಎಂದೆನಿಸುತ್ತದೆ.

ಸಾವಿನಂಚಿನಲ್ಲೂ ಬಿಡದ ಬಯಕೆ – ನೆಲದ ಕನಸು. ನೀಲ ಸತ್ತು ದುಃಖ ಮೂಡಿಸಿದ ಹಾಗೆ ಚೋಮನಿಗೆ ಮತ್ತೊಮ್ಮೆ ಬೇಸಾಯಗಾರನಾಗುವ ಆಸೆ

---

೧. ಹುಚ್ಚು ಮನಸ್ಸಿನ ಹತ್ತು ಮುಖಗಳು, ಪುಟ. ೨೧೭–೨೧೮

ಮರುಕಳಿಸುತ್ತದೆ. ಅದು ಕೈಗೂಡುವುದಕ್ಕಾಗಿ, ಕ್ರೈಸ್ತಮತಕ್ಕೆ ಸೇರಲು ನಿರ್ಧರಿಸುತ್ತಾನೆ. ಮಗ ಗುರುವನನ್ನು ಬೇಸಾಯಗಾರನನ್ನಾಗಿ ಮಾಡಿದ ಕ್ರಿಸ್ತದೇವರೇ ತನ್ನನ್ನೂ ಬೇಸಾಯಗಾರನನ್ನಾಗಿ ಮಾಡುತ್ತಾನೆಂದು ಕನಸು ಕಾಣುತ್ತಾನೆ.[೧] ಆದರೆ ತಾನು ನಂಬಿದ ಭೂತ ಪಂಜುರ್ಲಿಯನ್ನು ಮರೆತರೆ ಸಾಯುವ ತನಕ ಅದರ ಉಪದ್ರ ತಪ್ಪಲಾರದು ಎಂಬ ಭೀತಿಯುಂಟಾಗುತ್ತದೆ. ತನ್ನ ಪಾರಂಪರಿಕ ಹಾದಿಯನ್ನು ತೊರೆಯಲಾಗದೆ ಮತಾಂತರಕ್ಕೆ ಮನವೊಲಿಯದ ಗುಡಿಸಲಿಗೆ ವಾಪಸ್ಸಾಗುವ ವೇಳೆಗೆ ಬೆಳ್ಳಿ ಮನ್ವೇಲರ ವಿಷಮ ಸಂಬಂಧದ ಸೂಕ್ಷ್ಮವರಿತು ಬೆಳ್ಳಿಯನ್ನು ಹೊರದಬ್ಬುತ್ತಾನೆ. ಅವನಿಗೆ ಹುಚ್ಚು ಹಿಡಿಯುತ್ತದೆ. ನನ್ನ ಬೆಳ್ಳಿ ನನ್ನನ್ನೇ ವಂಚಿಸಿಬಿಟ್ಟಳೇ ಎಂದುಕೊಂಡು ಹಲುಬುತ್ತಾನೆ. ಕೊನೆಗೆ ಅವಳ ತಾರುಣ್ಯ ತಾನವಳ ಮದುವೆಯನ್ನು ಮಾಡಿದ ತಪ್ಪು ತನಗಾಗಿ ಅವಳು ಕಾಫಿ ತೋಟಕ್ಕೆ ಹೋದದ್ದು. ತನ್ನ ಸಾಲದ ಋಣವನ್ನು ಸ್ವಲ್ಪ ಬೇಗನೆ ಅವಳು ತೀರಿಸಿ ಬಂದುದೆಲ್ಲ ನೆನಪಾಗಿ "ಪಾಪ ನಾನು ಅವಳಂತೆ ಹೆಣ್ಣಾಗಿದ್ದರೆ ನನ್ನ ಪಾಡೇನು? ಎಂದು ಚೋಮನಿಗೆ ಅನಿಸುತ್ತವೆ.

ಚೋಮನಂತಹವರ ಮನಸ್ಸು ಅವರ ಸ್ವಂತದ ಒಡವೆಯಲ್ಲ! ತಮಗೆ ಯಾವ ಹತೋಟಿಯೂ ಇಲ್ಲದ ವ್ಯವಸ್ಥೆಯೊಂದು ರುಚಿಸಿದ ಚಿಂತನ ಕ್ರಮದ ದಾಸರು ಅವರು ಎನ್ನುವ ಅರ್ಥವಂತೂ ಈ ಚಿತ್ರಣದಲ್ಲಿ ಸ್ಪಷ್ಟವಾಗಿದೆ. ನೆಲಕೋಸ್ಕರ ತನ್ನ ನಂಬಿಕೆಗಳನ್ನು ತ್ಯಜಿಸುವುದು ಚೋಮನಿಗೆ ಅಸಹ್ಯವಾದ ವಿಚಾರವಾಗಿದೆ. ನೆಲದ ಆಸೆ ಹೆಚ್ಚು ತೀವ್ರವಾದರೆ ಅವನ ಸ್ವಾಭಿಮಾನ ಅದಕ್ಕಿಂತ ದೊಡ್ಡದಾಗಿದೆ. ಆದ್ದರಿಂದ ಮತಾಂತರಗೊಂಡ ಮಗ ಗುರುವನನ್ನು ಆತ ಕ್ಷಮಿಸಿಲ್ಲ. ಈಗ ತನ್ನ ಅಭಿಮಾನವನ್ನು ನುಂಗಿಕೊಂಡು ನೆಲ ಪಡೆಯಲು ಹೊರಟ ಚೋಮನನ್ನು ಪಂಜುರ್ಲಿ ತಡೆಯುತ್ತದೆ. ಅವನ ವ್ಯಕ್ತಿತ್ವದ ಅಭಿಮಾನವನ್ನು ರಕ್ಷಿಸುವ ದೈವವಾಗುತ್ತದೆ.

ಯಥಾಸ್ಥಿತಿ ಮತ್ತೆ ಧನಿಯರ ಋಣದ ಚಕ್ರದಲ್ಲಿ ಸಾಯುವ ಬದುಕಬಲ್ಲದ ಚೋಮ, ಸಂಕಪ್ಪಯ್ಯನ ನೆಲ ಮತ್ತು ಋಣ ತೀರಿಸಿ ಎತ್ತುಗಳನ್ನು ಕಾಡಿಗೆ ಅಟ್ಟಿ ನೇಗಿಲು ನೊಗಗಳನ್ನು ಮುರಿದು ಅಗ್ನಿಗಾಹುತಿ ಮಾಡಿ ತನ್ನ ಬದುಕಿನ ಯಜ್ಞವನ್ನು ಪೂರೈಸಿದವನಂತೆ ದುಡಿಯನ್ನು ಬಾರಿಸುತ್ತ ತನ್ನ ಆದೇಶವನ್ನು ವ್ಯಕ್ತಪಡಿಸುತ್ತಾ ಪ್ರಾಣಬಿಡುವ ಚೋಮನ ಒಳಗೆ ಕಾಡಿನಲ್ಲಿ ಬಿಟ್ಟುಬಂದ ಎತ್ತುಗಳು ನಾಯಿ ಮತ್ತೆ ಬರುವಷ್ಟರಲ್ಲಿ ಚೋಮನೂ ಇಲ್ಲ. ದುಡಿಯ ಶಬ್ದವೂ ಇಲ್ಲ. ಆ ಎರಡು ಎತ್ತುಗಳು ಚೋಮನ ಬೇಸಾಯಗಾರನಾಗಬೇಕೆಂಬ ಇಚ್ಛೆಗೆ ಮಣ್ಣೆರಚಿದಾಗ ಎತ್ತುಗಳ ಕಾಲಮೇಲೆ ಹೊಡೆಯುವುದು. ತನ್ನ ಎತ್ತನ್ನು ಬಡಿಯುವ ಹೊಲ ಹೂಡಲು ಉಪಯೋಗಿಸಿದಾಗ

---

೧. ಶೂದ್ರಸಂಪುಟ –೭, ಸಂಚಿಕೆ ೫–೬, ಪು. ೪–೫

ಎತ್ತುಗಳು ತನ್ನ ಎದೆಯ ಮೇಲೆ ಕಾಲಿಟ್ಟಂತೆ ಎನ್ನಿಸುವುದು. ಇವೆಲ್ಲ ಇದಕ್ಕೆ ಪುಷ್ಟಿ ಕೊಡುತ್ತದೆ. ಆದ್ದರಿಂದ ಚೋಮಸತ್ತರೂ ಅವನ ಛಲ ಮುಂದುವರಿಯುತ್ತದೆ.

'ಚೋಮನದುಡಿ' ಕಾದಂಬರಿಯಲ್ಲಿನ ವಿವರಗಳು ಜಡಸಮಾಜದ ವಿಕೃತ ನೀತಿಗಳು ವ್ಯಕ್ತಿಯ ಆಂತರ್ಯವನ್ನು ಪರಿಗಣಿಸದೇ ಹೋಗುವ ಬಿಕ್ಕಟ್ಟನ್ನು ಕಾದಂಬರಿ ಅಮೂಲಾಗ್ರವಾಗಿ ಶೋಧಿಸುತ್ತದೆ. ಬಡವನ ದುಡಿಮೆಯನ್ನು ದೊಡ್ಡವರಾಗುವ ಸಂಕಪ್ಪಯ್ಯನಂಥ ಜಮೀನ್ದಾರ ಮಿಂಗೇಲನಂಥ ಮಾಲೀಕ ಮನ್ವೇಲನಂಥವರು ಮತ್ತು ನೋವಿನ ಗಳಿಕೆಯನ್ನೇ ಬಂಡವಾಳವಾಗಿಸಿಕೊಳ್ಳುವ ಹೆಂಡದಂಗಡಿ ಬರುಮ. ಸಂಪ್ರದಾಯಕ್ಕೆ ಶರಣಾದ ಸಂಕಪ್ಪಯ್ಯನ ತಾಯಿ. ಅಪಕೀರ್ತಿಗಂಟುವ ಉದಾರಿ ಸಂಕಪ್ಪಯ್ಯ. ಮಾನವತೆಯನ್ನೇ ಮೆರೆವ ಧರ್ಮಸೂಕ್ಷ್ಮಗಳು ಪ್ರಾಣಿಗಿಂತಲೂ ಮಿಗಿಲಾದ ಕ್ರೌರ್ಯದ ಸಂಗತಿಗಳು ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಇಂಥ ಸಮಾಜದಲ್ಲಿ ಚೋಮನಂಥ ಹೊಲೆಯನ ಬದುಕಿನ ಧಾರುಣತೆ ಅವನ ಮನಸ್ಸಿನ ತುಡಿತಗಳಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲಾಗದ ಸಮಾಜದ ವಾಸ್ತವ ಸಂಗತಿಗಳನ್ನು ಕಾದಂಬರಿ ಸಮರ್ಥವಾಗಿ ಹಿಡಿದಿಟ್ಟಿವೆ.

ಚೋಮನದುಡಿಯಲ್ಲಿ ಚೋಮ ಬೇಡುವ ಅಂಗೈ ಅಗಲ ಭೂಮಿಯನ್ನೇ ಅವನ ಯಜಮಾನ ಕೊಡುತ್ತಾನೆಯೇ ಎನ್ನುವುದು ಸಮಾಜ ಚೋಮನನ್ನು ಕಾಣುವ ರೀತಿಯ ಸಂಕೇತವಾಗಿ ಮುಖ್ಯವಾಗುತ್ತದೆ.

ಸಮಾಜದ ಕ್ರೂರ ಚಿತ್ರಣಕೊಡುವುದಾದರೆ ಅದು ಭಾರತೀಯ ಜಾತಿಪದ್ದತಿಯ ಸಂಕೋಲೆ ಎಷ್ಟು ಬಿಗಿಯಾಗಿರುತ್ತದೆ. ಹಲವು ರೀತಿಯಲ್ಲಿ ಹೇಗೆ ಬಂಧಿಸಿರುತ್ತದೆ ಎಂಬುದನ್ನು 'ಚೋಮನದುಡಿ' ನಮ್ಮ ಮುಂದೆ ಚಿತ್ರಿಸುತ್ತದೆ. ಚೋಮನ ಕರಾಳ ಜೀವನ ಜಾತಿಯ ಭೀಕರ ಸ್ವರೂಪ. ಶ್ರೇಣಿಕೃತ ಸಮಾಜ ಅಸ್ಪೃಶ್ಯತೆಯ ಭಯಂಕರ ಸ್ವರೂಪ, ಭೂಮಿಯ ಆಸೆ ಮತ್ತು ತೊಳಲಾಟ, ಯುಗ-ಯುಗದ ಕನಸು ನನ್ನ ಮಕ್ಕಳಿಗಾದರೂ ಭಾಗ್ಯದ ದಿನಗಳು ಬರಲಿ ಎಂದು ಚೋಮನ ಆಸೆ. ಸ್ವಂತ ನೆಲ ಮತ್ತು ಸ್ವಾಭಿಮಾನ, ಇವೆಲ್ಲದರ ಜೊತೆಗೆ ಇಲ್ಲದ ಸಾಲಕ್ಕೆ ಮಕ್ಕಳ ಜೀತ, ಇದು ದಲಿತರ ಪಾಡು, ಅಜ್ಞಾನ-ಮೌಢ್ಯ, ಧರ್ಮಸಂಕಟ, ಜೀತದ ವರ್ಗಾವಣೆ ಮತಾಂತರದಿಂದ ಸ್ವರ್ಗಸಿಗುತ್ತದೆ ಎಂಬ ಅಜ್ಞಾನ, ಮುಗ್ಧತೆ, ದಲಿತ ಹೆಣ್ಣುಮಕ್ಕಳ ಇಕ್ಕಟ್ಟು ವಂಚನೆ ಸುಲಿಗೆ ಇತ್ಯಾದಿ ಚಿತ್ರಿತವಾಗಿದೆ.[೧]

ಸಾವಿನ ಸಂಕಟ ಬಂದರೂ ಬೇಸಾಯಗಾರನಾಗುವ ಛಲ ಮರೆಯದ ಧೀಮಂತ ಜಾತಿವ್ಯವಸ್ಥೆ ಮತ್ತು ಊಳಿಗಮಾನ್ಯ ಪದ್ಧತಿ ಅಡಿಯಲ್ಲಿ ಸಿಕ್ಕಿ ಛಿದ್ರವಾಗಿ

---

೧. ಶಿವರಾಮ ಕಾರಂತ, ಪುಟ. ೮೭

ಹೋದ/ಹೋಗುವ ಅಸ್ಪೃಶ್ಯ ಪಂಗಡದ ಒಬ್ಬ ವ್ಯಕ್ತಿ ಚೋಮ. ಇಂಥ ಒಂದು ಬದುಕಿನ ಮುಖಾಂತರ ಹಿಂದೂ ಸಮಾಜದ ವಿವೇಕಹೀನ ವ್ಯವಸ್ಥೆಯ ಕರಾಳತೆಗೆ ಒಂದು ವಿಷಾದಪೂರ್ಣ ಭಾಷ್ಯ ಬರೆದಂತಿದೆ ಚೋಮನದುಡಿ.

ಚೋಮನದುಡಿ ಒಂದೆಡೆ ವ್ಯಕ್ತಿ ಮತ್ತು ಸಮಾಜಗಳ ಸಂಬಂಧವನ್ನು ಇನ್ನೊಂದೆಡೆ ಜೀತಕ್ಕೊಳಗಾದ ದಲಿತವರ್ಗಗಳ ಬಗೆಗಿನ ಕಟ್ಟುಪಾಡುಗಳ ಚಿತ್ರಣವನ್ನು ಮಾರ್ಮಿಕವಾಗಿ ನೀಡುತ್ತದೆ. ಚೋಮನ ಸುತ್ತ ಒಂದು ಸ್ಪಷ್ಟವಾದ ಶಕ್ತಿಯುತವಾದ ಆವರಣ ಕಲ್ಪನೆಯಾಗಿದೆ. ಮಾರಿ ಹೊಲೆಯರಿಗೆ ಯಾವ ಗೌರವವಾಗಲಿ ಮನುಷ್ಯರಿಗೆ ಸಲ್ಲಬೇಕಾದ ಯಾವ ಗಣನೆಯಾಗಲಿ ಸಲ್ಲಬೇಕಾಗಿಲ್ಲ. ಅವರ ನೆರಳಿನ ಸ್ಪರ್ಶವೂ ಮೈಲಿಗೆ ಈ ಸಮಾಜದಲ್ಲಿ ಅವರು ದೇಹದ ಕೊಳೆತ ಒಂದು ಭಾಗದಂತೆ. ಹಾಗೆ ಅವರು ಬಾಳಬೇಕೆನ್ನುವುದು ಸಮಾಜದ ಕಟ್ಟಳೆ. ಈ ಕಟ್ಟಳೆ ಒಮ್ಮೆ ಸಾಲವಾಗಿ ಕಾಡುತ್ತದೆ. ಒಮ್ಮೆ ಪಂಜುರ್ಲಿ ಭೂತವಾಗಿ ಕಾಡುತ್ತದೆ. ಒಮ್ಮೆ ಮನ್ವೇಲನಾಗಿ ಕಾಡುತ್ತದೆ. ಒಮ್ಮೆ ದೊರೆಯಾಗಿ ಕಾಡುತ್ತದೆ.

ಕಾರಂತರು 'ಚೋಮನದುಡಿ' ಕಾದಂಬರಿಯನ್ನು ತಮ್ಮೊಳಗಿನ ಅನುಭವ ತೀವ್ರತೆಯ ನಿರ್ಲಿಪ್ತ ಭಾವದಲ್ಲಿಯೇ ಸಾಮಾಜಿಕ ಸಂಗತಿಗಳಿಗೆ ವಾಸ್ತವದ ಕನ್ನಡಿಯನ್ನು ಹಿಡಿದು ಕಾದಂಬರಿ ಲೋಕಕ್ಕೆ ಘನತೆಯನ್ನು ತಂದುಕೊಟ್ಟಿದ್ದಾರೆ.

ಚೋಮನದುಡಿ ಕಾದಂಬರಿಯಲ್ಲಿ ಸ್ತ್ರೀವಾದಿ ಧೋರಣೆ:

ಕಾರಂತರ ಬಹಳಷ್ಟು ಕಾದಂಬರಿಗಳಲ್ಲಿ ಬಡ ಬ್ರಾಹ್ಮಣ ಸಮುದಾಯದ ಗೃಹಿಣಿಯರ ಬದುಕುಗಳೇ. ಕ್ವಚಿತ್ತಾಗಿ ಭಿನ್ನ ಜಾತಿ, ವರ್ಗ, ಬುಡಕಟ್ಟುಗಳಲ್ಲಿನ ಹೆಣ್ಣುಗಳ ಬದುಕುಗಳನ್ನು ಅವರು ಕಾಣಿಸುತ್ತಾರೆ. ''ಚೋಮನದುಡಿ''ಯ ಬೆಳ್ಳಿ ಹರಿಜನರಲ್ಲೇ ಅತ್ಯಂತ ನಿಕೃಷ್ಟವಾದ ಪಂಗಡವೊಂದರಲ್ಲಿ ಹುಟ್ಟಿದ ಚೋಮನ ಮಗಳಾಗಿ, ತಂದೆಯ ಜೀತದಾಳಿನ ನೆಲೆಯಿಂದ ಹುಟ್ಟಿದ ದಾಸ್ಯದ ನೆಲೆಯಲ್ಲಿ, ತಂದೆಯ ಆಸೆಯಂತೆ ಮದುವೆಯಾಗಿ ಸಂಸಾರ ಮಾಡುವ ಸಾಧ್ಯತೆಯೇ ದಕ್ಕದಾದಾಗ, ತನ್ನ ಹುಟ್ಟು ಬೆಳೆದ ನೆಲದಿಂದ ದೂರವಾಗಿ, ಕಾಫಿತೋಟದ ಕೂಲಿಗಾರಳಾಗಿ ಧಣಿಯಾದ ಮಿಂಗೇಲನಿಗೆ ಲೈಂಗಿಕ ಬಲಿಪಶುವಾಗುವುದಲ್ಲದೆ, ಸೇರೆಗಾರ ಮನ್ವೇಲನ ಬಲೆಗೆ ಬಿದ್ದು ಮೈಮಾರಿಕೊಳ್ಳುವ ನೆಲೆಗೆ ತಳ್ಳಲ್ಪಡುತ್ತಾಳೆ. ಬೆಳ್ಳಿಯನ್ನು ಮಿಂಗೇಲ ದೊರೆ ಆಕ್ರಮಿಸುವ ಸಂದರ್ಭದಲ್ಲಾಗಲೀ, ಮನ್ವೇಲ ಅವಳನ್ನು ಸೆಳೆಯ ತೊಡಗಿದಾಗಲಾಗಲೀ ಅವಳ ಮುಗ್ಧತೆ, ಅಸಹಾಯಕತೆ, ಗಂಡುಗಳ ಆಕ್ರಮಣಶೀಲತೆಯ ಭಾವಗಳನ್ನು ಧ್ವನಿಸುತ್ತಲೇ ಕಾರಂತರು ಬೆಳ್ಳಿಯ ಹೆಣ್ತನಕ್ಕೂ, ಆರ್ಥಿಕ ಅಸಹಾಯಕತೆಗೂ, ಅವಳಿಗೆ ಒದಗಿದ ಬದುಕಿನ ಸ್ಥಿತಿಗೂ ಇರುವ ಸೂಕ್ಷ್ಮಸಂಬಂಧಗಳನ್ನು ಗುರುತಿಸುತ್ತಾರೆ. ಬೆಳ್ಳಿ–ಮನ್ವೇಲರನ್ನು ಒಟ್ಟಿಗೇ

ಇಟ್ಟುಕೊಂಡಿದ್ದ ವಿಶ್ವಾಸಗಳೆಲ್ಲ ಭಗ್ನವಾಗಿ ಕೋಪದ ಪರಾಕಷ್ಠೆಯನ್ನು ಅನುಭವಿಸುತ್ತಾನೆ. ಆದರೆ ಸಾಯುವ ಗಳಿಗೆಯಲ್ಲಿ ಮಗಳ ತಾರುಣ್ಯ, ಅವಳ ಮದುವೆ ಮಾಡದೆ ಮುಂದೂಡಿದ್ದರ ತನ್ನ ತಪ್ಪು ಕಾಫಿ ತೋಟಕ್ಕೆ ಅವಳು ಹೋಗಬೇಕಾಗಿ ಬಂದ ಅನಿವಾರ್ಯತೆ, ತನ್ನ ಋಣವನ್ನು ಅವಳು ಬಲುಬೇಗ ತೀರಿಸಿದ್ದು, ಎಲ್ಲವೂ ನೆನಪಾಗಿ "ಪಾಪ"! ಎಂದು ಉದ್ಗರಿಸುತ್ತಾನೆ. "ನಾನು ಅವಳಂತೆ ಹೆಣ್ಣಾಗಿದ್ದರೆ ನನ್ನ ಪಾಡೇನು?" ಎಂದು ಚಿಂತಿಸುತ್ತಾನೆ.

ಆರ್ಥಿಕ ದಾಸ್ಯ, ಅದರಿಂದ ಹುಟ್ಟಿದ, ಲೈಂಗಿಕವಾಗಿ ಸುಲಭವಾಗಿ ಘಾಸಿಯಾಗಬಿಡಬಹುದಾದ ಹೆಣ್ಣಿನ ನೆಲೆಗಳ ದುರಂತಸ್ಥಿತಿಯನ್ನು ಬೆಳ್ಳಿ ಪ್ರತಿನಿಧಿಸುತ್ತಾಳೆ. ಬೆಳ್ಳಿಯದು ಪರಿಹಾರವೇ ಕಾಣದಂಥ ಸಾಮಾಜಿಕ ಆರ್ಥಿಕ ದಿಗ್ಬಂಧನಗಳ ಮೂಲದಿಂದ ಹುಟ್ಟಿದ ಅಸಹಾಯಕ ದುರಂತ ನೆಲೆಯಾಗಿದೆ. ಮುಕ್ತವಾಗಿಲ್ಲದ ಸಮಾಜದಲ್ಲಿ ಮೇಲುಜಾತಿಯ ಸಂಕಪ್ಪಯ್ಯನ ತಾಯಿ, ಜಾತಿಶ್ರೇಣಿಯ ಬಗ್ಗೆ ತಳೆದಿರುವ ನಂಬಿಕೆ ಕಾಣುತ್ತದೆ. "ಚೋಮನದುಡಿ"ಯಲ್ಲಿ "ಅಪ್ಪಾ, ನಾವು ನಮ್ಮ ಯೋಗ್ಯತೆಗೂ ಮೀರಿ ಆಸೆ ಮಾಡಿದರೆ ನಡದೀತೆ? ಬೇಸಯ ಮಾಡಬೇಕಾದರೆ ಬ್ರಾಹ್ಮಣರಾಗಿಯೋ, ಬಂಟರಾಗಿಯೋ, ಗೌಡರಾಗಿಯೋ ಹುಟ್ಟಬೇಡವೇ? ಹಾಳಾದ ಹೊಲೆಯರಾಗಿ ಹುಟ್ಟು ಬೇಸಾಯ ಮಾಡಬೇಕು ಅಂದರೆ ಆಗುತ್ತದೆಯೇ"? ಎಂದು ಚೋಮನ ಆಸೆಗೆ ಬೆಳ್ಳಿ ತಣ್ಣೀರು ಎರಚುತ್ತಾಳೆ.

ಗುರುವ–ಮೇರಿಯರ ವಿವಾಹದ ಬಗ್ಗೆ ಚೋಮ ವ್ಯಕ್ತಪಡಿಸುವ ಭಾವನೆಗಳೂ ಸಾಂಪ್ರದಾಯಿಕ ಪ್ರಜ್ಞೆಯ ಫಲವೇ ಆಗಿವೆ. "ತನ್ನ ಮಗ ಅಂಥ ಕೆಲಸ ಮಾಡುತ್ತಾನೆಂದು ಚೋಮನಿಗೆ ಅನಿಸಿರಲಿಲ್ಲ. ಮಾತನಾಡುತ್ತಾ ಆಡುತ್ತ ಆ ಮಾರಿಯಮ್ಮ ಕಿರಿಸ್ತಾನ ಮೇರಿಯಮ್ಮನೆಂಬುದು ತಿಳಿದಾಗ ಅವನ ಎದೆಯೇ ಬಿರಿಯಿತು" ಹಿರಿಯರು ಹಿಡಿದು ಒಂದು ರೀತಿ ರಿವಾಜುಗಳನ್ನು ಬಿಟ್ಟು ಒಂದು ಹುಡುಗಿಗಾಗಿ ಅವನು ಜಾತಿ ಬಿಡುವವನಾದರೆ ಅವನ ಮೋರೆ ನೋಡುವುದಿಲ್ಲ'ವೆಂದು ಶಪಥ ಮಾಡಿದ!' ಬೆಳ್ಳಿಗೆ ಕೂಡ ಇದರಿಂದ ಮೊದಮೊದಲು ಬೇಸರವಾದರೂ ತಾನೇ ಸಿಕ್ಕಿಹಾಕಿಕೊಂಡ ಲೈಂಗಿಕ ಆಕರ್ಷಣೆಯ ಹಿನ್ನಲೆಯಲ್ಲಿ "ಅವಳ ವಿಲಾಸ ಜೀವನದ ಆಸೆಯು ತಿರುಗಿ ಮೊಳೆಯಿತು. ಒಮ್ಮೊಮ್ಮೆ ತನ್ನ ಮನಸ್ಸಿನಲ್ಲಿ ತಾನು ಮನ್ವೇಲನ ಮಡದಿಯಾಗುವೆನೆಂದು ಚಿತ್ರಿಸಿಕೊಂಡಳು. ಗುರುವನು ಮೇರಿಯ ಪತಿಯಾಗಲಿಲ್ಲವೇ?" ಗುರುವ ಕೂಡ ಇಂಥ ಯೌವನ ಸೆಳೆತನಗಳಿಗೆ ಸಿಕ್ಕಿಯೇ ಅಲ್ಲವೆ ಮೇರಿಯೊಡನೆ ಪ್ರಣಯ ಬೆಳೆಸಿದ್ದು!

'ಕುಸುಮಬಾಲೆ' ಕಾದಂಬರಿಯ ಸನ್ನಿವೇಶ ನಿರ್ವಹಣೆ:– ಕುಸುಮಬಾಲೆ ಕಿರುಕಾದಂಬರಿಯ ಪ್ರಕಟಣೆ ಇಂದಿನ ಸೃಜನಶೀಲ ಸಾಹಿತ್ಯದ ಸಂದರ್ಭದಲ್ಲಿ ಒಂದು

[illegible]

ಮಹತ್ವದ ಸಾಹಿತ್ಯಕ ಘಟನೆಯಾಗಿದೆ. ಅದರ ರಚನಾ ವಿಧಾನ, ಭಾಷೆಯ ಬಳಕೆ, ನಿರೂಪಣೆಯ ಸ್ವರೂಪ, ದೃಷ್ಟಿ, ಧೋರಣೆ ಇತ್ಯಾದಿಗಳಲ್ಲಿ ಹೊಸತನವಿದೆ. ತಾಜಾತನವಿದೆ, ಜೊತೆಗೆ ವಿಲಕ್ಷಣ ಎನಿಸಬಹುದಾದಂಥ ಕೆಲವು ಅಂಶಗಳು ಇವೆ.

ದಲಿತ ಮನಸ್ಸು ಗಾಢವಾಗಿ ಮಾಂತ್ರಿಕ ವಿಶ್ವಾಸವನ್ನು ತುಂಬಿಕೊಂಡು ಬಂದಿದೆ. ದಲಿತರ ಜೀವನ ವಿಧಾನದಲ್ಲಿ ಮಂತ್ರವಿದ್ಯೆ ಸಾಮಾನ್ಯವಾದ ಸಂಗತಿ. ಆದಿಮವಾದ ಮನಸ್ಸಿನಲ್ಲಿ ಮಂತ್ರವಿದ್ಯೆಯು ನಿಸರ್ಗದ ಜೊತೆ ಮಾನವಾಗಿ ಮಾತನಾಡಿದೆ. ದಲಿತ ಲೋಕದ ಇಂತಹ ಮೌನಸ್ಪಂದನವು ಅನೇಕ ಬಗೆಯಲ್ಲಿ ದಲಿತರನ್ನು ಅಸ್ತಿತ್ವದ ನೆಲೆಯಲ್ಲಿ ರಕ್ಷಿಸಿದೆ. ರಮ್ಯತೆ, ಕಲ್ಪನೆ, ಅತಿಮಾನುಷತೆಗಳು ಅವರ ಮೌಖಿಕ ಪರಂಪರೆಯಲ್ಲಿ ಕರುಳು ಬಳ್ಳಿಯಂತೆ ಹೆಣೆದುಕೊಂಡು ಬಂದಿದ್ದರಿಂದ ಈಗಲೂ ಅಂತಹ ಭಾವನೆಗಳು ಸಾಹಿತ್ಯದಲ್ಲಿ ಆಧುನಿಕ ರೂಪ ಪಡೆದುಕೊಂಡು ಭಿನ್ನವಾದ ರೂಪಕಾಕೃತಿಗೆ ಕಾರಣವಾಗಿವೆ. ಕುಸುಮಬಾಲೆ ಕೃತಿಯನ್ನು ಈ ಹಿನ್ನೆಲೆಯಿಂದ ಪ್ರವೇಶಿದರೆ ಅದರ ಮಾಂತ್ರಿಕ ದೃಶ್ಯತೆಯು ಗೇಯತೆಯಲ್ಲಿ ಹಾಗೂ ಆಚರಣೆಗಳ ಸರಣಿಯಲ್ಲಿ ನಮ್ಮ ಅಂತರಂಗದಲ್ಲಿ ಮಾತನಾಡತೊಡಗುತ್ತದೆ.

ಕುಸುಮಬಾಲೆ ಆಕೃತಿಯಲ್ಲಿ ಕಿರಿದಾದರೂ ಭಾವಕೃತಿಯಲ್ಲಿ ಅಗಾಧವಾದುದೇ ಕುಸುಮಬಾಲೆ ಆಚೀಚೆಯ ರೆಂಬೆಕೊಂಬೆಗಳಂತೆ ಕಾಣುವ ಉಪಕತೆಗಳನ್ನು ತೆಗೆದುಬಿಟ್ಟರೆ ಅದೊಂದು ನೀಳ್ಗತೆಯಂತೆ ಕಾಣಬಲ್ಲುದು. ಆದರೆ ರೂಪಕಗಳ ಮೊತ್ತವಾದ ಕುಸುಮಬಾಲೆಯನ್ನು ಹಾಗೆ ವಿಂಗಡಿಸಲು ಬರುವುದಿಲ್ಲ. ದೇವನೂರ ಮಹಾದೇವ ಅವರ ಸ್ಮೃತಿಕೋಶದಲ್ಲಿ ಮರುಜೀವ ಪಡೆದು ಅನಾವರಣಗೊಳ್ಳುವ ಕುಸುಮಬಾಲೆಯ ವಿವರಗಳು, ದೃಶ್ಯಗಳು, ಪಾತ್ರ ಹಾಗೂ ಘಟನೆಗಳು ಮತ್ತು ಜಾತಿ ವ್ಯವಸ್ಥೆಯ ಪಾತಾಳದ ವಿಕಾರಗಳು ತತ್ತರಿಸುವಂತೆ ಮಾಡುವುದಿಲ್ಲ. ಒತ್ತಾಯದಿಂದ ಒಪ್ಪಿಸಿಕೊಳ್ಳುವುದಿಲ್ಲ. ಮೋಡಿ ಮಾಡಿ ಆಲಂಗಿಸಿಕೊಳ್ಳುವುದಿಲ್ಲ ಅನುಕಂಪದಿಂದ ಪ್ರೀತಿಯನ್ನು ಗಿಟ್ಟಿಸುವುದಿಲ್ಲ.

ಕುಸುಮಬಾಲೆಯಲ್ಲಿ ಕಥೆಯೇ ಇಲ್ಲ. ಹಾಗೆಯೇ ಅದಕ್ಕೆ ಬಲವಾದ ಒಂದು ಕೇಂದ್ರವೂ ಇಲ್ಲ. ಸಾಹಿತ್ಯ ಕೃತಿಯ ಸಾಂಪ್ರದಾಯಿಕತೆಗೆ ಇವೆರಡೂ ಅಂಶಗಳೂ ಮುಖ್ಯ. ಆಧುನಿಕೋತ್ತರ ಸಮಾಜಗಳಿಗೆ ಕೇಂದ್ರವೂ ಇಲ್ಲ. ಅಂತೆಯೇ ನಿರ್ದಿಷ್ಟವಾದ ಕಥನಗಳೂ ಇಲ್ಲ. ಅಷ್ಟೇ ಏಕೆ ಮುಂದಿನ ದಾರಿ ಯಾವುದು ಎಂಬ ದಿಕ್ಕು ಇಲ್ಲ. ಆಧುನಿಕೋತ್ತರ ಜಗತ್ತಿನ ಅನುಸಂಧಾನವು ಗತಕಾಲದ ಜೊತೆಗೆ ಒಂದು ಹೆಜ್ಜೆ ಇಟ್ಟಿದ್ದರೆ, ವರ್ತಮಾನದ ರಣರಂಗದಲ್ಲಿ ಜೀವ ಇಟ್ಟು ಭವಿಷ್ಯದ ಬಗ್ಗೆ ಕುಲದ ಹಂಗು ತೊರೆದು ಯೋಚಿಸುತ್ತಿರುತ್ತದೆ. ಕುಸುಮಬಾಲೆಯ ಬಾಲಪ್ರಪಂಚದ ವಿಶ್ವಾಸವೂ ಇಂಥದ್ದೆ ಆಗಿದೆ. ದೇವನೂರ ಮಹಾದೇವ ಅವರ ಸೃಜನಶೀಲತೆಗೆ ಒತ್ತಾಸೆಯಾಗಿರುವ ದಲಿತ ಲೋಕವು

ರಮ್ಯಾದ್ಭುತಗಳ ತವರು ಎಂಬುದು ಅತಿರಂಜಕ ಮಾತಲ್ಲ. ದಲಿತ ಸಮಾಜವು ಇಂತಹ ರಮ್ಯ ಕಲ್ಪನೆಗಳ ಕನಸಿನ ಭಾಷೆಯಲ್ಲಿ ಸಾಗಿದ್ದರಿಂದಲೇ ಅದು ಕಾಲದ ಎಲ್ಲ ಬಗೆಯ ಹಿಂಸೆಗಳನ್ನು ಎದುರಿಸಿ ಬದುಕುಳಿಯಲು ಸಾಧ್ಯವಾದದ್ದು. ಕುಸುಮಬಾಲೆ ಅಂಥದೇ ರಮ್ಯ ಸಂವೇದನೆಯ ಕಥನ. ಆದರೆ ಮಹಾದೇವ ಅವರು ಈ ರಮ್ಯತೆಯ ಒಳಗೆಯೇ ದಲಿತ ಲೋಕದ ದುರಂತವನ್ನು ಬಿಂಬಿಸುತ್ತಲೇ ಅದಕ್ಕೆ ತಕ್ಕುದಾದ ಭಾಷೆಯಲ್ಲೇ ಅಭಿವ್ಯಕ್ತಿಯನ್ನು ನೀಡಿದ್ದಾರೆ. ಕೃತಿಯಲ್ಲಿ ಬರುವ ದಲಿತ ಸಂಘರ್ಷ ಸಮಿತಿಯ ಜೀವಂತ ಪಾತ್ರಗಳು ಪುರಾಣದ ಅಣುಕು ರೂಪಗಳಂತೆ ಕಂಡರೆ ಆಶ್ಚರ್ಯವಿಲ್ಲ.

ಕುಸುಮಬಾಲೆಯ 'ಕಥೆ' ನಮ್ಮ ಮನಸ್ಸಿನ ಒಳಗೆ ಬೆಳೆಯುವಂಥದ್ದು. ಹಾಗಾಗಿಯೇ ಕೃತಿಯ ಎಷ್ಟೋ ವಿವರಗಳು ನಮ್ಮಿಂದಲೆ ತುಂಬಿಕೊಳ್ಳಬೇಕಾಗುತ್ತದೆ. ಇಂತಹ ರೀತಿಯಿಂದಾಗಿ ಅನೇಕರಿಗೆ ಕೃತಿಯ ಬಾಗಿಲು ಮುಚ್ಚಿಕೊಂಡಂತೆ ಕಾಣುತ್ತದೆ. ವಾಸ್ತವವಾಗಿ ನಾವು ಆಕೃತಿಗೆ ಸಂಬಂಧಿಸಿದಂತೆ ಪುನರ್ ತೀರ್ಮಾನಗಳ ಬಾಗಿಲುಗಳನ್ನು ಭದ್ರವಾಗಿ ಬೀಗ ಜಡಿದುಕೊಂಡಿರುತ್ತೇವೆ. 'ಮಲೆಗಳಲ್ಲಿ ಮದುಮಗಳು' ಹಾಗೂ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಕಾದಂಬರಿಗಳು ಅಪಾರವಾದ ವಿವರಗಳಿಂದ ಕೂಡಿವೆ. ಇದು ಕೂಡ ಹೊರ ಜಗತ್ತಿಗೆ ತನ್ನ ಲೋಕವನ್ನು ತೆರೆದು ತೋರುವ ವಿಧಾನವಾಗಿದ್ದರೂ ಇಂತಹ ವಿವರಗಳ ಮೂಲಕವೇ ಮತ್ತೊಂದು ಸಮಾಜವು ಭಾವಸಂಬಂಧವನ್ನು ಆಪ್ತವಾಗಿ ಬೆಳೆಸಿಕೊಳ್ಳಲಿ ಎಂಬುದು ಆಗಿರುತ್ತದೆ. ಕುವೆಂಪು ಅವರಿಗೆ ವಿವರಗಳೇ ಕಥನ. ಅಂತಹ ವಿವರಗಳಿಂದ ಲೋಕದ ದೃಶ್ಯವನ್ನು ಕಟ್ಟುತ್ತಾರೆ. ಮಲೆನಾಡಿನ ಶೂದ್ರ ಜಗತ್ತಿನ ಅಂತಹ ಚಿತ್ರಗಳು ಸಮುದಾಯದ ಆತ್ಮಕಥನವನ್ನು ನಿರೂಪಿಸುತ್ತವೆ. ಜೊತೆಗೆ ವಿವರಗಳೇ ಅಂತಿಮವಾಗಿ ಜೀವನ ವಿಧಾನವನ್ನು ನಿರೂಪಿಸುತ್ತವೆಯೇ ಹೊರತು ಘಟನೆಗಳಲ್ಲ, ಘಟನೆಗಳು ಕೂಡ ವಿವರಗಳಿಂದಾಗಿಯೇ ಆಕೃತಿ ಪಡೆದುಕೊಳ್ಳುವುದು. ಮಲೆನಾಡಿನ ಬದುಕನ್ನು ಗಾಢವಾದ ನೈಸರ್ಗಿಕ ಭಾವದೀಪ್ತಿಯಿಂದ ನಿರೂಪಿಸಲು ಕುವೆಂಪು ಅವರಿಗೆ ವಿವರಗಳೇ ಜೀವಾಳವಾಗಿತ್ತು. ನಿಸರ್ಗದ ದಟ್ಟ ಸಾಂದ್ರತೆಯು ಕುವೆಂಪು ಅವರಿಗೆ ಆ ಬಗೆಯ ವಿವರಗಳನ್ನು ಯಥೇಚ್ಛವಾಗಿ ನಿರ್ಮಿಸುವಂತೆ ಒತ್ತಾಯಿಸಿದೆ. ದೇವನೂರ ಮಹಾದೇವ ಅವರಿಗೆ ಇದ್ದ ದಲಿತ ಲೋಕವು ವಿವರಣೆಗಳ ಬದುಕುನಿಂದ ಕೂಡಿದ್ದಾಗಿರಲಿಲ್ಲ. ಶೂದ್ರ ಜಗತ್ತು ವಿವರಗಳಿಂದಲೇ ತನ್ನನ್ನು ನಿರೂಪಿಸಿಕೊಳ್ಳುತ್ತದೆ. ದಲಿತ ಜಗತ್ತಿಗೆ ವಿವರಗಳ ಅವಕಾಶವಿರಲಿಲ್ಲ. ಮಾನವಾಗಿದ್ದ ದಲಿತ ಜಗತ್ತು ಮಾಂತ್ರಿಕವಾದ ಅವಕಾಶದಲ್ಲಿ ಮನಸ್ಸಿನ ಸುಪ್ತಪ್ರಜ್ಞೆಯಲ್ಲ ಅಗಾಧ ಲೋಕದಲ್ಲಿ ವಿಹರಿಸುತ್ತ ಮಾಂತ್ರಿಕ ಸಂಕೇತ ರೂಪಕ ಪ್ರತಿಮೆಗಳನ್ನು ಕಟ್ಟಿಕೊಳ್ಳುತ್ತಿತ್ತು. ದಲಿತ ಲೋಕಕ್ಕೆ ವಾಸ್ತವದಲ್ಲಿ ಅವಕಾಶ ಇಲ್ಲದಿದ್ದ ಕಾರಣ ಅದು ಲೌಕಿಕ ಪರಿಭಾಷೆಗಳಲ್ಲಿ ಹೆಚ್ಚು ಮೌನವಹಿಸಿ ಕಡಿಮೆ ವಿವರಗಳಲ್ಲಿ ಮಾತ್ರ ಬದುಕುತ್ತಿತ್ತು. ಇಂತಹ ಗುಣದಿಂದಾಗಿಯೆ

ದಲಿತ ಲೋಕದ ಲೇಖಕರ ಬರಹಗಳಲ್ಲಿ ದಟ್ಟ ವಿವರಗಳು ಕಾಣದೆ ಗತಕಾಲದ ಮಾನವ್ರೂ ವರ್ತಮಾನದ ಮಾತು ಬೆರೆತು ಅವರ ಕಥನಗಳಲ್ಲಿ ಸಂಕೀರ್ಣತೆ ಎದುರಾಗುವುದು. ಆದರೆ ಅಲೌಕಿಕವಾದ ವಿವರಗಳಲ್ಲಿ ದಲಿತ ಲೋಕವು ಆಕಾಶ ವ್ಯಾಪ್ತಿಯದು. ತನ್ನ ಪುರಾಣ ಕಥನಗಳಲ್ಲಿ ಅದು ಅಖಂಡ ವಿವರಗಳನ್ನು ತುಂಬಿಕೊಂಡಿರುತ್ತದೆ. ಮಲೆ ಮಾದೇಶ್ವರ ಮಂಟೇಸ್ವಾಮಿಯಂತಹ ಜನಪದ ಕಾವ್ಯಗಳಲ್ಲಿರುವ ಪವಾಡ ಕಥನದ ವಿವರಗಳು ಬೆರಗುಗೊಳಿಸುತ್ತವೆ. ಇದೆ ಪ್ರಜ್ಞೆಯು ಆಧುನಿಕ ಗದ್ಯಕಾಲಕ್ಕೆ ಬಂದರೆ ವರ್ತಮಾನದ ಒತ್ತಡದಿಂದಾಗಿ ವಿವರಗಳು ಮತ್ತು ಕಡಿಮೆಯಾಗಿಬಿಡುತ್ತವೆ. ದೇವನೂರ ಮಹಾದೇವ ಅವರ ಕುಸುಮಬಾಲೆಯಲ್ಲಿ ಹೀಗಾಗಿಯೆ ವಿವರಗಳು ಕಡಿಮೆ ಆದರೆ ಭಾವನೆಗಳ ರೂಪಕಗಳು ಹೆಚ್ಚು. ಕುವೆಂಪು ಅವರು ತಮ್ಮ ವಿವರಗಳಿಂದಲೆ ಸಮಾಜವನ್ನು ಮುಖಾಮುಖಿಯಾಗಬೇಕಿತ್ತು.

ದಲಿತ ಸಂವೇದನೆ ತುಂಬ ಸಂಕೀರ್ಣವಾದದ್ದು. ಹೊರನೋಟಕ್ಕೆ ಅದು ಸರಳ ಮಾತಿನಂತೆ ಕಂಡರೂ ಅದರ ಭಾವಲೋಕ ಏಕಕಾಲಕ್ಕೆ ಹಲವು ಸ್ತರದ ನೆನಪುಗಳಿಂದ ವರ್ತಮಾನಕ್ಕೆ ಪ್ರತಿಕ್ರಿಯಿಸುತ್ತಿರುತ್ತದೆ. ಚನ್ನನ ತಂದೆ ತಾಯಿಗಳಿಬ್ಬ ರೂ ಯಾವ ಗತಕಾಲದ ಸ್ಮರಣೆಯಲ್ಲೂ ಇಲ್ಲ. ಹಾಗೆಯೇ ವರ್ತಮಾನದಲ್ಲೂ ಅವರಿಗೆ ನುಡಿ ಇಲ್ಲ. ಭವಿಷ್ಯದಲ್ಲಿ ಮಾತ್ರ ಅಗಾಧವಾದ ವಿಶ್ವಾಸ. ಚನ್ನ ಕೊಲೆಯಾಗಿ ಹಿಂತಿರುಗಿ ಬರಲು ಸಾಧ್ಯವೇ. ಇಲ್ಲದಿದ್ದರೂ ಆತನ ಬರುವಿಕೆಯ ನಿರೀಕ್ಷೆಯಲ್ಲಿ ಕಾಯುವ ಚನ್ನನ ಅಪ್ಪ ಅಮ್ಮ ಥಟ್ಟನೆ ಇಡೀ ದಲಿತ ಲೋಕದ ತಬ್ಬಲಿತನದಲ್ಲಿ ಎಲ್ಲವನ್ನೂ ನಿಭಾಯಿಸುವ ನಿರೂಪಕರಂತೆ ಕಂಡುಬಿಡುತ್ತಾರೆ. ಇವರಿಬ್ಬರೂ ಸರಳವಾದ ಕಲ್ಪನೆಗಳಲ್ಲಿ ತಮ್ಮ ಲೋಕದ ರೂಪಕಗಳಲ್ಲೆ ಚನ್ನನ ಸ್ಥಾನಮಾನವನ್ನು ಊಹಿಸಿಕೊಳ್ಳುತ್ತ ಅಖಂಡವಾದ ವಿಶ್ವಾಸವನ್ನು ಬಿಂಬಿಸುತ್ತಾರೆ. ಎಂದಾದರೂ ಒಂದುದಿನ ಈ ಬಡಪಾಯಿಗಳನ್ನು ನೋಡಲು ಬಂದೇ ಬರುವನಲ್ಲದೇ ತಮ್ಮ ಮಗ ಎಂದು ಕಾಯುವ ಮುಪ್ಪಿನ ಆ ಜೀವಿಗಳು ಜಗತ್ತಿನ ಎಲ್ಲ ನೊಂದ ತಂದೆತಾಯಿಗಳನ್ನು ಪ್ರತಿನಿಧಿಸಿಬಿಡುತ್ತಾರೆ. ದೂರದ ಬಾಂಬೆಯಲ್ಲಿರುವ ಚನ್ನನನ್ನು ನೋಡಲು ಹೋಗಿಬರಲು ಯೋಚಿಸುವ ತಾಯಿಯ ಮಾತಿಗೆ ಚನ್ನನ ತಂದೆಯ ದೂರದ ಕಲ್ಪನೆಯು ಅಂತಃಕರಣವನ್ನು ಕಲಕಿಬಿಡುತ್ತದೆ. ಆ ದೂರದ ಸಮುದ್ರವನ್ನು ದಾಟಿ ಹೋಗಿ ಹಿಂತಿರುಗುವುದು ಸಾಧ್ಯವೇ ಎಂಬ ಆತನ – ಬೆರಗಲ್ಲ ಎಚ್ಚರವು ಅನೇಕ ಬಗೆಯಲ್ಲಿ ನಮ್ಮ ಸಮಾಜದ ಕ್ರೌರ್ಯವನ್ನು ಧ್ವನಿಸುತ್ತದೆ. ಒಂದುವೇಳೆ ಅಲ್ಲಿಗೆ ಹೋದರೂ ಕೂಡ ತಮ್ಮ ಮಗ ತಮಗೆ ಸಿಗುತ್ತಾನೆ ಎಂಬ ಖಾತ್ರಿ ಇಲ್ಲ ಎಂದುಕೊಳ್ಳುವ ಚನ್ನನ ಅಪ್ಪನ ಪ್ರಜ್ಞೆ ಮೇಲುನೋಟಕ್ಕೆ ಮುಗ್ಧವಾಗಿದ್ದರೂ ಆತನ ಜೀವ ಸಂವೇದನೆ ಗಾಢವಾಗಿ ಮಾಗಿದುದು.[೧] ಅಕಸ್ಮಾತ್ ಒಂದು ವೇಳೆ ಅಲ್ಲಿಗೆ ಹೋಗಿ ತಮ್ಮ ಮಗನ ಗುರುತು ಸಿಕ್ಕಿ ಅವನು ನಮ್ಮನ್ನು

೧. ನಡುಹಗಲಿನಲ್ಲಿ ಕಂದೀಲುಗಳು, ಪುಟ. ೨೫೩–೨೫೫

ಕಂಡು ಮಾತನಾಡಿಸಿದ ನಂತರಕ್ಕೆ ಈತನು ಹೊಲೆಯರವನು ಎಂದು ತಿಳಿದು ಮಗನ ಕೊಂದು ಸಮುದ್ರಕ್ಕೆ ಎಸೆದುಬಿಟ್ಟರೆ ನಾನು ನೀನು ತಾನೆ ಏನು ಮಾಡಬಲ್ಲೆವು ಎಂದು ಹೇಳುತ್ತಲೆ ಹೆಂಡತಿಯನ್ನು ಸಾಂತ್ವನ ಮಾಡುವ ಚನ್ನನ ತಂದೆಯ ನಿಟ್ಟುಸಿರು ಜಗತ್ತಿನ ಎಲ್ಲರ ಭಾವ ಬಿಂದುವನ್ನು ಕಲಕಿಬಿಡುತ್ತದೆ. ಇಂತಹ ಸ್ಥಿತಿಯ ಇಲ್ಲಿ ವಿವರಗಳಿಲ್ಲ. ಆದರೆ ಮಾನದ ಅಪಾರ ವಿವರಗಳಿವೆ. ಚನ್ನನ ಬಗ್ಗೆ ವಿವರಗಳನ್ನು ಕಲ್ಪಿಸಿಕೊಳ್ಳುವ ಗಾರಸಿದ್ಮಾವನ ಅಂತರಂಗದಲ್ಲಿ ನಿಜವಾದ ವಿವರಗಳಿಲ್ಲ. ಅವನ ಬಗ್ಗೆ ಪುರಾಣ ವೀರನಂತಹ ಕಲ್ಪನೆಗಳಿವೆ. ತಮ್ಮ ಜನಾಂಗದ ಒಬ್ಬ ಯುವಕನನ್ನು ಈ ದೇಶದ ಪ್ರಧಾನಿಗಿಂತಲೂ ಉನ್ನತ ಸ್ಥಾನದಲ್ಲಿ ಕೂರಿಸುವ ಸಾಹಸವಿದೆ. ಅಂತಹ ಇಂದಿರಾಗಾಂಧಿಯೇ ಚನ್ನ ಬಂದ ಕೂಡಲೆ ಎದ್ದು ನಿಂತೂ ಗೌರವಿಸಿದರು ಎಂಬ ಆಶಯವಿದೆ. ಇಂತಹ ಪ್ರಸಂಗ ಕಲ್ಪದಲ್ಲೂ ಮಹಾದೇವ ಭಾವುಕ ವಿವರಗಳಿಗೆ ಮಾರುಹೋಗುವುದಿಲ್ಲ. ಕಲ್ಪನೆಗಳಿಂದಲೆ ನಿಜದ ಪರಮ. ಅವಧಿಯನ್ನು ತೋರುವ ಮಹಾದೇವರ ಬರಹ ಇದರಿಂದಲೆ ಜಾಳಾದ ವಿವರಗಳಿಂದ ಎಲ್ಲೂ ಜಾರಿಬೀಳುವುದಿಲ್ಲ.

ಕನ್ನಡ ಕಾದಂಬರಿಗಳ ನಡುವೆ ಕುಸುಮಬಾಲೆಯು ದಲಿತಾನುಭವದ ಅಖಂಡತ್ವವನ್ನು ಪ್ರತಿನಿಧಿಸುತ್ತದೆ. ಜಿ.ಎಸ್.ಅಮೂರ ಅವರು ಕನ್ನಡದ ಶ್ರೇಷ್ಟ ಹತ್ತು ಕಾದಂಬರಿಗಳ ಪೈಕಿ ಕುಸುಮಬಾಲೆಯೂ ಒಂದೆಂದು ಸಾರಿದ್ದಾರೆ. ಮೋಲಂಕಿಯವರು ಕುಸುಮಬಾಲೆಯ ಕಟ್ಟಾ ಬೆಂಬಲಿಗರಾಗಿದ್ದು, ಅದರ ಪರವಾಗಿ ಅನೇಕರನ್ನು ಎದುರುಹಾಕಿಕೊಂಡಿದ್ದರೂ ದಲಿತರ ಬೈಬಲ್ ಕುಸುಮಬಾಲೆ ಎಂಬ ವಿಪರೀತದ ಅತಿ ಮಾತೂ ಕೇಳಿಬಂದಿದ್ದವು. ಇಂತಹ ಅತಿಮಿತಿಯ ಎಲ್ಲ ಓದಿನ ಕ್ರಮಗಳೂ ಕೃತಕವಾದವು. ಕುಸುಮಬಾಲೆಯು ಯಾವ ಮಿತಿಗಳನ್ನು ಹೊಂದಿಲ್ಲ ಎಂದಲ್ಲ. ಮಿತಿಗಳು ಎಲ್ಲ ಕಾಲದ ಕೃತಿಗಳಲ್ಲೂ, ಲೇಖಕನಲ್ಲೂ ಸಹಜ. ಯಾವ ಕೃತಿಯೂ ನಿರ್ಮಿಸುವ ಸಾಮಾಜಿಕ ಆಯಾಮವು ಮುಖ್ಯವಾಗಬೇಕು. ಕುಸುಮಬಾಲೆಯು ದಲಿತ ಬಂಡಾಯ ಪರಂಪರೆಯ ಎಲ್ಲ ಲೇಖಕರ ಪ್ರತಿನಿಧಿ. ಕೃತಿಕಾರ ಇಲ್ಲಿ ಪ್ರಧಾನವೇ ಅಲ್ಲ. ಆತನ ಮೂಲಕ ನಿರ್ಮಿತವಾದ ಪಠ್ಯ ಅದು ಕೇವಲ ಕಾದಂಬರಿಯಾಗಿರದೆ ಆ ಕಾಲದ ಸಮುದಾಯದ ಆತ್ಮಸಾಕ್ಷಿಯೂ ಆಗಿರುತ್ತದೆ. ಅಂತೆಯೆ ಆ ಸಮಾಜದ ಸಾಂಸ್ಕೃತಿಕ ರಚನೆಯೂ ಆಗಿರುತ್ತದೆ. ವಿಮುಕ್ತಿಯ ಕನಸಿನಲ್ಲಿ ಕಾಯುವ ಕುಸುಮಬಾಲೆಯ ಪಾತ್ರಗಳು ಕ್ಷಣಮಾತ್ರ ಬಂದು ಹಾಗೇ ಕರಗಿಹೋದರೂ ನಮ್ಮ ಪ್ರಜ್ಞೆಯಲ್ಲಿ ಅವು ಮಾಯದಲ್ಲಿ ಬಂದು ಕೂತುಬಿಟ್ಟಿರುತ್ತದೆ. ಇಂತಹ ಪರಿಣಾಮವೇ ಉಪಯುಕ್ತವಾದುದು. ಅಬ್ಬರಿಸಿ ಬಂದು ಹೋಗುವ ಪಾತ್ರಗಳು ಆ ಕ್ಷಣಕ್ಕೆ ನಮ್ಮನ್ನು ನಿಬ್ಬೆರಗುಗೊಳಿಸಬಲ್ಲವಷ್ಟೆ. ಮನಜ ಅವರ 'ಸೂರಪ್ಪ' ಕಾದಂಬರಿಯ ನಾಯಕ ಇಂತಹವನೇ. ಬಹುಪಾಲು ಬರಗೂರು ರಾಮಚಂದ್ರಪ್ಪನವರ ಎಲ್ಲ ಪಾತ್ರಗಳು ಕೊಂಬು ಕಹಳೆ ನಗಾರಿಬಾರಿಸಿ ನಮ್ಮನ್ನು ಬೆಚ್ಚಿಸಿ

ತಮ್ಮ ಬಂಡಾಯ ತೋರಿ ಹೊರಟು ಹೋಗುತ್ತವೆ. ಆಮೇಲೆ ಸುಮ್ಮನೇ ಅದೇ ಪಾತ್ರಗಳು ಊರುಕೇರಿಯು ಗಾಢವಾದ ಕತ್ತಲಲ್ಲಿ ಮುಳುಗಿರುತ್ತವೆ. ಆರ್ಭಟದ ಯಾವ ಬರಹವೂ ಕಣ್ಣನ್ನು ತರೆಸಲಾರದು. ಕುಸುಮಬಾಲೆಯ ದುರಂತ ಪ್ರಜ್ಞೆಯು ಮನುಷ್ಯರಾದ ಎಲ್ಲರ ವ್ಯಥೆಯಿಂದ ರೂಪುಗೊಂಡಿದೆ. ದೇವನೂರ ಮಹಾದೇವರ ವ್ಯಕ್ತಿತ್ವದ ಬಗ್ಗೆ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಅವರ ಸಾಹಿತ್ಯದ ದೃಷ್ಟಿಯಲ್ಲಿ ಆ ಎಲ್ಲ ಅಪವಾದಗಳು ಕರಗಿಹೋಗುತ್ತವೆ. ದಲಿತ ಸಾಹಿತ್ಯದ ಗದ್ಯವನ್ನು ವಿಸ್ತರಿಸಿದಷ್ಟೇ ಅಲ್ಲದೆ ಇಡೀ ಕನ್ನಡ ಕಥಾಲೋಕಕ್ಕೆ ಅನನ್ಯವಾದ ರೂಪಕಗಳನ್ನು ಕೊಟ್ಟಿದ್ದಾರೆ.

ಕುಸುಮಬಾಲೆಯ ಒಂದು ಪ್ರಸಂಗಬರುತ್ತದೆ. ಗಾರಸಿದ್ಧಾವನು ಎಳನೀರು ಕದ್ದು ಮಾಲೀಕನ ಕೈಗೆ ಸಿಕ್ಕಿಬಿದ್ದು ಏಟು ತಿಂದು ಕೊನೆಗೆ ತಾನು ಯಾಕೆ ಕದ್ದೆ ಎಂಬುದನ್ನು ಸಮರ್ಪಿಸಿಕೊಂಡು ಹದಿನಾರು ಎಳನೀರನ್ನು ಮಾಲೀಕನ ಮುಂದೆಯೆ ಕುಡಿದು ಶಿಕ್ಷೆಯಿಂದ ಬಿಡಿಸಿಕೊಳ್ಳುತ್ತಾನೆ. ಮಾಲೀಕ ಇಲ್ಲಿ ಬೆರಗಾಗುವುದೇ ಅಲ್ಲದೆ ಆತನ ದಂಡ ಕಟ್ಟುವಂತೆ ಆತನಿಂದಲೇ ಸಾಲ ಪಡೆದು ಗಾರಸಿದ್ಧಾವ ಬಚಾವಾಗುತ್ತಾನೆ. ಇವರಿಬ್ಬರ ನಡುವೆ ಬರುವ ದಸಂಸದ ಕಾರ್ಯಕರ್ತನು ಇಬ್ಬರಿಗೂ ನ್ಯಾಯ ಕೊಟ್ಟು ದಲಿತ ಕೇರಿಗೆ ಮರಳುತ್ತಾನೆ. ಇಲ್ಲಿನ ವಿಶೇಷ ಎಂದರೆ ದಂಡಿಸುವವನಿಗೂ ಆ ದಂಡನೆಗೆ ಒಳಪಡುವವನಿಗೂ ಒಂದೇ ನ್ಯಾಯವನ್ನು ಮಹಾದೇವ ಹಂಚಿಬಿಡುತ್ತಾರೆ. ಮತ್ತೊಂದು ಪ್ರಸಂಗವಿದೆ. ದಸಂಸದ ಎಲ್ಲ ಕಾರ್ಯಕರ್ತರು; ನಾಯಕರು ದಲಿತ ಕೇರಿಯಲ್ಲಿ ರಾತ್ರಿ ಕೂತು ನಾಳಿನ ಚಳವಳಿಯ ಬಗ್ಗೆ ಮಾತನಾಡಿಕೊಳ್ಳುತ್ತಾರೆ. ಈ ಪ್ರಸಂಗದಲ್ಲಿ ಮಹಾದೇವ ಕಾಮಿಕ್ ಆಗಿ ಎಲ್ಲರ ಅಸ್ತಿತ್ವವನ್ನು ಧ್ವನಿಸುತ್ತಾರೆ. ಆದರೆ ದಿಢೀರನೆ ಕುರಿಯಯ್ಯನ ಮೈಮೇಲೆ 'ನನ್ನಿ'ಯು ಪ್ರವೇಶಿಸಿ ಇಡೀ ದಲಿತ ಸಂಘರ್ಷ ಸಮಿತಿಯ ತಿಳುವಳಿಕೆಯನ್ನು ಭಗ್ನಗೊಳಿಸಿ ಬಾಕಿಯ ಮೂಲವನ್ನು ಎತ್ತಿಹಿಡಿದು ತನ್ನವರನ್ನೆ ಅಣಕಿಸುತ್ತದೆ. ಮಹಾದೇವ ಇಲ್ಲೂ ಕೂಡ ನ್ಯಾಯ ಅನ್ಯಾಯ ಎರಡನ್ನೂ ಒಂದೇ ತೂಕದಲ್ಲಿ ಆಡಿ ಎಲ್ಲವನ್ನೂ ಅವರವರ ಮಡಿಲಿಗೆ ಹಾಕಿಬಿಡುತ್ತಾರೆ.

'ಕುಸುಮಬಾಲೆ' ಕಾದಂಬರಿಯಲ್ಲಿ 'ಸ್ತ್ರೀವಾದಿ ಧೋರಣೆ'

ಕುಸುಮಬಾಲೆ ಕೃತಿಯ ಬಗ್ಗೆ ಕನ್ನಡದಲ್ಲಿ ನಡೆದಿರುವ ವಾಗ್ವಾದಗಳನ್ನು, ವಿವಾದಗಳನ್ನು ಗಮನಿಸಿದರೆ ಆ ಕೃತಿಯನ್ನು ಗ್ರೀಕ್ ರಾಣಿ ಹೆಲೆನ್‌ಗೆ ಹೋಲಿಸುವ ಮನಸ್ಸಾಗುತ್ತದೆ. ಮಾರ್ಲೋ ಹೇಳಿದ್ದನ್ನು ನಂಬುವುದಾದರೆ ಆಕೆಗಾಗಿ ಹಲವಾರು ಯುದ್ಧನೌಕೆಗಳು ಸಾಗರ ಥಳಿದವರಂತೆ ಕುಸುಮಬಾಲೆ ಮುಖ್ಯಕೃತಿ ಎನ್ನುವವರು ಕೆಲವು ಅಕ್ಷೋಹಿಣಿ, ಇವರೆಲ್ಲಾ ಯುದ್ಧಮಾಡಿ ಕೊನೆಗೆ ಕೈಚೆಲ್ಲಿ ಕುಳಿತಿದ್ದಾರೆ.

'ಕುಸುಮಬಾಲೆ' ಒಂದರ್ಥದಲ್ಲಿ ಕೃತಿಯ ಕೇಂದ್ರದಲ್ಲಿರಬಹುದು. ಕೃತಿಯ ಹೆಸರು 'ಕುಸುಮಬಾಲೆ' ಎಂದಿರುವುದರಿಂದ ನಾವು ಸಹಜವಾಗಿ ಕೃತಿಯ ಮುಖ್ಯಪಾತ್ರ 'ಕುಸುಮಬಾಲೆ'ಯೆಂದೂ, ಅವಳ ಬದುಕು–ವರ್ತನೆ–ಅನುಭವಗಳು ಕೃತಿಯ ಕೇಂದ್ರದಲ್ಲಿರುತ್ತವೆಂದೂ ನಿರೀಕ್ಷಿಸುತ್ತವೆ. ಆದರೆ, ಒಂದು ಕೃತಿಯ ಕೇಂದ್ರ ಪಾತ್ರದಂತೆ ಅವಳೆಲ್ಲೂ ವರ್ತಿಸುವುದಿಲ್ಲ. ಇಡೀ ಕೃತಿಯಲ್ಲಿ 'ಕುಸುಮಬಾಲೆ' ಒಂದೇ ಒಂದು ಸಂದರ್ಭದಲ್ಲಿ ಒಂದೇ ಒಂದು ವಾಕ್ಯವನ್ನುಚ್ಛರಿಸುತ್ತಾಳೆ. ಅದೂ ಇಂಗ್ಲಿಷ್‌ನಲ್ಲಿ

'I Want to be in my home'

ಜೋತಮ್ಮ ಮೈದುಂಬಿದಾಗ ಕುರಿಯಯ್ಯ ಕಾಣುವ ತಲಾತಲಾಂತರದ ನನ್ನಿಕೂಡಾ

ಮೇಲು ಕೆಳವರ್ಗಗಳ ಗಂಡುಹೆಣ್ಣುಗಳು ಕೂಡುವ ನಿರಂತರ ಸತ್ಯದ್ದಾಗಿದೆ.

ಅದಾಗಿ ಇದಾಗಿ ಈರಿ ಹೈದನ ಜೀವವು ಸಹುರು ಬೇಲಿ ಮ್ಯಾಲ ಹನ್ನೆಡು ಜನಗಂಟಾನೂ ನೆಗ್ತಕೂತಿದ್ದು ಅಮ್ಯಾಲದು ತನ್ನ ದಾರಿ ಹಿಡಿದುದಾಗಿ ಅದಾಗಿ ಮೋಕಪ್ಪಲಿ ಚನ್ನನ ಕೊಲೆ ಕಳ್ದು ತಿಳಿಯದಾಗಿ ಆಗಿ ಆಮ್ಯಾಲ ತೊರಮ್ಮನ ಹಟ್ಟೇಲಿ ಕೆಂಪೀಯು ಹೆತ್ತಂಥ ಮಾಂಸದ ಮುದ್ದುಯು ಕಿರ್ರೋ ಅಂತಿದ್ದಂತೆ ಆ ಕಿರ್ರೋ ಅಂಬುದ ದ್ಯಾನುಸ್ಥ, ಮೂರುಕಾಸು ನುಗ್ಗುಸೋ ಕಿವಿ ತೂತ್ಗ ಕೆಂಬಣ್ಣದ ವಾಲಗರಿ ಹಾಕ್ಕಂಡೂ ಆ ಕಿವಿ ಮ್ಯಾಗಲ ತೂರಮ್ಮನ ಚೊಟ್ಟಗ ಚೆನ್ನದ ನೀರು ಹುಯ್ಸಿ ಮಾಡಿಸಿದಂಥ ಮೇಟಿ ಕೂಳವನಿಗ ಧರುಸಿದ್ದಂಥ ತೂರಮ್ಮಗ ಕಿವಿಗದು ಮುಟ್ಟಿತು. ಆ ಚಣದವಳು. ಒಳ್ಳೆ ಗಳು ಗಾಲಿ ಹಿಡ್ದು ಆ ಜೀವಾಡ್ಸುತಿದ್ದ ಆತ ಹುಳಾವ ತತರವಿತರನ ನೆಲ್ಕ ಇಟ್ಟು ಎಡಗೈ ಹೆಬ್ಬೆಟ್ಟನ್ನು ಅದರ ಸರೀರದ ಮ್ಯಾಗಿಟ್ಟು ಅದುಮ್ತು ಚಿಮುಕೀ ಆ ಸರೀಲದಿಂದ ಆ ಅದರ ಜೀವ್ವ ತಗದೂ.

ಆಗಲಾಗ ತೂರಮ್ಮನು, ಮಾನವರಲ್ಲದವರು ಒಳಗಣ್ಣುಗ ಕಾಣ್ವ ಅಂಜನವ ಕಣ್ಣು ರೆಪ್ಪೆಗ ಉಳ್ದು, ದಿಟ್ಟುಸ್ತ ಪುರಾಣ ಕಾಯ್ದಂಥ ಆ ರಾತ್ರಿಗ ಅದೇನೇನೂ ಮಾಡಬೇಕೋ ಆ ಕೆಲ್ಸವ ಕಾರ್ಯವ ನಿಶ್ಚಯಿಸಲು ತನ್ನ ಪಕ್ಕದಲ್ಲಿ ಸಪ್ಪಗ ಕೂತಿದ್ದ ಚಿಂತ್ಯಗ ವಹಿಸಿ ತಾನು ಕಂದನಗೆ ಕಣ್ಣಿಟ್ಟು ಕೂತಳು.

ಸಂಕ್ರಾತಿಯ ಆಚರಣೆ ಮಗುವಿನ ರಕ್ಷಣೆಗಾಗಿ ತೂರಮ್ಮನ ಮನೆಯಲ್ಲಾಗುವ ಅದ್ಭುತ ಆಚರಣೆ, ಮಾಂತ್ರಿಕರು ಕುಸುಮಳ ಮೇಲೆ ನಡೆಸುವಂತಹ ಉಗ್ರವಾದ ಆಚರಣೆಯೂ ಅಲ್ಲದೆ ದ.ಸಂ.ಸ.ಯ ಮೆರವಣಿಗೆಯ ಆಧುನಿಕ ಆಚರಣೆಯೂ ಇದರಲ್ಲಿದೆ. ಜಾತಿ ವಿಚಾರದಲ್ಲಿ ಮನುಷ್ಯನ ಮೂಲದ ಬಗೆಗೆ ಇರುವ ನಿಜವಾದ ಗೊಂದಲ, ಅಸ್ಪಷ್ಟತೆ ಇವು ಈ ಕೃತಿಯಲ್ಲಿ ಕಂಡುಬರುತ್ತದೆ. ಕಾಲದ ವಿಷಯದಲ್ಲೂ ಈ ಕೃತಿಯಲ್ಲಿ ಜೋತಮ್ಮದೀರು, ಬಸಪ್ಪಸೋಮಿ ಕಥೆ ಹಳೆಯ ಕಾಲದ್ದು ಎನ್ನಿಸಿದರೂ ಡಾಕ್ಟರು, ಚನ್ನ

ಅತ್ಯಂತ ಮಾಡ್ರನ್ ಆಗಿದೆ.[೧] ಕುಸುಮಾಳ ಬಗ್ಗೆ ಓದುತ್ತಾ ಹೋದಂತೆ ಇದೊಂದು ಪುರಾಣ ಅನ್ನಿಸುತ್ತಿರುತ್ತದೆ. ಈ ಕಾಲದಲ್ಲಿ ಇದ್ದೇವೆ ಅನ್ನಿಸುತ್ತದೆ.

'ಕಾದಂಬರಿಯ ಹೆಸರು 'ಕುಸುಮಬಾಲೆ'ಯೆಂದಿದ್ದರೂ ಆಕೆ ಎರಡೇ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಬಾಣಂತಿಯಾಗಿ, ಭೂತ ಬಡಿಸಿಕೊಂಡವಳಾಗಿ, ಇದು ಕಾದಂಬರಿಯ ನಿರ್ವಹಣೆಗೆ ಸಂಬಂಧಿಸಿದ ಒಂದು ಮುಖ್ಯ ಸಮಸ್ಯೆ.

೧. ಯಾರ ಜಪ್ತಿಗೂ ಸಿಗದ ನವಿಲುಗಳು, ಪುಟ. ೭೧–೭೨

ಅಧ್ಯಾಯ ಐದು

ಚೋಮನ ದುಡಿ ಮತ್ತು ಕುಸುಮಬಾಲೆ – ಕಾದಂಬರಿಗಳ ನಡುವಿನ ತೌಲನಿಕ ಅಧ್ಯಯನ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಲಿತ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ, ಮತ್ತು ವಿಶಿಷ್ಟ ಧ್ವನಿ ಇದೆ. ಕನ್ನಡ ಸಾಹಿತ್ಯದ ಓದುಗರಿಗೆ ಅಷ್ಟಾಗಿ ಪರಿಚಿತವಲ್ಲದ ಒಂದು ಮನುಷ್ಯ ಲೋಕವನ್ನು ಒಳಗಿನವರಾಗಿ ಚಿತ್ರಿಸುವುದರ ಮೂಲಕ ದಲಿತ ಸಾಹಿತಿಗಳು ಓದುಗರ ಅನುಭವ ಪ್ರಪಂಚವನ್ನು ಹಿಗ್ಗಿಸಿದ್ದಾರೆ. ಸಾವಿರಾರು ವರ್ಷಗಳಿಂದ ಮೂಕವಾಗಿದ್ದ ಜನಾಂಗವೊಂದು ನಿಧಾನವಾಗಿ ಮೈಕೊಡವಿಕೊಂಡು ಎದ್ದು ಮಾತನಾಡಲಾರಂಭಿಸಿದ್ದೇ ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಹೊಸ ಕಂಪನಗಳನ್ನು ಎಬ್ಬಿಸಿದ್ದು ಐತಿಹಾಸಿಕ ಸತ್ಯವಾಗಿದೆ. ದಲಿತ ಪ್ರಪಂಚವನ್ನು ಅಥೆಂಟಿಕ್ ಆಗಿ ಚಿತ್ರಿಸಹೊರಟ ಹಲವು ಲೇಖಕರು ಅಭಿವ್ಯಕ್ತಿ ವಿಧಾನಗಳಲ್ಲು, ಭಾಷಾ ಪ್ರಯೋಗದಲ್ಲೂ ಹೊಸತನ ತೋರಬೇಕಾಯಿತು. ಅಂತಹ ಕನ್ನಡ ಸಾಹಿತ್ಯಕ್ಕೆ ಹೊಸ ರಕ್ತ ತುಂಬುವ ಸೂಚನೆಗಳನ್ನು ಹಲವಾರು ದಲಿತ ದಲಿತೇತರ ಲೇಖಕರು ನೀಡಿದರು. ಅದರಲ್ಲಿ ದೇವನೂರು ಮಹಾದೇವ ಮತ್ತು ಶಿವರಾಮ ಕಾರಂತರೂ ಪ್ರಮುಖರಾದವರು ಎಂದು ಹೇಳಬಹುದು.

ದಲಿತ ಸಾಹಿತ್ಯವನ್ನು ಗಮನಿಸಿದಾಗ 'ದಲಿತ' 'ದಲಿತರು' 'ದಲಿತಪ್ರಜ್ಞೆ' ಮೊದಲಾದ ತಾತ್ವಿಕ ಪರಿಕಲ್ಪನೆಗಳ ಸ್ಪಷ್ಟ ಅರಿವು ಅಗತ್ಯವೆನಿಸುತ್ತದೆ. ವಿದ್ವಾಂಸರ ಪ್ರಕಾರ ೧೯೪೩ರಲ್ಲಿ ಕಾಣಿಸಿಕೊಂಡ 'ಪ್ರಗತಿಶೀಲ ಚಳುವಳಿ' ೧೯೭೩ರಲ್ಲಿ ಮತ್ತೆ 'ಪ್ರಗತಿಪಂಥ' ಎಂಬ ಹೆಸರಿನಿಂದ ಕಾಣಿಸಿಕೊಂಡ ಸಂದರ್ಭದಲ್ಲಿ ದಲಿತ ಎಂಬ ಪದ ಮೊದಲ ಬಾರಿಗೆ ಬಳಕೆಯಾಯಿತು. ದಲಿತ ಎಂಬ ಪದಕ್ಕೆ ದಳ, ಗುಂಪು, ಸೈನ್ಯ, ಶೋಷಿತ ದಮನಕ್ಕೆ ಒಳಗಾದವರು ಎಂಬ ನಾನಾ ಅರ್ಥಗಳು ಬರುತ್ತವೆ. ಭಾರತದಾದ್ಯಂತ ಅಸ್ಪೃಶ್ಯತೆಗೆ 'ದಲಿತ' ಎಂಬ ಪದವನ್ನು ಬಳಸಲಾಗಲಾಯಿತು.

ಇಲ್ಲಿ ಮುಖ್ಯವಾಗಿ ಒಬ್ಬ ದಲಿತ ಕವಿ ಹಾಗೂ ದಲಿತೇತರ ಕವಿ ಇಬ್ಬರೂ ದಲಿತರ ಜೀವನ ಚಿತ್ರಣವನ್ನು ಯಾವ ರೀತಿ ಚಿತ್ರಿಸಿದ್ದಾರೆ ಎಂಬುದನ್ನು ತೌಲನಿಕ ಅಧ್ಯಯನ ನಡೆಸಲಾಗಿದೆ.

ದಲಿತೇತರ ಕವಿ ಶಿವರಾಮ ಕಾರಂತರು ಗಾಂಧೀಜಿಯವರ ಪ್ರಭಾವದಿಂದ ಸ್ವತಂತ್ರ ಪೂರ್ವ ಸಂದರ್ಭದಲ್ಲಿ ಹರಿಜನೋದ್ಧಾರ ಮಾಡಬೇಕೆಂದಿದ್ದು ಆ ನಿಲುವಿನಲ್ಲಿ ದಲಿತರ ನೋವು, ಸಂಕಟ, ಬಡತನ, ಹಸಿವು ಇವುಗಳನ್ನು ಅರಿತುಕೊಂಡು ಅವರ ಸಮಸ್ಯೆಗಳನ್ನು

[illegible]

[illegible]

[illegible]

[illegible]

[illegible]

[illegible]

[illegible]

ಹಾಗೂ ಅವರು ಶೋಷಣೆಗೆ ಒಳಗಾಗುವ ಅಂಶಗಳನ್ನು ಕುರಿತು ೧೯೩೩ರಲ್ಲಿ ರಚಿಸಿದಂತಹ ಏಕೈಕ ಕೃತಿಯಾದ 'ಚೋಮನದುಡಿ'ಯಲ್ಲಿ ದಲಿತರ ಜೀವನ ಚಿತ್ರಣವನ್ನು ಚಿತ್ರಿಸಿದ್ದಾರೆ.

ಹಾಗೆ ದಲಿತ ಕವಿ ಎಂದೇ ಪ್ರಸಿದ್ಧರಾಗಿರುವ ದೇವನೂರು ಮಹಾದೇವ ಒಬ್ಬ ದಲಿತ ಕುಟುಂಬದಿಂದ ಬಂದು ತನ್ನ ಜನಾಂಗದವರು ಅನುಭವಿಸುವ ನೋವು, ಬಡತನ, ಶೋಷಣೆ ಮೊದಲಾದ ದಲಿತ ಸಮಸ್ಯೆಗಳನ್ನು ಇವರು ರಚಿಸಿರುವ 'ಕುಸುಮಬಾಲೆ' ಕಾದಂಬರಿಯಲ್ಲಿ ಕಾಣಬಹುದು.

ಇವರಿಬ್ಬರ ಕಾದಂಬರಿಗಳು ದಲಿತರ ಮತ್ತು ಮೇಲು ಜಾತಿಯವರ ನಡುವಿನ ಜಾತಿಯತೆಯ, ಅಸ್ಪೃಶ್ಯತೆಯ ಕಂದರವನ್ನು ಅನಾವರಣಗೊಳಿಸುತ್ತದೆ. ಹಿಂದಿನ ಕಾಲದಿಂದಲೂ ಅಸ್ಪೃಶ್ಯರು ಯಾವ ರೀತಿ ಅಸಮಾನತೆಗೆ ಒಳಗಾಗಿದ್ದಾರೆ ಮೇಲು-ಕೀಳು ಎಂಬ ಅವರಲ್ಲಿನ ಭಾವನೆ, ತಾರತಮ್ಯಗಳಿಗೆ ಇವರು ಹೇಗೆ ಮೌನವಾಗಿ ಸಹಿಸಿಕೊಳ್ಳುತ್ತಾರೆ ಎಂಬುದನ್ನು ಇವರ ಕಾದಂಬರಿಗಳಲ್ಲಿ ಯಶಸ್ವಿಯಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ.

ದಲಿತ ಲೋಕದಲ್ಲಿ ಹಿರಿಯ ತಲೆಮಾರಿನಿಂದ ಹಿಡಿದು ಹೊಸ ತಲೆಮಾರಿನವರೆಗೆ ಯಾವ ರೀತಿಯಲ್ಲಿ ದಲಿತರು ಶೋಷಣೆಗೆ ಒಳಗಾಗಿದ್ದಾರೆ. ಅವರ ನೋವು-ನಲಿವು, ಬದುಕು-ಬವಣೆ, ನಂಬಿಕೆ-ನಡವಳಿಕೆ, ಬಡತನ ಒಟ್ಟಾರೆ ದಲಿತರ ಎಲ್ಲ ಒಳ ಹೊರಗನ್ನು ಮೊದಲ ಬಾರಿಗೆ ಗದ್ಯದಲ್ಲಿ ಬಿಚ್ಚಿಟ್ಟ ಯಶಸ್ಸು ಮಹಾದೇವ ಅವರದು. ಪೂರ್ವಗ್ರಹಕ್ಕೆ ಒಳಗಾಗದೆ ಆಕ್ರೋಶಕ್ಕೆ ಅವಕಾಶಕೊಡದೆ ಸಂಯಮದಿಂದ ವಸ್ತುಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸುವಲ್ಲಿ ಶಿವರಾಮ ಕಾರಂತರು ಯಶಸ್ವಿಯಾಗಿದ್ದಾರೆ.

ಈ ಎರಡು ಕೃತಿಗಳಲ್ಲಿ ಗಮನಿಸಬಹುದಾದ ಬಹಳ ಮುಖ್ಯವಾದ ಅಂಶವೆಂದರೆ ದಾಸ್ಯ, ಗುಲಾಮಗಿರಿ ಇದನ್ನು ಓದಿ ತಿಳಿದುಕೊಳ್ಳುವಾಗ ಪ್ರತಿಭಟನೆಯ ಪಾತ್ರಗಳು ಸಾಹಿತ್ಯದ ಮೂಲಕ ತಿಳಿಯುತ್ತದೆ. ಹಾಗೂ ಅಸಹಾಯಕತೆ, ಭ್ರಮಾಲೋಕತೆ, ಮೂಢನಂಬಿಕೆಗಳು ಕಾಣಿಸಿಕೊಳ್ಳುತ್ತವೆ. ಹಾಗೂ ಜಮೀನ್ದಾರಿ ಪದ್ಧತಿ, ಜೀತಪದ್ಧತಿಗಳು ಕಂಡುಬರುತ್ತವೆ. ಜೊತೆಗೆ ಅಧಿಕಾರಿಶಾಹಿವರ್ಗ ಮತ್ತು ಕೆಳವರ್ಗಗಳು ಮತ್ತು ವರ್ಗ ಮತ್ತು ವರ್ಣಗಳ ಘರ್ಷಣೆ, ಹಸಿವು, ಬಡತನ, ನೋವು, ಸಿಟ್ಟು, ಆಕ್ರೋಶ ಹೀಗೆ ಮೊದಲಾದ ಅಂಶಗಳನ್ನು ಕುರಿತು ಈ ಇಬ್ಬರು ವ್ಯಕ್ತಿಗಳು ಚರ್ಚಿಸಿದ್ದಾರೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಈ ಎರಡು ಕೃತಿಗಳಲ್ಲಿ ಒಂದೇ ರೀತಿಯಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳು ಮತ್ತು ವರ್ಣಗಳನ್ನು ಕುರಿತ ಚಿತ್ರಣವಿದೆ. ಹಾಗೆ ಅವರ

ಬದುಕಿನ ಚಿತ್ರಣವನ್ನು ಬಡತನ, ಹಸಿವು, ಸಂಕಟ, ಅವರ ನೋವು ಹಾಗೂ ದಲಿತರು ಶೋಷಣೆಗೆ ಒಳಗಾಗುವುದನ್ನು ಸಹ ಈ ಕೃತಿಗಳಲ್ಲಿ ಕಾಣಬಹುದು. ಜೊತೆಗೆ ದಾಸ್ಯ, ಗುಲಾಮಗಿರಿ, ಜಾತಿ, ಧರ್ಮ, ಮತಬೇಧಗಳು, ವರ್ಗಬೇಧವನ್ನು ಅವರ ಪ್ರತಿಭಟನೆ ಮೊದಲಾದ ಸಮಾನ ಅಂಶಗಳನ್ನು ಈ ಕೃತಿಗಳಲ್ಲಿ ಕಾಣಬಹುದು.

ಚೋಮನದುಡಿ:

ನವೋದಯ ಕಾಲಘಟ್ಟದ ಕವಿ ಹಾಗೂ ದಲಿತೇತರ ಕವಿಯಾದ ಶಿವರಾಮ ಕಾರಂತರು ಗಾಂಧೀಜಿಯವರ ಪ್ರಭಾವದಿಂದ ದಲಿತರ ಮೇಲೆ ಸಮಾಜದಲ್ಲಿ ಆಗುತ್ತಿರುವ ಶೋಷಣೆಯನ್ನು ಕುರಿತು ಚೋಮನದುಡಿ ಕೃತಿಯನ್ನು ರಚಿಸಿರುವರು.

ಇಲ್ಲಿ ಕಾರಂತರು ಚೋಮನ ಪಾತ್ರದ ಮೂಲಕ ದಲಿತರ ನೋವನ್ನು ಅವರು ಶೋಷಣೆಗೆ ಒಳಗಾಗುವುದನ್ನು ತಿಳಿಸಿದ್ದಾರೆ. ಅಲ್ಲದೆ ಇಲ್ಲಿ ಅಸಹಾಯಕತೆ ಪ್ರಧಾನವಾಗಿ ಕಂಡುಬರುವುದನ್ನು ನೋಡಬಹುದು.

ಈ ಕಾದಂಬರಿಯಲ್ಲಿ ಚೋಮನಿಗೆ ಅವನು ಬಾರಿಸುತ್ತಿದ್ದ 'ದುಡಿ' ಅವನಿಗೆ ಒಡನಾಡಿಯಾಗಿದೆ. ಕೃತಿಯ ಪ್ರಾರಂಭದಲ್ಲಿ ದುಡಿಯನ್ನು ಕುರಿತು ಕೇಳಿಬರುವ ವರ್ಣನೆ ಹೀಗಿದೆ:–

ಇಲ್ಲಿ ಕಾರಂತರು ದುಡಿಯನ್ನು ಚೋಮನನ್ನು ಕುರಿತು ಅವನು ಹಿಡಿದ ದುಡಿ, ಎತ್ತಿದಕೈ, ತುಂಬಿದ ಆವೇಶ ಎಲ್ಲವೂ ಇದ್ದಂತೆ ಇದೆ. ಆದರೆ ಚೋಮನಿಲ್ಲ ಎಂದು ಕಾದಂಬರಿಯ ಅಂತ್ಯ ಭಾಗದಲ್ಲಿ ವ್ಯಕ್ತಪಡಿಸಿದ್ದಾರೆ. ಕಾರಂತರು ಚೋಮನನ್ನು ಇವನೇ ಅಭೇದ್ಯನಾಗಿ ಹೋಗುವುದು ಈ ವ್ಯವಸ್ಥೆ ಲಯವಾಗಲೇಬೇಕೆಂಬ ಧ್ವನಿಯೇ ಈ ಚಿತ್ರಣವಾಗಿದೆ ಎಂದು ಹೇಳಬಹುದು. ಈ ದುಡಿಯ ಜೊತೆಗೆ ಅವನು ಸಾಕುತ್ತಿದ್ದಂತಹ ಎತ್ತುಗಳು ಸಹ ಒಂದು ರೀತಿಯಲ್ಲಿ ಅವನಿಗೆ ಒಡನಾಡಿಯಾಗಿದ್ದವು. ಏಕೆಂದರೆ ಕಾರಂತರು ಚಿತ್ರಿಸಿರುವ ಈ ಕೃತಿಯಲ್ಲಿ ಚೋಮನ ಆಸೆಗೆ ಈ ಎತ್ತುಗಳೇ ಮೂಲಕಾರಣ ಎನ್ನಬಹುದು. ಏಕೆಂದರೆ ಅವನು ಗೇಣಿಗೆ ಭೂಮಿ ಪಡೆಯಬೇಕು. ತಾನು ವ್ಯವಸಾಯಗಾರನಾಗಬೇಕು. ಹೇಗಿದ್ದರೂ ವ್ಯವಸಾಯಕ್ಕೆ ಎತ್ತುಗಳಿವೆಯಲ್ಲ ಎಂಬ ಒಂದು ದೂರದಾಕಾಂಕ್ಷೆಯನ್ನು ಹೊಂದಿದವನಾಗಿದ್ದನು. ಅಲ್ಲದೆ ಆ ಎತ್ತುಗಳನ್ನು ಧನಿಯವರು ೧೦ ರೂಗೆ ಕೊಡು ಎಂದರೂ ಈತ ಕೊಡುವುದಿಲ್ಲ. ಕಾರಣ ಅವು ಅವನ ಒಡನಾಡಿಯಂತಿದ್ದವು. ಚೋಮನು ಸತ್ತನಂತರ ಅವು ಅವನ ಹತ್ತಿರ ಬರುವುವು. ಈ ಅಂಶ ಚೋಮ ಮತ್ತು ಆ ಪ್ರಾಣಿಗಳ ನಡುವಿನ ಪ್ರೀತಿಯನ್ನು ತೋರಿಸುತ್ತದೆ.

ಮೂಢನಂಬಿಕೆಗಳು ದಲಿತರಲ್ಲಿ ರಕ್ತಗತವಾಗಿವೆ ಎಂಬುದನ್ನು ಕಾರಂತರು ಕುರಿತು ಚೋಮನ ಮೂಲಕ ಈ ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ. ಇಲ್ಲಿ ಚೋಮನು

ಮೂಢನಂಬಿಕೆಗೆ ಮಾರುಹೋಗಿದ್ದು, ದಲಿತನಾದರು ತನ್ನ ಜಾತಿಯಲ್ಲೆ ಇರಬೇಕು, ಮತಾಂತರ ಹೊಂದಬಾರದು ಎಂಬುದನ್ನು ಗಮನಿಸಿದಾಗ ಇಲ್ಲಿ ಚೋಮ ಮೂಢನಂಬಿಕೆಗೆ ಒಳಗಾಗಿ ಈ ನಿರ್ಧಾರಕ್ಕೆ ಬಂದಿರುತ್ತಾನೆ. ಚೋಮನ ಹೆಂಡತಿ ಗುಳಿಗನ ಉಪದ್ರವದಿಂದ ರಕ್ತಕಾರಿ ಸತ್ತಳಂತೆ, ಗುಳಿಗನೂ ಕೂಡ ಪಂಜುರ್ಲಿ ಭೂತದಂತೆ ಒಂದಾಗಿದೆ. ಇಲ್ಲಿ ಕಥೆ ಆರಂಭವಾಗುವುದಕ್ಕಿಂತ ಮುಂಚೆ ಇರುವ ಅಂದರೆ ಮೊದಲೇ ಸತ್ತು ಹೋಗಿದ್ದ ಚೋಮನ ಹೆಂಡತಿಯ ಸಾವಿನ ಬಗ್ಗೆ ಇಂತಹ ಭೀಕರ ಧಾರ್ಮಿಕ ನಂಬಿಕೆಯನ್ನು ಹೇಳುತ್ತಾರೆ ಹಾಗೂ ಕಾಫಿ ತೋಟಕ್ಕೆ ಕೂಲಿಗೆಂದು ಹೊರಟ ಕಾರ್ಕಳದ ಮೊಮ್ಮಗಳು ದಾರಿಯಲ್ಲಿ ಜ್ವರದಿಂದ ಸಾಯುತ್ತಾಳೆ. ಅದು ಸಹ ಪಂಜುರ್ಲಿಯ ಉಪದ್ರವ ಎಂದು ಭಾವಿಸುತ್ತಾರೆ ಹಾಗೂ ಚೋಮ ಮತಾಂತರ ಹೊಂದಲು ಹೋಗುವ ಸಂದರ್ಭದಲ್ಲಿ ಪಂಜುರ್ಲಿ ಭೂತ ''ಚೋಮ ಮೀಸೆ ಹಣ್ಣಾಗುವ ತನಕ ನನ್ನನ್ನು ನಂಬಿ ಬಂದು, ಈಗ ಸಾಯುವ ಮೂರು ದಿನಕ್ಕೆ ಮುಂಚೆ ನನ್ನನ್ನು ಬಿಟ್ಟು ಪಾದ್ರಿಯ ಹಿಂದೆ ಓಡುತ್ತಿಯ ಎಂದು ಕೇಳಿದಂತೆ ಹಿಂತಿರುಗುತ್ತಾನೆ. ಇದಲ್ಲದೆ ಚೋಮನ ಮಗ ಗುರುವ ಮತಾಂತರ ಹೊಂದಿ ಕಿರಿಸ್ಥಾನದ ಹುಡುಗಿಯನ್ನು ಮದುವೆಯಾದ ಸಂದರ್ಭದಲ್ಲಿ ಚೋಮ ಹೇಳುವ ಮಾತಿನಲ್ಲಿ ಚನಿಯ ಸಾಯುವ ಸಂಕಟದಲ್ಲಿದ್ದಾಗಲೂ ಬೆಳ್ಳಿ ಗ್ರಾಮದೇವತೆ/ ಭೂತಕ್ಕೆ ಮೊರೆಹೋಗುವುದು ಈ ಎಲ್ಲಾ ಅಂಶಗಳು ಈ ಕಾದಂಬರಿಯಲ್ಲಿ ಕಂಡುಬರುವ ಮೂಢನಂಬಿಕೆಗಳಾಗಿವೆ.

ಕಾರಂತರು ಮೂಢನಂಬಿಕೆಗಳನ್ನು ಚಿತ್ರಿಸಿರುವ ಜೊತೆಗೆ ಕೃತಿಯಲ್ಲಿ ಕಂಡುಬರುವ ಪ್ರತಿಭಟನೆ ಚಿತ್ರಿಸಿರುತ್ತಾರೆ. ಇಲ್ಲಿ ಚೋಮನಿಗೆ ತಾನು ಬೇಸಾಯಗಾರನಾಬೇಕೆಂಬ ಆಸೆ ಕುತ್ತಿಗೆ ತುಂಬಾ ಇದೆ. ಹಾಗೆ ಆ ಒತ್ತಡದಲ್ಲಿ ಧಣಿಯನ್ನು ಮೂರು ಸಂದರ್ಭದಲ್ಲಿ ಕೇಳಿ ನಿರಾಶೆಯ ಮಾತನ್ನು ಪಡೆಯುತ್ತಾನೆ. ಅಲ್ಲದೆ ವ್ಯಕ್ತಿಯ ತಾಯಿ ಆಡಿದ ಮಾತು 'ಅಬ್ಬ ಹೊಲೆಯರ ಸೊಕ್ಕೆ; ದಲಿತರು ಜೀತದವರು ಸ್ವತಃ ಉಳಲು ಶುರು ಮಾಡಿದರೆ ತಮಗೆ ಬಿಟ್ಟಿಗೆ ಕೆಲಸ ಮಾಡುವವರಾರು? ಮತ್ತೊಮ್ಮೆ ಸಂಕಪ್ಪಯ್ಯ 'ಚೋಮ ನಿನಗೆ ಕೊಡಬಾರದೆಂದಿಲ್ಲ ಆದರೆ ಅದು ನನ್ನ ಅಮ್ಮ ಸತ್ತ ಮೇಲೆ ಎನ್ನುವುದು ಇವು ಈ ಕಾದಂಬರಿಯ ಪ್ರತಿಭಟನೆಯ ಅಂಶಗಳು. ಇಲ್ಲಿ ಕಾರಂತರು ಸಂಕಟಪ್ಪಯ್ಯನ ಅಮ್ಮನನ್ನು ಸಂಪ್ರದಾಯದ ಸಂಕೇತವಾಗಿಸಿದ್ದಾರೆ.

ಈ ಸಂಪ್ರದಾಯ ಸಾಯುವುದು ಚರಿತ್ರೆಯ ಮುನ್ನಡೆಗೆ ಸಾಮಾಜಿಕ ಪ್ರಗತಿಗೆ ಅಗತ್ಯವೇ ಆಗುತ್ತದೆ. ಇಲ್ಲಿ ಚೋಮ ಧಣಿಗಳಿಂದ ಎಷ್ಟೆಷ್ಟು ನಿರಾಶೆ ಹೊಂದಿದರೂ ಅಷ್ಟಷ್ಟೇ ಪ್ರತಿಭಟನೆಯನ್ನು ತೋರುತ್ತಾನೆ ಹಾಗೂ ರೊಚ್ಚಿಗೇಳುತ್ತಾನೆ. ಇದನ್ನು ಆರೋಹಣಾ ಕ್ರಮದಲ್ಲಿ ಲೇಖಕರು ತೋರಿಸಿದ್ದಾರೆ. ಚೋಮ ಕೆಲಸದಲ್ಲಿ ಅಸಡ್ಡೆ ತೋರಿದಾಗ ಆತನ ಧಣಿ 'ನೀನು ಬೆಳಿಗ್ಗೆಯೂ ಸೇಂದಿ ಅಂಗಡಿಗೆ ಹೋಗತೊಡಗಿದ್ದಿಯಾ

ಎನ್ನುತ್ತಾರೆ. ಯಾವಾಗಲೂ ಒಡೆಯರಿಗೆ ತಗ್ಗಿ ನಡೆಯುವ, ದೊಡ್ಡ ಧ್ವನಿಯಲ್ಲಿ ಮಾತಾಡಲೂ ಹೆದರುವ ಚೋಮ ‘‘ಹೂಂ ನೀವು ನನಗೆ ಕೈ ತುಂಬ ಸಂಬಳ ಕೊಡುವಾಗ ಬೆಳಿಗ್ಗೇನು ಸಂಜಿಗ್ಗೇನು ಎಂದು ಉತ್ತರಿಸುತ್ತಾನೆ. ಇನ್ನು ಇಲ್ಲಿ ಕಾಲಿಡಬೇಡ ಎಂದು ಗದರಿದಾಗ ತಿರಸ್ಕಾರದ ನಗೆ ನಕ್ಕು ಮನೆಗೆ ನಡೆಯುತ್ತಾನೆ. ಇಂತಹ ಪ್ರತಿಭಟನೆ ಏನಿದ್ದರೂ ಅವನ ವೈಯಕ್ತಿಕ ಮಟ್ಟದಲ್ಲೇ ನಡೆಯುತ್ತದೆ. ಧಣಿಗಳ ಮೇಲಿನ ಸಿಟ್ಟನ್ನು ತನ್ನ ಎತ್ತಿನ ಕಾಲು ಕುಂಟು ಮಾಡುವುದರಲ್ಲಿ ತೀರಿಸಿಕೊಳ್ಳುತ್ತಾನೆ. ಇಲ್ಲಿ ಪ್ರತಿಭಟನೆ ಒಂದು ಸಾಮಾಜಿಕ ಪ್ರಜ್ಞೆಯಾಗಿ ಬೆಳೆಯುವ ಹಂತ ಸಮಾಜದ್ದಾಗಿರುವುದಿಲ್ಲ ಎಂಬುದನ್ನು ವ್ಯಕ್ತಪಡಿಸಲಾಗಿದೆ.

ಹಾಗೆಯೇ ದೇವನೂರು ಮಹಾದೇವರ ಕಾದಂಬರಿ ಕುಸುಮಬಾಲೆಯಲ್ಲೂ ಸಹ ನಾವು ಪ್ರತಿಭಟನೆಯ ಅಂಶವನ್ನು ಕಾಣುತ್ತೇವೆ. ಮುಖ್ಯವಾಗಿ ಪ್ರತಿಭಟನೆಯ ಕೇಂದ್ರಬಿಂದು ಇಲ್ಲಿ ನಾಗರಾಜು ಗಾರಸಿದ್ಧ್ಮಾವನಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಹೇಗೆ ನಾಗರಾಜು ಪ್ರತಿಭಟಿಸುತ್ತಾನೆ, ದಲಿತ ಸಂಘವನ್ನು ಬೆಳೆಸುವ ಕೆಲಸದಲ್ಲಿ ಹೇಗೆ ತೊಡುತ್ತಾನೆ ಎಂಬುದನ್ನು ಚರ್ಚಿಸಿದ್ದಾರೆ.

‘ಚೋಮನದುಡಿ’ ಕಾದಂಬರಿಯ ಕೇಂದ್ರಬಿಂದು ಚೋಮ. ಇವನ ಮೂಲಕ ಮತ್ತು ಇವನ ಕುಟುಂಬದ ಮೂಲಕ ದಲಿತರ ಜೀವನ ಚಿತ್ರಣವನ್ನು ಚಿತ್ರಿಸಿದ್ದಾರೆ.

ಕಾರಂತರು ಚೋಮನನ್ನು ಕುರಿತು ‘ನಮ್ಮಲ್ಲಿ ಅಸ್ಪೃಶ್ಯರಾದ ಹೊಲೆಯರ ತಂಡದಲ್ಲಿ ಮೋರ ಬೈರ, ಅಜಲಿ, ಮಾರಿ ಎಂಬ ಬೇರೆ ಬೇರೆ ವಿಭಾಗವಿದ್ದು ಇದರಲ್ಲಿ ಮಾರಿ ಜನಾಂಗದವರಿಗೆ (ಹೊಲೆಯರಿಗೆ) ವ್ಯವಸಾಯ ಮಾಡಲು ಅವಕಾಶವಿರಲಿಲ್ಲ. ಇವರು ಸತ್ತ ಜಾನುವಾರುವನ್ನು ತಿಂದೋ ಇಲ್ಲವೆ ನಿಂದನೀಯವಾದ ಇನ್ನಾವ ವೃತ್ತಿಯನ್ನು ಮಾಡಿ ಜೀವನ ಸಾಗಿಸಬೇಕು. ಇಂತಹ ಬಳಗಕ್ಕೆ ಸೇರಿದ ಜೀವಿ ಚೋಮ ಎಂದು ಕೃತಿಯ ಮುನ್ನುಡಿಯಲ್ಲಿ ಚೋಮನ ಪಾತ್ರವನ್ನು ಚಿತ್ರಿಸುತ್ತಾರೆ.

ಕೃತಿಯಲ್ಲಿ ಚೋಮನು ಹಾಯಲಾರದ ಗೋಡೆಗಳಿಗೆ ತಲೆ ಚಚ್ಚಿಕೊಂಡು ಸಾಯುತ್ತಾನೆ. ತನ್ನ ಹೋರಾಟದ ಹಠದಲ್ಲಿ ನಮ್ಮ ಅನುಕಂಪವನ್ನು ಗೌರವವನ್ನು ಗಳಿಸಿಕೊಳ್ಳುತ್ತಾನೆ. ತನ್ನ ದುಃಖ ದುಮ್ಮಾನಗಳನ್ನು ಹೇಳಿಕೊಳ್ಳಲು ದುಡಿಯನ್ನು ಉನ್ಮಾದದಲ್ಲಿ ಬಾರಿಸುವ ಚೋಮ ನಮಗೆ ಗೊತ್ತಿರಬಹುದಾದ ಯಾವ ವಿಶಿಷ್ಟ ಹರಿಜನರಿಗಿಂತಲೂ ದೊಡ್ಡವನು. ಅವನ ಎತ್ತರ ಹೇಗೆ ವಾಸ್ತವಕ್ಕಿಂತ ಸ್ವಲ್ಪ ದೊಡ್ಡದಾದದ್ದು ಎನಿಸುವುದರಿಂದಲೇ, ಅವನು ಎಲ್ಲಾ ಕಾಲದ ದೇಶದ ದಲಿತರನ್ನು ಪ್ರತಿನಿದಿಸಬಲ್ಲ ಕಾವ್ಯಪ್ರತಿಮೆಯಾಗಿ ಬಿಡುತ್ತಾನೆ. ಇಂಗ್ಲಿಷ್‌ನಲ್ಲಿ ಹೆಮೈಟಿಕ್ ಎಂಬ ಬಗೆಯ ಚಿತ್ರಣ ಚೋಮನದು.

ಚೋಮ ತಲೆ ಘಟ್ಟಿಸಿಕೊಳ್ಳುವುದಿಲ್ಲ, ಸಿಕ್ಕಿಬೀಳುವುದಿಲ್ಲ. ಇವನಿಗೆ ತಾಳಿ ಬಾಳುವ ಒಳದಾರಿಗಳು ಗೊತ್ತು ಸ್ಪಷ್ಟ ಹಾಗೂ ದಿಟ್ಟ ಗೆರೆಗಳಿಂದ ಕಡೆದು ನಿಲ್ಲಿಸುವ ಚಿತ್ರ ಚೋಮನದಾಗಿದೆ. ಚೋಮನನ್ನು ಕೃತಿಯಲ್ಲಿ ನಾವು ಕಾಣುವುದು ಎಷ್ಟು ಬೇಕೋ ಅಷ್ಟೇ ವಿವರಣೆಗಳಲ್ಲಿ ಮಾತ್ರ.

ಈ ಕಾದಂಬರಿಯಲ್ಲಿ ಚೋಮನದು ಪ್ರಮುಖ ಪಾತ್ರವಾದರೂ ಇಲ್ಲಿ ಬೆಳ್ಳಿ, ಗುರುವ, ಸಂಕಪ್ಪಯ್ಯ ಇವರುಗಳು ಸಹ ಓದುಗರ ಮನದಲ್ಲಿ ಉಳಿದುಕೊಳ್ಳುವ ಪಾತ್ರಗಳಾಗಿವೆ. ಇದರಲ್ಲಿ ಮುಖ್ಯವಾಗಿ ಬೆಳ್ಳಿಯಪಾತ್ರ. ಈಕೆ ಚೋಮನ ಮಗಳು. ಕೃತಿಯಲ್ಲಿ ''ಒಂದು ವ್ಯವಸ್ಥೆಯ ಕರಾಳ ಬಂಧನದಿಂದ ಬಿಡಿಸಿಕೊಳ್ಳಲಾರದ ಸ್ಥಿತಿ'' ಬೆಳ್ಳಿಯದು. ಕಾದಂಬರಿಯ ಆರಂಭದಿಂದ – ಅಂತ್ಯದವರೆಗೂ ಒಂದು ರೀತಿಯಲ್ಲಿ ಬಡತನ ದಾರಿದ್ರ್ಯ, ನೋವು, ಸಂಕಟ, ಶೋಷಣೆಗೆ ಬೆಳ್ಳಿ ಒಳಗಾಗುತ್ತಾಳೆ. ಇದೆಲ್ಲಕ್ಕಿಂತ ಮಿಗಿಲಾಗಿ ತನ್ನ ತಂದೆಯ ಸಾವಿಗೆ ಕಾರಣಳಾಗುತ್ತಾಳೆ. ಹೀಗೆ ಕಾರಂತರು ಬೆಳ್ಳಿಯ ಪಾತ್ರವನ್ನು ಅಸಹಾಯಕ ರೀತಿಯಲ್ಲಿ ಚಿತ್ರಿಸಿದ್ದಾರೆ.

ಈ ಕೃತಿಯಲ್ಲಿ ಮಾನವೀಯ ಅಂಶವನ್ನು ಸಹ ಕಾಣಬಹುದು. ಆದರೆ ಇದು ಸಹ ಮೂಲೆಗುಂಪಾಗಿ ದಲಿತರ ಶೋಷಣೆಯೇ ಪ್ರಧಾನವಾಗಿದೆ. ಕೃತಿಯಲ್ಲಿ ಚೋಮನಿಗೆ ಧಣಿ ಗೇಣಿಗೆ ಭೂಮಿಯನ್ನು ಕೊಡದಿದ್ದನ್ನು ಕೇಳಿ ಕಣ್ಣಲ್ಲಿ ನೀರು ಬಂದದ್ದನ್ನು ಕಂಡು ಸಂಕಪ್ಪಯ್ಯನವರಿಗೆ ಮನುಷ್ಯನಾಗಿ ಮಾನವೀಯತೆ ಎಂಬುದು ಬಂದರೂ ಜಾತಿ ಮೇಲು-ಕೀಳು ಎಂಬ ತಾರತಮ್ಯಗಳು ಮಾನವೀಯತೆಯನ್ನು ಮರೆಸಿಬಿಡುತ್ತವೆ.

ಹೀಗೆ ಕಾದಂಬರಿಯುದ್ದಕ್ಕೂ ಬರಿ ಪ್ರತಿಭಟನೆ, ಶೋಷಣೆ, ಅಸಹಾಯಕತೆ ನೋವು, ಸಂಕಟ ಇವುಗಳೊಳಗೆ ಸಿಕ್ಕಿ ಹೊರಬರಲಾಗದ ವ್ಯಕ್ತಿಯ ಚಿತ್ರಣವನ್ನು ಕಾರಂತರು ಚೆನ್ನಾಗಿ ಚಿತ್ರಿಸಿದ್ದಾರೆ.

ದೇವನೂರು ಮಹಾದೇವರು ಕುಸುಮಬಾಲೆ ಕಾದಂಬರಿಯ 'ಚೋಮನ ದುಡಿ'ಯಂತೆ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ಕಥೆಯಲ್ಲ ಇದು ಇಡೀ ದಲಿತ ಸಮುದಾಯಕ್ಕೆ ಸೇರಿದ ಕೃತಿಯಾಗಿದೆ. ಈ ಕಾದಂಬರಿಯಲ್ಲಿ ಬಹುಮಟ್ಟಿಗೆ ಹೊರಗಿನವರಾದ ವಿದ್ಯಾವಂತರು ತರುತ್ತಿರುವ ಹೊಸಭಾವನೆಗಳನ್ನು ಇಲ್ಲಿ ಗ್ರಾಮೀಣ ದಲಿತರು ಹೇಗೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ಗಮನಿಸಬೇಕು. ಈ ಪ್ರಪಂಚಕ್ಕೆ ಮೇಷ್ಟ್ರು ನಾಗರಾಜು 'ದಲಿತ ಸಂಘ'ವನ್ನು ತಂದಿದ್ದಾರೆ.

ದಲಿತ ಪಾತ್ರಗಳು ಈ ಕಾದಂಬರಿಯಲ್ಲಿ ಎಷ್ಟು ಬಲಿಷ್ಠವಾಗಿವೆ ಎಂದರೆ ಶೋಷಣೆ ಮಾಡುವವರು ಶೋಷಿತರನ್ನು ಕಟ್ಟಿಹಾಕಿ ಹೊಡೆಯಬೇಕಿದೆ. ಆದರೂ ಹೊಡೆದು

ಸವರ್ಣೀಯರ ಕೈ ಸೋಲುತ್ತದೆಯೇ ಹೊರತು ಶಿಕ್ಷೆಗೆ ಒಳಗಾಗುವವರು ಕಂಗೆಡುವುದಿಲ್ಲ ಎಂಬುದಕ್ಕೆ ಗಾರಸಿದ್ದಾವನ ಪಾತ್ರವನ್ನು ಕಾಣಬಹುದು.

ಇಲ್ಲಿ ದಲಿತರ ಅಸಮಾನತೆಯನ್ನು ತೊಡೆದು ಹಾಕಲು ಸಾಮಾಜಿಕ ವ್ಯವಸ್ಥೆಯನ್ನು ಮೀರಿ ನಿಲ್ಲುವ ಪಾತ್ರಗಳನ್ನು ಕಾಣುತ್ತೇವೆ. ಇಲ್ಲಿ ಬಹುಪಾಲು ದಲಿತ ಪಾತ್ರಗಳು ಮೇಲುವರ್ಗದ ಸ್ತ್ರೀಯರೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿರುವ ಚಿತ್ರಣವನ್ನು ಕಾಣುತ್ತೇವೆ. ಕುಸುಮ ಮೇಲುಜಾತಿಯವಳು, ಚೆನ್ನನು ಕೆಳಜಾತಿಯವನು, ಅಕ್ಕಮಹಾದೇವಮ್ಮ ಮೇಲುಜಾತಿಯವಳು ಅವಳು ಜೀತಗಾರನೊಂದಿಗೆ ಸಂಬಂಧ ಹೊಂದುವಳು. ಇಲ್ಲಿ ಮುಖ್ಯವಾಗಿ ದಲಿತರು ತಮ್ಮ ಮೇಲಾಗುತ್ತಿದ್ದ ಅತ್ಯಾಚಾರದ ಪ್ರತಿಕಾರವನ್ನು ತೀರಿಸಿಕೊಳ್ಳುವ ಸಲುವಾಗಿ ತಾವು ಸಹ ಮೇಲುಜಾತಿಯ ಹೆಣ್ಣುಮಕ್ಕಳನ್ನು ಅತ್ಯಾಚಾರ ಮಾಡುವುದು ಒಂದು ನೆಲೆಯಾದರೆ ಮತ್ತೊಂದು ಸಹಜವಾಗಿಯೇ ಆಕರ್ಷಣೆಗೆ ಒಳಗಾಗಿ ಈ ಸಂಬಂಧಗಳು ಏರ್ಪಡುತ್ತಿದ್ದವು.

ಈ ಕಾದಂಬರಿಯ ನಿರೂಪಣೆ ವೈವಿಧ್ಯದಿಂದ ಕೂಡಿದೆ. 'ಕುಸುಮಬಾಲೆ' ಪುರಾಣದ ಸ್ವರೂಪ, ಆಶಯ ಶೈಲಿಗಳಿಗೆ ಹತ್ತಿರವಾಗಿದೆ ಎನಿಸುತ್ತದೆ. ಇದೊಂದು ಬಗೆಯ ಜನಪದ ಪುರಾಣ ಇಲ್ಲಿ ಒಂದು ಬಗೆಯ ನಿರೂಪಣೆಯಿದೆ. ಮತ್ತೊಂದು ಬಗೆಯ ನಿರೂಪಣೆಗೆ ಸಲೀಸಾಗಿ ಚಲನೆಯಿದೆ. ಇಲ್ಲಿ ವ್ಯಕ್ತವಾಗುವಂತೆ ದಲಿತರ ಬದುಕಿಗೆ ಒಂದು ಪರಂಪರೆಯಿದೆ. ಅದರಿಂದ ದೊರೆತ ಸ್ಥಳೀಯ ತಿಳುವಳಿಕೆ ಇದೆ. ಬದುಕುವ ಛಲ. ಜೀವನದ ಪ್ರೀತಿ ಇದೆ. ಇಲ್ಲಿ ದಲಿತರಿಗೆ ಬದುಕುವ ಉಪಾಯಗಳೂ ಗೊತ್ತಿವೆ. ಭವಿಷ್ಯದ ಬಗ್ಗೆ ಸುಮದುರ ಕನಸುಗಳು ಇವೆ. ದಲಿತ ಸ್ಥಿತಿಯ ಅವಮಾನವನ್ನು ತೊಡೆದು ಹಾಕಬೇಕು ಎನ್ನುವ ಅಪೇಕ್ಷೆಯೂ ಇದೆ. ದಲಿತ ವಿಮೋಚನೆಯ ರಾಜಕೀಯ ಅಭೀಪ್ಸೆಗಳೂ ಇವೆ. ಒಂದು ಜನಾಂಗದ ಚೈತನ್ಯ ಹತ್ತು ಹಲವು ಬಗೆಯಲ್ಲಿ ಹರಡಿ ಹೋಗಿದೆ. ಇವೆಲ್ಲವನ್ನು ಒಂದು ಪ್ರಧಾನ ಉದ್ದೇಶಕ್ಕೆ ಜೀವನ ಕೇಂದ್ರಕ್ಕೆ ರಾಜಕೀಯ ಕ್ರಿಯೆಗೆ ದುಡಿಸಿಕೊಳ್ಳುವುದು ಹೇಗೆ ಎಂಬುದೇ ದಲಿತ ಬುದ್ಧಿಜೀವಿಗಳ ಮುಂದೆ ಇರುವ ಸೂಕ್ಷ್ಮವಾದ ಸಮಸ್ಯೆಯಾಗಿದೆ.

ಈ ಕಾದಂಬರಿಯಲ್ಲಿ ಬಹಳಷ್ಟು ದಲಿತ ಪಾತ್ರಗಳು ಮತ್ತು ಸಂಘರ್ಷ ಸಮಿತಿಯ ಕಾರ್ಯಕರ್ತರು ಭಾವನಾತ್ಮಕ ನೆಲೆಯಲ್ಲಿ ಒಂದಾಗಿದ್ದಾರೆ. ಆದರೆ ಅವರ ಮಾನಸಿಕ ಮತ್ತು ವೈಚಾರಿಕ ಜಗತ್ತುಗಳಲ್ಲಿ ಅಂತರವಿದೆ. ಆದ್ದರಿಂದಲೇ ದಲಿತರ ಮೆರವಣಿಗೆಯಲ್ಲಿ ಒಂದು ಬಗೆಯ ಬದ್ಧತೆ, ಆವೇಶ, ತಮಾಷೆ, ಸಂತೋಷ, ದಿಗ್ಭ್ರಾಂತಿ, ಹುಡುಗಾಟ, ನಿಷ್ಠೂರತೆ, ಅನುಮಾನ ಎಲ್ಲಾ ಒಟ್ಟಿಗೆ ಕಾಣಿಸಿಕೊಳ್ಳುತ್ತವೆ. ಬದಲಾವಣೆಗಳ ಹಿಂದಿನ ಸ್ವರೂಪವೇ ಅದಾಗಿದೆ.

ದಲಿತರು ಆರ್ಥಿಕವಾಗಿ ಎಷ್ಟು ಹಿಂದುಳಿದಿದ್ದಾರೆ. ಅವರು ಒಳ್ಳೆಯ ಉದ್ಯೋಗದಿಂದ ವಂಚಿತರಾಗಿದ್ದಾರೆ. ಮೇಲುಜಾತಿಯವರ ಮನೆಯಲ್ಲಿ ಜೀತಗಾರರಾಗಿ ಕೆಲಸಮಾಡುವ ಶೋಚನೀಯ ಸ್ಥಿತಿಯನ್ನು ಈ ಕಾದಂಬರಿಯಲ್ಲಿ ನೋಡಬಹುದು. ಅಲ್ಲದೆ ಇವರಿಗೆ ಸರಿಯಾದ ಕೆಲಸ ಸಿಗುತ್ತಿರಲಿಲ್ಲ. ಇಲ್ಲವೆ ಮಾಢಿದ ಕೆಲಸಕ್ಕೆ ಸರಿಯಾದ ಬೆಲೆಯೂ ದೊರೆಯುತ್ತಿರಲಿಲ್ಲ. ಅಂತಹ ದರಿದ್ರ ಪರಿಸ್ಥಿತಿಯು ದಲಿತರನ್ನು ಅನಿವಾರ್ಯವಾಗಿ, ಪರಿಸ್ಥಿತಿಯ ಒತ್ತಡಗಳಿಂದಾಗಿ ಕಳ್ಳರನ್ನಾಗಿಯೂ ಇಲ್ಲವೆ ರೌಡಿಗಳನ್ನಾಗಿಯೇ ಮಾಡಿದೆ. ಕಾದಂಬರಿಯಲ್ಲಿ ಗಾರಸಿದ್ದಾವ ಈ ಕಾರಣದಿಂದಲೇ ಹದಿನಾರು ಎಳನೀರನ್ನು ಕದಿಯುವುದು, ಹೊಟ್ಟೆ ಹಸಿವಿನಿಂದಾಗಿ ಬಳಲಿ ಕೊನೆಗೆ ಕಳ್ಳತನ ಮಾಡುತ್ತಾನೆ.

ಈ ಕಾದಂಬರಿಯ ರಚನಾ ಸ್ವರೂಪ ವಿಶಿಷ್ಟವಾದದ್ದು. ಇದು ನಿರ್ದಿಷ್ಟಕಾಲದಲ್ಲಿ ಕತೆಯನ್ನು ಹೇಳದೆ ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲದಲ್ಲಿ ಹೇಳತೊಡಗಿರುವುದು ಕಂಡುಬರುತ್ತದೆ. ಹೊಲೆಯರ ಕೇರಿಯಲ್ಲಿ ಜರುಗುವ ಕಾರ್ಯಾಚರಣೆಗಳಲ್ಲಿ ವರ್ತಮಾನಕ್ಕೂ, ಅಕ್ಕಮಹಾದೇವಮ್ಮ ಮತ್ತು ಯಾಡರ ವಿವರಗಳು ಭೂತಕಾಲಕ್ಕೂ, ಪರ್ಸಾದ (ಕುಸುಮಳ ತಮ್ಮ) ಮತ್ತು ಈರಿಯ ಮಗು ಕೆಂಚಿಯ ಗರ್ಭದಲ್ಲಿರುವ ಶಿಶು ಇವು ಭವಿಷ್ಯತ್ಕಾಲಕ್ಕೂ ಸಂಬಂಧಿಸಿದ್ದಾಗಿದೆ. ಜೀವಾತ್ಮಕ್ಕೂ, ಮುಂದಕ್ಕೂ ನಡೆಯುತ್ತಿದ್ದ ಸಂಭಾಷಣೆ, ಜೋತಮ್ಮಗಳ ನಡುವೆ ನಡೆಯುತ್ತಿದ್ದ ಚರ್ಚೆ, ಜನನ-ಮರಣಗಳಿಗೆ ಸಂಬಂಧಿಸಿದ ಜಾನಪದಗಳು ಇತ್ಯಾದಿಗಳೆಲ್ಲ ಮತ್ತೊಂದು ಹಂತವನ್ನು ತಲುಪುವಂತವು. ಅಲ್ಲಲ್ಲಿ ಕಲಸುಮೇಲೋಗರವಾಗಿರುವ, ಎಲ್ಲೆಲ್ಲೂ ಹರಡಿಕೊಂಡಿರುವ ವಿವರಗಳನ್ನು ತುಂಬ ಎಚ್ಚರಿಕೆಯಿಂದ ಗಂಭೀರವಾಗಿ ಗಮನಿಸುತ್ತ ಕ್ರೋಢೀಕರಿಸುತ್ತ ಹೋದರೆ ಕಾದಂಬರಿಯ ಆರಂಭದಲ್ಲಿ ಲೇಖಕರು ಸಂಗ್ರಹಿಸಿಕೊಂಡಿರುವ ಕಥೆಯನ್ನು ಅದರ ವಸ್ತುವನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆ ಇದೆ.

ಕಾದಂಬರಿಯಲ್ಲಿ ಏನೂ ಅರಿಯದ ಪರ್ಸಾದನಂತವರು ಪಡುವ ಸಂತೋಷ, ಕುಸುಮ-ಈರಿಯಂತವರು ಅನುಭವಿಸುವ ಯಾತನೆ, ತಮ್ಮ ಮಿತಿಯಲ್ಲಿಯೇ ಗಾರಸಿದ್ದಾವ, ಯಾಡ, ಅಮಾಸ ಮೊದಲಾದವರು ಪಡುವ ಶ್ರಮ, ಸಂದಿಗ್ಧತೆಯ ಸಂದರ್ಭಗಳು ಬಂದೊದಗಿದರೂ ತನ್ನ ಜೀವನದಲ್ಲಿ ಸುಖ ಸಂತೋಷಗಳಿಗೆ ಧಕ್ಕೆಯುಂಟು ಮಾಡಿಕೊಳ್ಳಲಾರದ ಇತ್ಯಾದಿಗಳೆಲ್ಲ ಸಂವೇದನಾಶೀಲ ಚೌಕಟ್ಟಿನೊಳಗೆ ನಡೆಯುತ್ತದೆ. ಹೀಗಾಗಿ ಇಲ್ಲಿಯ ಬದುಕಿನಲ್ಲಿ ವೈಶಿಷ್ಟ್ಯತೆ ಇದೆ. ಇದಕ್ಕೆ ಪ್ರೇರಕವಾಗಿರುವ ಪರಿಸರದ ಸಾಂಸ್ಕೃತಿಕ ವಿವರಗಳನ್ನು ಕೇವಲ ಚರ್ಚೆಗೆ, ಪರಿಶೀಲನೆಯ ಹಂತಕ್ಕೆ ಸೀಮಿತಗೊಳಿಸದೆ ಮೌಖಿಕ ಅಂಶಗಳನ್ನೆಲ್ಲಾ ಒಟ್ಟಾರೆಯಾಗಿ ಸಂಗ್ರಹಿಸಿ ಸುಂದರ ಕಥಾನಕ ಚೌಕಟ್ಟಿನಲ್ಲಿ

ಅಳವಡಿಸುವ ಕುಶಲಗಾರಿಕೆಯನ್ನು ಈ ಕಾದಂಬರಿಕಾರರು ಪ್ರದರ್ಶಿಸುವುದು ಕಂಡುಬರುತ್ತದೆ.

ಮೇಲಿನ ಈ ಎರಡು ಕಾದಂಬರಿಗಳನ್ನು ಗಮನಿಸಿದಾಗ 'ಚೋಮನದುಡಿ'ಯಲ್ಲಿ ಮುಖ್ಯವಾಗಿ ಬ್ರಾಹ್ಮಣನಾಗಿ ಹುಟ್ಟಿ ಬಂದಿದ್ದರಿಂದಲೇ ಕಾರಂತರು ಚೋಮನನ್ನು ಕ್ರಾಂತಿಕಾರಿಯನ್ನಾಗಲೂ ಬಿಡಲಿಲ್ಲ ಎಂಬ ನಿಲುವು ತುಂಬಾ ಅಪಾಯಕಾರಿಯಾದುದಾಗಿದೆ ಎನ್ನಬಹುದು. ಈ ನಿಲುವು ಮುಂದುವರೆದರೆ ದಲಿತನಾಗಿ ಹುಟ್ಟಿದ ವ್ಯಕ್ತಿ ದೂರ್ತತನದಲ್ಲೇ ಕೊಳೆತು ಹೋಗುತ್ತಾನೆ ಎಂಬ ಆಧುನಿಕ ಮೂಢನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ಅಂತಹ ನಂಬಿಕೆಗಳು ಸಮಾಜವಾದದ ಸಮಾಧಿಯನ್ನು ಮಾತ್ರ ಕಟ್ಟಬಲ್ಲವು ಅಷ್ಟೇ. ಲೋಕದ ಅರಿವನ್ನು ವಿಸ್ತರಿಸಲು ಹೊರಡುವವರಿಗೆ ಮೊದಲು ತಮ್ಮ ಆತ್ಮದ ಎಚ್ಚರವಿರಬೇಕು.

ದೇವನೂರು ಮಹಾದೇವರವರು ಒಬ್ಬ ದಲಿತ ಕವಿಯಾಗಿ, ದಲಿತ ಕುಟುಂಬದಿಂದ ಬಂದಿದ್ದರಿಂದಲೇ ದಲಿತರ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುವಲ್ಲಿ ಯಶಸ್ವಿ ಬರಹಗಾರರಾಗಿದ್ದಾರೆ ಎಂದು ಹೇಳಬಹುದು.

ಅಧ್ಯಾಯ ೬

ಚೋಮನದುಡಿ – ಕುಸುಮಬಾಲೆ

'ಭಾಷಾಭಿವ್ಯಕ್ತಿ' ಮತ್ತು 'ಕಲಾತ್ಮಕತೆ'

ದೇವನೂರರ ಕೃತಿಗಳನ್ನು ಓದುತ್ತ ಸಾಗಿದರೆ ಅಲ್ಲಿನದು ಕೇವಲ ಸಾಂಪ್ರದಾಯಿಕ ಶೈಲಿಯ ಗದ್ಯ ಬರವಣಿಗೆ ಅನಿಸುವುದಿಲ್ಲ. ಬದಲಿಗೆ ಕಾವ್ಯವನ್ನು ಓದಿದ ಅನುಭವ ಆಗುತ್ತದೆ. ಪ್ರತಿಮೆ, ಸಂಕೇತ, ರೂಪಕ, ಗಾದೆ ನುಡಿಗಟ್ಟುಗಳಿಂದ ತುಂಬಿ ಹೋಗಿರುವ ಇಲ್ಲಿನ ಬರವಣಿಗೆ ತನ್ನ ತಾಜಾತನದಿಂದ ಭಿನ್ನವಾಗಿ, ವಿಶಿಷ್ಟವಾಗಿ, ಸ್ವೋಪಜ್ಞವಾಗಿ ನಿಲ್ಲುತ್ತದೆ. ಭಾಷೆ ಇಲ್ಲಿ ಕೇವಲ ಸಂವಹನ ಮಾಧ್ಯಮವಾಗಿ ಬಳಕೆಯಾಗದೆ ದಲಿತಲೋಕದ ವಿಶಿಷ್ಟ ಅನುಭವವನ್ನು ಕಾವ್ಯದ ಬೆಡಗಿನಲ್ಲಿ ಮೂರ್ತರೂಪಗೊಳಿಸುವಲ್ಲಿ ಆ ದಲಿತ ಆತ್ಮದ ದನಿಯಾಗಿ ಬಳಕೆಯಾಗಿದೆ. ನಂಜನಗೂಡು ಪರಿಸರದ ಆಡುನುಡಿಯನ್ನು ಅದರೆಲ್ಲ ಬನಿ, ಸೊಗಡನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡಿರುವ ಮಹಾದೇವ ಅವರು ಭಾಷೆಯ ಮೂಲಕವಾಗಿಯೇ ಬದುಕನ್ನು ತೆರೆದುತೋರುವ ನವೀನ ಜೀವಂತ ಶ್ರಮದಿಂದಾಗಿ ವಿಶಿಷ್ಟವಾಗಿ ನಿಲ್ಲುತ್ತಾರೆ. ಸ್ವೋಪಜ್ಞ ಭಾಷೆಯ ಮೂಲಕವೇ ಸ್ವೋಪಜ್ಞೆ ಬದುಕನ್ನು ಕಟ್ಟಿಕೊಡುವ ಮಹಾದೇವ ಅವರ ಕ್ರಮ ಭಾಷೆಯಲ್ಲಿ ಬದುಕನ್ನು ಕಾಣಿಸುವ ಭಾಷೆಯ ಮೂಲಕ ಬದುಕನ್ನು ಸಾಕ್ಷಾತ್ಕರಿಸುವ ಜೀವಂತ ಮಾದರಿಯಾಗಿದೆ. ಈ ರೀತಿಯ ಗದ್ಯ ಬರವಣಿಗೆ ಕನ್ನಡ ಸಾಹಿತ್ಯದಲ್ಲಿ ಅಪರೂಪವಾಗಿದ್ದು ಇಂಥ ಗದ್ಯ ಮಾದರಿಗಳು ಇಲ್ಲವೆಂದೇ ಹೇಳಬೇಕು.

ಮಹಾದೇವ ಅವರು ಕುಸುಮಬಾಲೆಗೆ ಬಳಸಿರುವ ನಂಜನಗೂಡು – ಚಾಮರಾಜನಗರ ಕಡೆಯ ಪ್ರಾದೇಶಿಕ ಭಾಷೆಯಿಂದಾಗಿ ಸಂವಹನದ ಸಮಸ್ಯೆ ಉಂಟಾಗಿದೆಯೆಂಬ ಅಭಿಪ್ರಾಯವನ್ನು ಹಲವರು ವ್ಯಕ್ತಪಡಿಸಿದ್ದಾರೆ. ಈ ಕಾರಣಕ್ಕಾಗಿಯೇ ಕೃತಿ ಓದಿಸಿಕೊಂಡು ಹೋಗುವುದಿಲ್ಲ; ಅರ್ಥವಾಗುವುದಿಲ್ಲವೆಂಬ ಅನಿಸಿಕೆಯನ್ನು ಕೆಲವರು ಹೊಂದಿದವರಾಗಿದ್ದಾರೆ. ಆದರೆ ದ್ಯಾವನೂರು ಮತ್ತು ಒಡಲಾಳ ಕೃತಿಗಳನ್ನು ಓದಿ ಅರ್ಥೈಸಿಕೊಂಡ ಮನಸ್ಸಿಗೆ ಕುಸುಮಬಾಲೆಯ ಭಾಷೆ ಅಂಥ ಸಮಸ್ಯೆಯಾಗಿ ಕಾಡುವುದಿಲ್ಲವೆಂಬುದು ಅರಿವಿಗೆ ಬರುತ್ತದೆ. ಈ ಕೃತಿಯ ಭಾಷಾ ಜಾಡನ್ನು ಹಿಡಿದು ನಿಧಾನವಾಗಿ ಓದುತ್ತ ಸಾಗಿದರೆ ಅದು ತನ್ನ ಅರ್ಥವನ್ನು ಬಿಟ್ಟುಕೊಡುತ್ತ ಸಾಗುತ್ತದೆ. ಒಂದನೆಯ ಓದಿಗೆ ಅದು ಪೂರ್ಣವಾಗಿ ಅರ್ಥವಾಗದಿದ್ದರೂ ಎರಡನೆಯ ಓದಿಗಂತೂ ಖಂಡಿತ ಅರ್ಥವಾಗುತ್ತದೆ.

ಪ್ರಾದೇಶಿಕ ಭಾಷೆಯನ್ನು ಬಳಸಿಕೊಂಡು ರಚಿತವಾದ ಕಾದಂಬರಿಗಳು ಕನ್ನಡದಲ್ಲಿವೆ. ಆದರೆ ಕುಸುಮಬಾಲೆಯಂತೆ ಭಾಷೆಯ ಮೂಲಕ ಒಂದು ಜನಾಂಗದ ವಿಧಿ, ಆಚರಣೆ,

ಸಂಪ್ರದಾಯ, ಸ್ಮೃತಿ, ಸಂಸ್ಕೃತಿಯ ಸತ್ವ, ಸೊಗಡನ್ನು ಅತ್ಯಂತ ಜೀವಂತವಾಗಿ ಪರಿಣಾಮಕಾರಿಯಾಗಿ ಹಿಡಿದಿಟ್ಟ ಕೃತಿಗಳು ಅತಿ ವಿರಳವೆಂದೇ ಹೇಳಬೇಕು.

ಆ ಕಾರಣಕ್ಕಾಗಿಯೇ ಈ ಕೃತಿ ತುಂಬ ವಿಶಿಷ್ಟವಾಗಿ ನಿಲ್ಲುವ ಶಕ್ತಿಯನ್ನು ಹೊಂದಿದೆ ಎಂದು ಹೇಳಬೇಕು. ದ್ಯಾವನೂರು ಮತ್ತು ಒಡಲಾಳದಂತೆಯೇ ಇಲ್ಲಿಯೂ ಭಾಷೆಯನ್ನು ಕಾವ್ಯದ ಧಾಟಿಯಲ್ಲಿ ಬಳಸಲಾಗಿದೆ. ಹಾಗಾಗಿ ಕುಸುಮಬಾಲೆಯನ್ನು ರೂಢಿಗತ ಗದ್ಯದ ಶೈಲಿಯಲ್ಲಿ ಓದಲು ಸಾಧ್ಯವಾಗುವುದಿಲ್ಲ. ಅದನ್ನು ಕಾವ್ಯದಂತೆಯೇ ಓದಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಅದನ್ನು ಗದ್ಯಕಾವ್ಯವೆಂದು ಕರೆಯಲಾಗಿದೆ. ಕುಸುಮಬಾಲೆಯ ಮುಖ್ಯಸಂಗತಿಗಳಲ್ಲಿ ಅದರ ಭಾಷಾ ವಿಶೇಷವೂ ಒಂದು ಅತಿಮುಖ್ಯ ಶಕ್ತಿಯಾಗಿ ಕೃತಿಯ ಮಹತ್ವವನ್ನು ಹೆಚ್ಚಿಸಿರುವುದು ಗಮನಾರ್ಹ ಸಂಗತಿಯಾಗಿದೆ. ರೂಢಿಗತವಾದ, ಯಜಮಾನ ಸಂಸ್ಕೃತಿಯ ಸಂಕೇತವಾದ ಶಿಷ್ಟಭಾಷಾಪರಂಪರೆಯನ್ನು ಬಿಟ್ಟು ಜಾನಪದ ಸೊಗಡಿನ, ದಲಿತ ಸಂಸ್ಕೃತಿಯ ಸಂಕೇತವಾದ ಹಲವು ವೈವಿಧ್ಯಗಳ ಪ್ರಾದೇಶಿಕ ಭಾಷೆಯನ್ನು ಬಳಸಿರುವುದು ಕ್ರಾಂತಿಕಾರಕ ಸಂಗತಿಯಾಗಿದ್ದು, ಆ ಮೂಲಕ ಯಜಮಾನ ಸಂಸ್ಕೃತಿಯ ಮೌಲ್ಯಗಳನ್ನು ತಿರಸ್ಕರಿಸಿ, ತಳಸಂಸ್ಕೃತಿಯ ಮೌಲ್ಯಗಳನ್ನು ಎತ್ತಿಹಿಡಿಯುವ ಹೊಸಕ್ರಮವಾಗಿದೆ ಎಂದು ಹೇಳಬೇಕು. ಈ ಸಂದರ್ಭದಲ್ಲಿ ಸಿ.ಎನ್.ರಾಮಚಂದ್ರನ್ ಅವರ ಅಭಿಪ್ರಾಯವನ್ನು ಗಮನಿಸುವುದು ಸೂಕ್ತವಾದುದಾಗಿದೆ. ಒಂದು ಭಾಷಾ ಪ್ರಭೇದವು ಒಂದು ಬಗೆಯ ಮೌಲ್ಯವ್ಯವಸ್ಥೆಯನ್ನು ಸಂಕೇತಿಸುತ್ತದೆ. ಆ ನೆಲೆಯಲ್ಲಿ ಅಧಿಕೃತ ಭಾಷೆಯನ್ನು ತಿರಸ್ಕರಿಸುವುದೆಂದರೆ ಅಧಿಕೃತ ಭಾಷೆ ಸಂಕೇತಿಸುವ ಯಜಮಾನ ವರ್ಗದ ಮೌಲ್ಯಗಳನ್ನು ಮತ್ತು ಸಾಮಾಜಿಕ, ನೈತಿಕ ನಿಲುವನ್ನು ತಿರಸ್ಕರಿಸುವುದಾಗುತ್ತದೆ. ದೇವನೂರರು ಕುಸುಮಬಾಲೆಯಲ್ಲಿ ಅಧಿಕೃತ, ಸಾಮಾನೀಕೃತ ಕನ್ನಡವನ್ನು ತಿರಸ್ಕರಿಸಿ ಜಾತೀಯ – ಸ್ಥಳೀಯ ಭಾಷಾ ಪ್ರಭೇದವನ್ನು ಬಳಸುವುದರ ಅರ್ಥ ಯಜಮಾನ ಸಂಸ್ಕೃತಿಯ/ವರ್ಗದ ಮೌಲ್ಯಗಳನ್ನು ತಿರಸ್ಕರಿಸಿ ದಲಿತ ಲೋಕದ ಮೌಲ್ಯಗಳನ್ನು ಪುರಸ್ಕರಿಸುವುದು ಆಗಿದೆ ಎಂದು ನುಡಿದಿರುವುದು ಮಹತ್ವದ ಸಂಗತಿಯಾಗಿದ್ದು, ದೇವನೂರರ ಭಾಷಾಪ್ರಯೋಗದ ಹಿಂದಿನ ಉದ್ದೇಶವನ್ನು ಸ್ಪಷ್ಟಗೊಳಿಸಿದೆ ಎಂದು ಹೇಳಬೇಕು.

ಇಲ್ಲಿನ ಭಾಷೆಯನ್ನು ಕುರಿತಂತೆ ಕುಸುಮಬಾಲೆಯ ಭಾಷೆ ಎಲ್ಲಿಯೂ ವಾಹಕ ಮಾತ್ರವಾಗಿಲ್ಲ, ಕಾವ್ಯದಲ್ಲಿಯಂತೆ ಈ ಕೃತಿಯಲ್ಲಿಯೂ ಭಾಷೆ ತನ್ನ ಲಯ, ಧ್ವನಿ, ಅರ್ಥ ಇವೆಲ್ಲವುಗಳು ಸೇರಿದ ತನ್ನ ಇಡೀ ಶರೀರದೊಂದಿಗೆ ಪ್ರಕಟವಾಗುತ್ತದೆ. ಹಾಡು, ಭಾವಗೀತೆ, ದಂತಕತೆ, ಜೋಕು ಇವುಗಳಲ್ಲಿ ಬಳಕೆಯಾಗುವ ಭಾಷಾಪ್ರಕಾರಗಳ ವೈವಿಧ್ಯತೆಯನ್ನು ಕೃತಿ ದುಡಿಸಿಕೊಳ್ಳುತ್ತದೆ ಎಂಬ ರಾಜೇಂದ್ರ ಚೆನ್ನಿ ಅವರ ಈ ಮಾತುಗಳು

ಕುಸುಮಬಾಲೆಯ ಭಾಷಾವೈಶಿಷ್ಟ್ಯ ಮತ್ತು ಮಹತ್ವವನ್ನು ಎತ್ತಿಹಿಡಿಯುತ್ತದೆ.[೧] ಹಾಗೆಯೇ ಭಾಷೆಯನ್ನು ಕುರಿತಾದ ಎಸ್.ಎಸ್.ರಘುನಾಥರ ಅಭಿಪ್ರಾಯವೂ ಮುಖ್ಯವಾಗಿದ್ದು ಅದನ್ನು ಇಲ್ಲಿ ಗಮನಿಸಬಹುದಾಗಿದೆ. "ಕುಸುಮಬಾಲೆ" ಒಂದು ಗದ್ಯಕಾವ್ಯ. ಗದ್ಯವನ್ನು ಕಾವ್ಯಮಯವಾಗಿ ಬಳಸಿರುವ ಕಾದಂಬರಿಗಳು ಕನ್ನಡಲ್ಲಿವೆ. ಆದರೆ ಮಹಾದೇವರು ಭಾಷೆಯನ್ನು ಇಲ್ಲಿ ಬಳಸಿರುವಂತೆ ಕನ್ನಡ ಕಾದಂಬರಿ ಸಂದರ್ಭದಲ್ಲಿ ಬಳಕೆಯಾಗಿರುವುದು ವಿರಳ. ಇಲ್ಲಿ ಬಳಕೆ-ಯಾಗಿರುವುದು ಚಾಮರಾಜನಗರ ಮತ್ತು ಅದರ ಸುತ್ತಮುತ್ತ ರೂಢಿಯಲ್ಲಿರುವ ಆಡುಭಾಷೆ (Dialect) ಹೊಸತನ ಒಂದು ಸಮುದಾಯದ ಸಂವೇದನೆಯನ್ನು ಹಂಸರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತದೆ.[೨] ಈ ಹೊಸ ಸಂವೇದನೆ ಕಾದಂಬರಿಯ ದನಿಯಲ್ಲೂ ಅಡಕವಾಗಿದೆ. ಕಾದಂಬರಿಯುದ್ದಕ್ಕೂ ಆಶ್ಚರ್ಯಕರ ರೀತಿಯಲ್ಲಿ ನಮ್ಮ ಗಮನಸೆಳೆಯುವುದೆಂದರೆ ಮಹಾದೇವ ಅವರ ವಾಕ್ಯರಚನೆ ಮತ್ತು ಪ್ಯಾರಾಗಳ ರಚನೆ. ಇವು ಕನ್ನಡ ಭಾಷೆಯಲ್ಲಿ ನಮಗೆ ಪರಿಚಯವಿರುವಂತೆ ಕೊನೆಯಾಗುವುದಿಲ್ಲ. ಅಥವಾ ನಾವು ನಿರೀಕ್ಷೆ ಮಾಡುವ ರೀತಿಯಲ್ಲಿ ವಾಕ್ಯಗಳು ಅರ್ಥಕ್ಕೆ ನಿಂತಿವೆ ಅನಿಸುತ್ತದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸತೆನಿಸಿರುವ ಭಾಷೆಯನ್ನು ಕಾದಂಬರಿಕಾರರು ಅತ್ಯಂತ ಸೃಜನಾತ್ಮಕವಾಗಿ ಬಳಸಿಕೊಂಡಿದ್ದಾರೆ.[೩] ಕುಸುಮಬಾಲೆಯಲ್ಲಿ ಮೂರು ಬಗೆಯ ಭಾಷಾಪ್ರಭೇದಗಳು ನಮಗೆ ಕಾಣುತ್ತೇವೆ. ಗ್ರಂಥಿಕ ಕನ್ನಡ, ಸ್ಥಳೀಯ ಜಾತೀಯ ಕನ್ನಡ ಮತ್ತು ಮೌಖಿಕ ಮಹಾಕಾವ್ಯ ಮಲೆಮಹದೇಶ್ವರ ಕನ್ನಡ ಎಂಬ ಮೂರುಬಗೆಯ ಭಾಷಾಪ್ರಭೇದಗಳು ನಮಗೆ ಕಾಣಸಿಗುತ್ತವೆ ಎಂದು ಸಿ.ಎನ್.ರಾಮಚಂದ್ರನ್ ಅವರು ಹೇಳಿರುವುದನ್ನು ಒಪ್ಪಿಕೊಳ್ಳಬಹುದಾಗಿದೆ.

ಈ ಮೂರು ಬಗೆಯ ಕನ್ನಡ ಭಾಷಾ ಪ್ರಭೇದಗಳಿಗೆ ಅವರು ವಿವರಣೆಯನ್ನು ನೀಡಿದ್ದಾರೆ. ಬಸಪ್ಪಸೋಮಿ, ಮದ್ವಾಚಾರ್ಯರಂಥ ಕೃತಕ ಬದುಕಿನ ವ್ಯಕ್ತಿಗಳ ಸಂದರ್ಭದಲ್ಲಿ ಮಾತ್ರ ಅವರ ವ್ಯಕ್ತಿತ್ವದ ವಿಡಂಬನೆಗಾಗಿ ಗ್ರಾಂಥಿಕ ಕನ್ನಡವನ್ನು ಆ ಪಾತ್ರಗಳ ಬಾಯಲ್ಲಿ ಲೇಖಕರು ಆಡಿಸುತ್ತಾರೆ. ಇಂಥ ಪಾತ್ರಗಳ ಬಾಯಲ್ಲಿ ಬರುವ ಈ ಬಗೆಯ ಕೃತಕವಾದ ಗ್ರಾಂಥಿಕ ಕನ್ನಡದ ಮೂಲಕವೇ ಮಾನವೀಯತೆ ಇಲ್ಲದ ಅವರ ವ್ಯಕ್ತಿತ್ವದ ಟೊಳ್ಳುತನವನ್ನು ಬಯಲಿಗೆಳೆಯುವ ತಂತ್ರಗಾರಿಕೆಯೂ ಇಲ್ಲಿ ಇದ್ದ ಹಾಗೆ ಇದೆ. ಈ ಹಿಂದೆ ಪಾತ್ರ ಪರಿಶೀಲನೆಯ ಸಂದರ್ಭದಲ್ಲಿಯೂ ಈ ಅಂಶವನ್ನು ನಾವು ನೋಡಿದ್ದೇವೆ.

ಸ್ಥಳೀಯ ಜಾತಿಯ ಕನ್ನಡ ಅಥವಾ ಪ್ರಾದೇಶಿಕ ಕನ್ನಡವನ್ನು ಆಡುವ ಹತ್ತಾರು ಪಾತ್ರಗಳ ದಂಡೇ ಈ ಕೃತಿಯಲ್ಲಿ ಬರುತ್ತದೆ. ಸ್ಥಳೀಯ ಭಾಷೆಯ ಮೂಲಕ ತಳ

---

೧. ಅಧ್ಯಯನ, ಪು. ೧೨೯

೨. ಸಂಕ್ರಮಣ, ಸಂಪುಟ -೨೬, ಸಂಚಿಕೆ-೩

೩. ಯಾರ ಜಪ್ತಿಗೂ ಸಿಗದ ನವಿಲುಗಳು - ಪುಟ. ೭೫.

ಮೂಲಸಂಸ್ಕೃತಿ ಜನರ ಬದುಕಿನ ವಿಧಿ, ವಿಧಾನ, ಆಚರಣೆ, ನಂಬುಗೆ, ಸಂಪ್ರದಾಯ, ಸಾಂಸ್ಕೃತಿಕ ಸತ್ವ – ಮುಂತಾದ ವೈಶಿಷ್ಟ್ಯವೆಲ್ಲವನ್ನೂ ಅತ್ಯಂತ ಸಹಜವಾಗಿ, ಮನೋಜ್ಞವಾಗಿ ದೇವನೂರರು ಕಟ್ಟಿಕೊಟ್ಟಿರುವುದು ಮಹತ್ವದ ಸಂಗತಿಯಾಗಿದೆ. ಹೀಗೆ ಭಾಷಾವೈಶಿಷ್ಟ್ಯದ ಮೂಲಕವೇ ತಳಮೂಲ ಸಂಸ್ಕೃತಿಯೊಂದರ ಬದುಕಿನ ವೈವಿಧ್ಯತೆಯನ್ನು ಅದರೆಲ್ಲ ನಂಬುಗೆ ಮತ್ತು ಆಚರಣಾತ್ಮಕ ನೆಲೆಯಲ್ಲಿ ತುಂಬ ಕಲಾತ್ಮಕವಾಗಿ ಕಟ್ಟಿಕೊಟ್ಟಿರುವುದು ಈ ಕೃತಿಯ ಹೆಗ್ಗಳಿಕೆಯಾಗಿದೆ ಎನ್ನಬೇಕು. ಇನ್ನೂ ಮೌಖಿಕ ಪರಂಪರೆಯ ಮಲೆಯ ಮಾದೇಶ್ವರ ಮಹಾಕಾವ್ಯದ ಜಾನಪದ ಸೊಗಡಿನ ಗೇಯಾತ್ಮಕ ಕನ್ನಡವನ್ನು ಲೇಖಕರು ಬಳಸಿರುವ ಪರಿಯನ್ನು ಕುರಿತು ಸಮಾಲೋಚಿಸಬಹುದು. ತೂರಮ್ಮ ಆಗ ತಾನೇ ಜನಿಸಿದ ತನ್ನ ಮೊಮ್ಮಗನನ್ನು ಬದುಕಿಸಿಕೊಳ್ಳಲು ಹಾತೆಹುಳದ ಮೇಲೆ ತನ್ನ ಎಡಗೈ ಹೆಬ್ಬೆರಳನ್ನು ಇಟ್ಟು ಬಲವಾಗಿ ಅದುಮಿ ಶರೀರದಿಂದ ಅದರ ಜೀವ ತೆಗೆದು:

‘ಈ ಜೀವ್ವೇ ಆ ಜೀವಕ ನಡೀ’ ಅಂತಂತ ಮೂರ್ಸಲ
ತನ್ನ ಸರೀಲವ ಒಂದು ಮನಸ್ಸು ಮಾಡಿ ಅದ
ಒಂದು ದುಡದಲ್ಲಿ ನಿಲ್ಸೀ ತನ್ನಕಪ್ಪು ಹಲ್ಲುಗಳ ಬಿಗಿಲಿ
‘ಈ ಜೀವ್ವೇ ಆ ಜೀವಕ ನಡೀ’ ಅಂತಂತ ಮೂರ್ಸಲ
ಅನ್ತ ಅದೇ ದುಡದಲ್ಲಿ ಬೆನ್ನ ಎತ್ತಿದವಳಾಗಿ
ಎದ್ದು ತೂರಮ್ಮ ದ್ಯಾವಿಗೆ
ಕಾಣ್ಕ ಕೊಟ್ಟು ....

ಎಂದು ಮುಂತಾಗಿ ಹಾತೆಹುಳದ ಜೀವ ತನ್ನ ಮೊಮ್ಮಗನ ಶರೀರವನ್ನು ಸೇರಿ ಅದು ಬದುಕಿಬಾಳಲೆಂದು ನಡೆಸುವ ಜೀವಪ್ರೀತಿಯ ಹೋರಾಟದ ರಿಚ್ಯುವಲ್ ಸಂದರ್ಭದಲ್ಲಿನ ಭಾಷಾಪ್ರಯೋಗ;

ಸಿದ್ದೂರನ ಅಮಾನವೀಯ ರಾಕ್ಷಸ ಹೊಡೆತದಿಂದ ಅರೆಜೀವವಾಗಿದ್ದ ಕೂಸು ಯಾಡನಿಗೆ ಅಕ್ಕ ಮಾದೇವಮ್ಮ ಪುನಃಶ್ಚೇತನಗೊಳಿಸುವಾಗ ಕೆರೆಯ ನೀರನ್ನು ಕುರಿತು:

ಯಾಡನ ತಲ್ವ ಭೂಮಿಮ್ಯಾಲ ಇಟ್ಟವಳಾಗಿ
ಎದ್ದು ಅಕ್ಕಮಾದೇವಮ್ಮ ನಡೆದವಳಾಗಿ ಬಂದಳು
ಆ ಕಣ್ಣೀರು ತುಂಬಿದ್ದ ಕೆರೆಯ ಕೆರೆಗೆ ಸರಣು
ಆ ಕೆರೆಗೆ ಮೂರು ಸಲ ಮಾಡಿದಳು, ಕಣ್ಣುಗ

ಆ ಕರೆಯ ನೀರ ಮೂರು ಸಲ ಒತ್ತಿಕೊಂಡಳು ಪ್ರಾತಿಸುತ್[೧]

ಎಂದು ಮುಂತಾಗಿ ಪ್ರಾರ್ಥಿಸುವ ಮತ್ತು ಆ ನೀರನ್ನು ತಂದು ಮಗನ ಜೀವ ಉಳಿಸಿಕೊಳ್ಳುವ ಮಾತೃಪ್ರೇಮದ ಸಂದರ್ಭದಲ್ಲಿನ ಭಾಷಾ ಬಳಕೆ;

ಈರಿಯ ಮಗು ಸತ್ತ ಸಂದರ್ಭದ ದುರಂತವನ್ನು ಪ್ರಕಟಪಡಿಸಲು;

ಆ ಬಂದವರು ಯಾರ ಹೋದವರು ಯಾರ

ಯಾರೊ ಬಂದರು ಯಾರೊ ಆ ಮಾಳ್ವಗೊರ್ಕಂಡರು

ಯಾರೊ ಆ ಮೂಳ್ಗ ತಾನ ಮಾಡಿ ಮಾಡಿಸಿದರು

ಯಾರೊ ಹೊತ್ಕಂಡರು ಹೆಗಲು ಬದುಲುಸ್ತ

ಯಾರಾರೊ ನಡುದುರು

ಯಾರೋ ಹೊತರು ಯಾರೋ ಹೂತು ಬಂದರು[೨]

ಎಂಬಂಥ ಭಾಷಾಪ್ರಯೋಗ ಮತ್ತು ಶೈಲಿ;

ಗಂಡನಿಂದ ತಿರಸ್ಕರಿಸಲ್ಪಟ್ಟು ಚಿಂತೆಯಲ್ಲಿದ್ದ ಕುಸುಮಾಳಿಗೆ ಚನ್ನ ಕೊಲೆಯಾದ ಸುದ್ದಿಯೂ ತಿಳಿದು ಇನ್ನೂ ಹತಾಶಗೊಂಡ ಅವಳ ದುರಂತ ಪ್ರೇಮದ ಮತಿಭ್ರಮಣದ ನೋವು ಅಸಹಾಯಕತೆಯ ಚಿಂತಾಜನಕ ಸ್ಥಿತಿಯನ್ನು ಚಿತ್ರಿಸುವಲ್ಲಿ:

ಆಗ ಕುಸುಮಾಳ ಕಣ್ಗಳ ಜಲವು ನಿಂತೀತಲ್ಲಾ

ಆಗ ಆ ಕೆನ್ನೇಲಿದ್ದ ಜಲವು ಆ ಕೆನ್ನೇಲಿ ಹಿಂಗಿತಲ್ಲಾ

ಆಗ ಅರಗಣ್ಣು ಮಾಡ್ದ ಕುಸುಮಾಳು ವಾಲಾಡಿಯೇ ವಾಲಾಡ್ತಾ

ಆಗ ಅವಳ ಮಾರುದ್ದ ಕೂದಾಲೂ ಅವ್ಳ ತಲಸುತ್ತಾ ವಾಲಾಡ್ತಾ[೩]

ಎಂಬಂಥ ಭಾಷಾಪ್ರಯೋಗ ಮತ್ತು ಉಪಸಂಹಾರ ಭಾಗದಲ್ಲಿನ ಭಾಷಾಬಳಕೆ ಮತ್ತು ಶೈಲಿಯನ್ನು ಗಮನಿಸಿದಾಗ ಇದು ಗೇಯಾತ್ಮಕ ನೆಲೆಯ ಮಲೆಯ ಮಾದೇಶ್ವರ ಕಾವ್ಯದ ಭಾಷಾದಾಟಿಯನ್ನು ಹೋಲುತ್ತದೆ ಎಂಬುದು ಅರಿವಿಗೆ ಬರುತ್ತದೆ. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಈ ಬಗೆಯ ಭಾಷಾಪ್ರಯೋಗವನ್ನು ಮಹಾದೇವ ಅವರು ಮಾಡಿರುವುದು ಕಂಡುಬರುತ್ತದೆ. ಮುಖ್ಯವಾಗಿ ಗಾಢಜೀವ ಪ್ರೀತಿ, ಮಾತೃತ್ವ, ಭಗ್ನಪ್ರೇಮ

---

೧. ಯಾರ ಜಪ್ತಿಗೂ ಸಿಗದ ನವಿಲುಗಳು – ಪುಟ. ೧೩೪

೨. ಅದೇ, ಪುಟ. ೧೩೫.

೩. ಅದೇ, ಪುಟ. ೪–೫.

ಮತ್ತು ಸಾವಿನಂಥ ಕೆಲವು ಸಂದರ್ಭಗಳಲ್ಲಿ ಮಾತ್ರ ಮಲೆಯ ಮಾದೇಶ್ವರ ಕಾವ್ಯದ ಗೇಯಾತ್ಮಕ ದಾಟಿಯ ಭಾಷಾಪ್ರಯೋಗ ಮಾಡಿ ಸಂದರ್ಭದ ಪರಿಣಾಮದ ತೀವ್ರತೆಯನ್ನು ಹೆಚ್ಚಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಮಲೆಯ ಮಾದೇಶ್ವರ ಕಾವ್ಯದ ಪ್ರಭಾವ ಭಾಷಿಕ ನೆಲೆಯಲ್ಲಿ ಮಾತ್ರ ಈ ಕೃತಿಯ ಮೇಲೆ ಆಗಿದೆ ಎಂದು ತಿಳಿದರೆ ಸಾಲದು. ಸಾಂಸ್ಕೃತಿಕ ನೆಲೆಯಲ್ಲೂ ಆ ಪ್ರಭಾವ ಗುಪ್ತವಾಗಿ ಹರಿದಿರುವುದು ಕೃತಿಯ ಉದ್ದಕ್ಕೂ ಜಿನುಗುವ ಸತ್ಯವಾಗಿದೆ. ಮಲೆಯ ಮಾದೇಶ್ವರ ತಳಮೂಲ ಸಂಸ್ಕೃತಿ, ಜನಾಂಗಗಳ ಸಾಂಸ್ಕೃತಿಕ ಹೋರಾಟದ ಸಂಕೇತ ಕೂಡಾ ಹೌದು. ತಳಮೂಲ ಸಂಸ್ಕೃತಿಯವರ ಛಲ, ಹೋರಾಟ, ಸತ್ವ, ಚೈತನ್ಯದ ಸಂಕೇತವಾದ ಮಾದೇಶ್ವರ ಆ ತಳಮೂಲ ಜನಾಂಗಗಳ ನಾಯಕನೂ ಹಾಡು. ಪ್ರಾಣಿ ಪಕ್ಷಿ, ಗಿಡ, ಮರ ನಿಸರ್ಗ ಸಂಪತ್ತನ್ನು ಅಪಾರವಾಗಿ ಪ್ರೀತಿಸುವ ಅಖಂಡ ಪರಿಸರ ಪ್ರೇಮಿಯೂ ಹೌದು.

ಈ ಕೃತಿಯ ಆರಂಭದಲ್ಲಿ ಹುಲಿಯ ಮೇಲೆ ಕುಳಿತ ಮಾದೇಶ್ವರನ ರೇಖಾಚಿತ್ರವಿರುವುದು, ಕೃತಿಯನ್ನು ಪೂರ್ವಿಕ ಮಾದಾರ ಮಲೆಮಾದೇಶ್ವರನಿಗೆ ಅರ್ಪಿಸಿರುವುದು ಹಾಗೂ ಕೃತಿಯ ಕೆಲವು ಸಂದರ್ಭಗಳಲ್ಲಿ ಮಾದೇಶ್ವರನ ಪ್ರಸ್ತಾಪ ಮತ್ತೆ ಮತ್ತೆ ಬರುವುದು ಇತ್ಯಾದಿ ಅಂಶಗಳಿಂದ ಇದು ಸ್ಪಷ್ಟವಾಗುತ್ತದೆ. ಮಾದೇಶ್ವರನನ್ನು ಪೂರ್ವಿಕನೆಂದೂ ಮಾದಾರ ಎಂದೂ ಕರೆದಿರುವಲ್ಲಿ ಆತ ತಳಮೂಲ ಸಂಸ್ಕೃತಿಯ ಮಾದಾರ ಜನಾಂಗದವನೆಂಬುದನ್ನು ಮತ್ತೆ ನಮ್ಮ ಸ್ಮರಣೆಗೆ ತರುವ ಯತ್ನವೆಂದು ತಿಳಿಯಬಹುದಾಗಿದೆ. ಹೀಗೆ ಸಾಂಸ್ಕೃತಿಕ ನೆಲೆಯಲ್ಲಿ ಲೇಖಕರು ಮಾದೇಶ್ವರನೊಡನೆ ಎಂದರೆ ಅವನ ಬದುಕಿನ ಹೋರಾಟ ಮತ್ತು ಅವನು ಪ್ರತಿನಿಧಿಸುವ ಮೌಲ್ಯಗಳೊಂದಿಗೆ ತಮ್ಮನ್ನು ಮತ್ತು ತಮ್ಮ ಜನಾಂಗವನ್ನು ಗುರುತಿಸಿಕೊಂಡಿರುವುದು ಇಲ್ಲಿ ಮುಖ್ಯಸಂಗತಿಯಾಗಿದೆ.

ಈ ರೀತಿಯ ಜಾನಪದ ಸೊಗಡಿನ ಕಾವ್ಯಾತ್ಮಕ ಧಾಟಿಯ ಭಾಷಾಪ್ರಯೋಗ ಶಿಷ್ಟ ಕಥನ ಸಾಹಿತ್ಯದ ಅತಿವಾಸ್ತವಿಕತೆಯ ಮಿತಿಯನ್ನು ಮೀರಿ ಸಹಜ ಗತಿಯಲ್ಲಿ ಬದುಕನ್ನು ಅರ್ಥೈಸಿಕೊಳ್ಳುವ ಬಗೆಯಾಗಿದೆ ಎಂದು ತಿಳಿಯಬಹುದಾಗಿದೆ. ಇದು ಮಹಾದೇವ ಅವರ ಕಥನ ಸಾಹಿತ್ಯದ ಉದ್ದೇಶವೂ ಆಗಿರುವಂತಿದೆ.

ಕುಸುಮಬಾಲೆಯ ನಿರೂಪಣಾಕ್ರಮ ರೂಢಿಗತದಂತೆ ನಿರ್ದಿಷ್ಟ ಕ್ರಮದಲ್ಲಿರದೆ ಮೇಲ್ನೋಟಕ್ಕೆ ಗೊಂದಲವನ್ನು ಉಂಟುಮಾಡುವ ರೀತಿಯಲ್ಲಿದೆ. ಅಕ್ಕಮಾದೇವಮ್ಮ, ಯಾಡ, ಸೋಮಪ್ಪ, ಕುಸುಮಾ ಮತ್ತು ಅವಳ ಮಗು – ಹೀಗೆ ಈ ಐದು ತಲೆಮಾರುಗಳ ಕಥೆಯು ನಿರ್ದಿಷ್ಟವಾದ ಭೂತ, ವರ್ತಮಾನದಲ್ಲಿ ಭೂತ – ಹೀಗೆ ಒಂದರೊಳಗೊಂದು ಬೆಸೆದುಕೊಳ್ಳುತ್ತ ಸಂಕೀರ್ಣ ನಡೆಯಲ್ಲಿ ಸಾಗುವುದನ್ನು

ನೋಡಬಹುದಾಗಿದೆ.[೧] ಕುಸುಮಬಾಲೆಯ ಭಾಷೆ ಮಾತ್ರವಲ್ಲ, ನಿರೂಪಣಾ ವಿಧಾನವೂ ವಿಶಿಷ್ಟವಾಗಿದೆ. ಒಂದು ನಿರ್ದಿಷ್ಟ ಕ್ರಮದಲ್ಲಿ ಒಂದು ಕಾಲಾನುಕ್ರಮಣಿಕೆಯಲ್ಲಿ ಬೆಳೆಯುವ ಕಥೆ ಇಲ್ಲಿಲ್ಲ. ಬಿಡಿ ಬಿಡಿ ಘಟನೆ, ದಂತಕಥೆ – ಪುರಾಣ ಹಾಗೂ ಕಥಾವಿವರಗಳು ಇಲ್ಲಿವೆ. ಅವು ಭೂತದಿಂದ ವರ್ತಮಾನಕ್ಕೆ ವರ್ತಮಾನದಿಂದ ಭೂತಕ್ಕೆ ಸಲೀಸಾಗಿ ಹೊರಳಿಕೊಳ್ಳುತ್ತ, ತುಯ್ಯುತ್ತ ಸಾಗುವ ಬಗೆಯೂ ವಿಶಿಷ್ಟವಾಗಿದೆ. ಅವುಗಳಿಂದಾಗಿ ಕೃತಿಯಲ್ಲಿ ಬಂದು ಸಂಕೀರ್ಣ ಅನುಭವ ಪ್ರಪಂಚ ಸೃಷ್ಟಿಯಾಗಿದೆ. ಆ ಅನುಭವ ಪ್ರಪಂಚ ಒಂದು ಸಂಸ್ಕೃತಿ ಸಂದರ್ಭವನ್ನು ವಿಶಿಷ್ಟ ಬಗೆಯ ಕಲಾತ್ಮಕ ತರ್ಕದಲ್ಲಿ ಹಿಡಿದುಕೊಡಲು ಪ್ರಯತ್ನಿಸುತ್ತಿರುವುದು ಅನುಭವಕ್ಕೆ ಬರುತ್ತದೆ. ಸೃಜನಶೀಲತೆಯ ಸ್ವೋಪಜ್ಞವಾದ ಜಾಡೊಂದನ್ನು ಹುಡುಕುವ ಪ್ರೇರಣೆ ಈ ಪ್ರಯತ್ನದ ಹಿಂದೆ ಇದೆ ಎಂದು ಆಡಿರುವ ಪ್ರೊ. ಜಿ.ಎಚ್.ನಾಯಕ ಅವರ ಮಾತುಗಳು ಕುಸುಮಬಾಲೆಯ ನಿರೂಪಣಾ ವಿಧಾನದ ಹೊಸತನ ಮತ್ತು ವೈಶಿಷ್ಟ್ಯವನ್ನು ಚೆನ್ನಾಗಿ ಬೆಳಕಿಗೆ ಹಿಡಿದಿವೆ ಎನ್ನಬೇಕು.

ಚೋಮನದುಡಿ : 'ಕಲಾತ್ಮಕತೆ'

ವಸಾಹತುಶಾಹಿ ಎಂಬುದು ಭಾರತಕ್ಕೆ ಬಂದದ್ದು ಬ್ರಿಟಿಷರು ಭಾರತವನ್ನು ವಸಾಹತು ಮಾಡಿಕೊಂಡಾಗ. ಹಾಗೆಯೇ ಯುರೋಪಿನ ಜನ ಅಮೇರಿಕೆಯಲ್ಲಿ ನೆಲೆಸಿ ಬಿಳಿಯರನ್ನು ಕಟ್ಟಿಕೊಂಡು, ರಾಜ್ಯವನ್ನು ಕಟ್ಟಿ ಅಲ್ಲಿನ ರೆಡ್ ಇಂಡಿಯನ್ನರನ್ನು ಬಲಿಹಾಕಿದಾಗ ಅಲ್ಲಿ ವಸಾಹತುಶಾಹಿ ಪ್ರಾರಂಭವಾಗುತ್ತದೆ. ಆದ್ದರಿಂದ ವಸಾಹತುಶಾಹಿ ಎಂಬುದು ಭಾಷೆ ಮತ್ತು ಧರ್ಮವನ್ನು ಪ್ರಸಾರ ಮಾಡುವ ಮೂಲಕ ನಮ್ಮನ್ನು ಶೋಷಣೆ ಮಾಡುವ ಪ್ರಯತ್ನ ಮಾಡಿತು. ಮತಾಂತರ ಎಂಬುದು ಇಲ್ಲಿನ ವಸಾಹತುಶಾಹಿಯಾದರೆ, ಸಂಕಪ್ಪಯ್ಯ ಜಮೀನ್ದಾರಿ ಮತ್ತು ಯಜಮಾನ್ಯ ಸಂಸ್ಕೃತಿಯ ಪ್ರತೀಕವಾಗಿ ಕಂಡುಬರುತ್ತಾನೆ. ಚೋಮ ಇಂತಹ ವ್ಯವಸ್ಥೆಯನ್ನು ದಾಟುವ ಪ್ರಯತ್ನ ಮಾಡುತ್ತಾನೆ. ಈ ಹಿನ್ನೆಲೆಯಲ್ಲಿ ಚೋಮನ ಕುಟುಂಬ ಒಂದುಕಡೆ ಯಜಮಾನ್ಯ ಸಂಸ್ಕೃತಿಗೆ ಮತ್ತೊಂದು ಕಡೆ ವಸಾಹತುಶಾಹಿಯ ಸಂಸ್ಕೃತಿಯ ಹಿಡಿತಕ್ಕೆ ಒಳಗಾಗಿರುವುದು ಕಂಡುಬರುತ್ತದೆ.

ಈ ಕಾದಂಬರಿಯಲ್ಲಿ ಚೋಮ ಸ್ಥಾಪಿತ ಮೌಲ್ಯ ಮತ್ತು ಜಾತಿಯ ಗಡಿಯನ್ನು ದಾಟಬೇಕೆನ್ನುವ ಕಾತರ ತೋರುತ್ತಾನೆ. ಜಾತಿ ಇರುವುದರಿಂದಲೇ ತನಗೆ ಈ ರೀತಿಯ ತೊಂದರೆಗಳು ಆಗುತ್ತವೆ ಎಂದು ತಿಳಿದು ಯಾವುದಾದರೊಂದು ಕಾರಣಕ್ಕಾಗಿ ಇವುಗಳನ್ನು ದಾಟಬೇಕು ಎಂದು ಹೋರಾಡುತ್ತಾನೆ. ಈ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ಒಂದು ಘರ್ಷಣೆಯ ಧ್ವನಿ ಕೆಲಸಮಾಡುತ್ತದೆ. ಆದರೆ ಅದು ಕಾಲದ ದೃಷ್ಟಿಯಿಂದ ಸಣ್ಣದಿರಬಹುದು. ಅಂದಿನ ಜಮೀನ್ದಾರಿ ವ್ಯವಸ್ಥೆ ಇಂದು ಬದಲಾವಣೆಯಾಗಿದೆ.

---

೧. ಯಾರ ಜಪ್ತಿಗೂ ಸಿಗದ ನವಿಲುಗಳು – ಪುಟ. ೭೭

[illegible]

[illegible]

[illegible]

ಕೇರಳದಲ್ಲಿ ಒಬ್ಬ ಮಹಿಳೆ ಹಾಗೆ ಮಾಡಿದಳು ಎಂದು ಹೇಳುತ್ತಿದ್ದಾಳೆ. ಆದರೆ ಕರ್ನಾಟಕದಲ್ಲಿ ಈ ರೀತಿಯ ಸಮಸ್ಯೆ ಬರುವುದಿಲ್ಲ. ದೇವರಾಜ ಅರಸು ಅವರು "ಉಳುವವನೇ ಭೂಮಿಯ ಒಡೆಯ" ಎಂಬ ನಿಯಮವನ್ನು ಜಾರಿಗೆ ತಂದು ಸಮಾಜದಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದಾರೆ. ಆದರೆ ಕರ್ನಾಟಕಕ್ಕಿಂತ ಬೇರಾದ ಮತ್ತು ಉತ್ತರ ಪ್ರದೇಶಗಳಲ್ಲಿ ಈ ಭೂಮಿಯ ಸಮಸ್ಯೆ ತುಂಬಾ ಘೋರವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ದೇವರಾಜ ಅರಸು ಅವರು ತೆಗೆದುಕೊಂಡ ನಿಲುವು ಸ್ವಾಗತಾರ್ಹವಾದದ್ದು ಮತ್ತು ಬೇರೆ ರಾಜ್ಯಕ್ಕೆ ಮಾದರಿಯಾದದ್ದು. ಈ ಹಿನ್ನೆಲೆಯಲ್ಲಿ ಚೋಮ ಜಾತಿಯನ್ನು ಒಡೆದು ಹೊರಬರಲು ಇಚ್ಛಿಸುತ್ತಾನೆ. ಜಾತಿಯನ್ನು ಒಡೆಯಲು ಇರುವ ಮುಖ್ಯದಾರಿ ಎಂದರೆ ವ್ಯಕ್ತಿಯನ್ನು ಬದಲಾವಣೆ ಮಾಡುವುದು. ಹನ್ನೆರಡನೇ ಶತಮಾನದ ವಚನಕಾರರು ಏನೋ ಸಮಾನತೆಯನ್ನು ತಂದರೂ ಸಹ ವ್ಯಕ್ತಿಯನ್ನು ಒಡೆಯಲು ಅವರಿಂದ ಸಾಧ್ಯವಾಗಲಿಲ್ಲ. ಅಪ್ಪಕ್ಕೆ ಮಾರಯ್ಯ ಹಾಗೆಯೇ ಇದ್ದ ಅಂಬಿಗರ ಚೌಡಯ್ಯ ಹಾಗೆಯೇ ಇದ್ದ. ಆದ್ದರಿಂದ ವಚನಕಾರರಿಂದ ಧಾರ್ಮಿಕ ಸಮಾನತೆ ಬಂತು. ಆದರೆ ಸಾಮಾಜಿಕ ಸಮಾನತೆ ತರಲು ಸಾಧ್ಯವಾಗಲಿಲ್ಲ. ಆದ್ದರಿಂದ ಮುಖ್ಯವಾಗಿ ವ್ಯಕ್ತಿಯನ್ನು ಒಡೆದರೆ ಜಾತಿ ತಾನೆ ತಾನೆ ಹೊರಟು ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ಬರುವ ಚೋಮ ಬಯಸುವ ಆಸೆಗಳನ್ನು ಇವತ್ತು ನಾವು ಬಯಸಬೇಕಾಗಿಲ್ಲ. ಚೋಮ ಅವನ ಪರಿಮಿತಿಯಲ್ಲಿ ಸ್ವತಂತ್ರ ಬೇಸಾಯಗಾರನಾಗಲಿಕ್ಕೆ ಇಚ್ಛಿಸುತ್ತಾನೆ. "ನಾನು ಇನ್ನೊಬ್ಬರ ಹಂಗಿನಲ್ಲಿ ಬದುಕಬಾರದು" ಎಂಬುದೆ ಆತನ ಮುಖ್ಯ ನಿಲುವು. ಅವನ ಸ್ವತಂತ್ರ ಪ್ರವೃತ್ತಿಯ ಮನೋಭಾವ ಇಂದಿಗೂ ನಮಗೆ ಮಾದರಿಯಾಗಿದೆ.[1]

ಕಥಾನಾಯಕ ಚೋಮನ ಭಾವನೆಗಳಲ್ಲಿ ದಮನಗೊಳ್ಳುತ್ತ ಹೋಗುತ್ತವೆ. ಜೀವನದಲ್ಲಿ ದಮನಗೊಂಡ ಭಾವನೆಗಳು ಬಹಳ ಮುಖ್ಯವಾದವು. ಸುಪ್ತ ಪ್ರಜ್ಞೆಗೆ ತಳ್ಳಲ್ಪಟ್ಟ ದಮನಗೊಂಡ ಭಾವನೆಗಳ ಬಿಡುಗಡೆಗಾಗಿ, ದುಡಿ ಬಡಿಯುವ ಮೂಲಕ ಹಾಗೂ ಕುಡಿಯುವ ಮೂಲಕ ಪ್ರಯತ್ನಿಸುತ್ತಾನೆ. ಆ ರೀತಿ ಬಿಡುಗಡೆಯಾಗಿರುವುದರಿಂದ ಚೋಮ ಮಾನಸಿಕ ಸ್ವಾಸ್ಥ್ಯದಿಂದ ಬದುಕುತ್ತಿದ್ದಾನೆ. ಈ ರೀತಿಯ ದಮನಗೊಂಡ ಭಾವನೆಗಳ ಬಿಡುಗಡೆಗೋಸ್ಕರ ಕುಡಿದಿರಬಹುದು. ಆದರೆ ಅದು ಸಮರ್ಥನೆ ಅಲ್ಲ ಅಲ್ಲದೆ ದುಡಿಯನ್ನು ಒಂದು 'ಕಲಾತ್ಮಕ' ರೀತಿ ಬಳಸಿಕೊಳ್ಳುತ್ತಾನೆ.[2] ಇದು ಕೃತಿಗೆ ಒಂದು ಹೊಸ ಚೌಕಟ್ಟನ್ನು ತಂದುಕೊಟ್ಟಿದೆ ಎಂದು ಹೇಳಬಹುದು.

ಮತಾಂತರದ ಸಮಸ್ಯೆ ಕುರಿತು ಆ ಕಾಲಕ್ಕೆ ತುಂಬಾ ಚರ್ಚೆಯಾಗುತ್ತಿತ್ತು. ಈ ಕಾದಂಬರಿಯಲ್ಲಿ ಬರುವ ಮತಾಂತರ ಸಮಸ್ಯೆಯನ್ನು ಪರ್ಯಾಯಧರ್ಮಗಳ ಹಿನ್ನೆಲೆಯಲ್ಲಿ

---

೧. ಪುಷ್ಟಿ ಸಂಪದ – ಡಾ. ರಾಗೌ, ಪುಟ. ೧೧೭

೨. ಕತ್ತಿಯಂಚಿನ ದಾರಿ, ರಹಮತ್ ತರೀಕೆರೆ, ಪುಟ. ೯೨

[illegible]

ನೋಡಬೇಕು. ಗುರುವನ ಮತಾಂತರಕ್ಕೆ ಮುಖ್ಯಕಾರಣ ಆತನ ಪ್ರೇಮ ಪ್ರಕರಣ ಬೇಸಾಯಗಾರನಾಗುತ್ತೀನಿ ಎಂದು ಹೇಳುವುದು ಎರಡನೆಯ ವಿಷಯ. ಮೇರಿಯನ್ನು ಮದುವೆ ಮಾಡಿಕೊಳ್ಳಬೇಕಾಗಿರುವುದರಿಂದ ಅವಳನ್ನು ಪಡೆಯಲು ಮತಾಂತರ ಹೊಂದುತ್ತಾನೆ. ತನ್ನ ಪ್ರೇಮ ಸಮಸ್ಯೆಯನ್ನು ಮತಾಂತರ ಹೊಂದುವ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಚೋಮನ ಹೋರಾಟದ ಪ್ರಶ್ನೆ ಮತ್ತು ತಾಕಲಾಟಗಳು ಅವನಿಗಿರುದಿಲ್ಲ. ಪ್ರೇಮವೇ ಆತನಿಗೆ ಬಹಳ ಮುಖ್ಯವಾದದ್ದು. ಮಾನವಶಾಸ್ತ್ರಜ್ಞರು "ಸಾಮಾನ್ಯವಾಗಿ ಪುರುಷರಿಗಿಂತ ಮಹಿಳೆಯರು ಹೆಚ್ಚು ಸಂಪ್ರದಾಯವಾದಿಗಳು" ಎಂದು ಹೇಳುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಗಮನಿಸಿದಾಗ ಈ ಅಭಿಪ್ರಾಯ ಸರಿ ಎನಿಸುತ್ತದೆ. ಗುರುವನಂತೆ ಬೆಳ್ಳಿಯು ಕ್ರೈಸ್ತಧರ್ಮಕ್ಕೆ ಮತಾಂತರ ಹೊಮದಲು ಒಪ್ಪಿಗೆ ಕೊಡುತ್ತಾಳೆ. ಬೆಳ್ಳಿಯು ಈ ನಿಲುವಿನಿಂದಾಗಿ ಚೋಮ ತನ್ನ ಹಿಂದಿನ ನಿಲುವನ್ನು ಬದಲಾಯಿಸಿಕೊಳ್ಳುತ್ತಾನೆ. ಆದರೆ ಬೆಳ್ಳಿ ಏಕೆ ಈ ನಿರ್ಧಾರ ತೆಗೆದುಕೊಳ್ಳುತ್ತಾಳೆ? ಇವಳ ನಿಲುವಿನಿಂದಾಗಿ ಮುಂದೆ ಮನ್ವೇಲ ಮತ್ತು ಮಿಂಗೇಲರ ಶೋಷಣೆಗೆ ಒಳಗಾಗುತ್ತಾಳೆ. ಕಾರಂತರು ಈ ಲೈಂಗಿಕ ಶೋಷಣೆಯ ವಿವರಗಳನ್ನು ಹೆಚ್ಚು ಕೊಡುವುದಿಲ್ಲ. ಅದೆಲ್ಲವನ್ನು ಓದುಗರಿಗೆ ಬಿಡುತ್ತಾರೆ. ನವ್ಯ ಲೇಖಕರಾಗಿದ್ದರೆ ಈ ಸಂದರ್ಭವನ್ನು ವಿವರವಾಗಿ ಚಿತ್ರಿಸುತ್ತಿದ್ದರು. ನವೋದಯ ಲೇಖಕರು ಅಶ್ಲೀಲ ಪದಗಳನ್ನು ಬಳಸುವುದಕ್ಕೆ ಹಿಂದೆ ಮುಂದೆ ನೋಡುತ್ತಾರೆ. ಈ ಹಿನ್ನೆಲೆಯಲ್ಲಿ ಬೆಳ್ಳಿ "ಗುರುವ ಮಡದಿಯಾಗಿ ಪಡೆಯುವುದಾದರೆ ನಾನು ಯಾಕೆ ಮನ್ವೇಲನ ಮಡದಿಯಾಗಬಾರದು"[೧] ಎಂದು ಹೇಳುತ್ತಾಳೆ. ಆದ್ದರಿಂದ ಬೆಳ್ಳಿ ಕೂಡ ಗುರುವನಂತೆ ಪ್ರೇಮ ಪ್ರಕರಣದ ಮೂಲಕ ಮತಾಂತರ ಹೊಂದಲು ನಿರ್ಧಾರ ತೆಗೆದುಕೊಳ್ಳುತ್ತಾಳೆಯೇ ಹೊರತು ಇದು ಚೋಮನ ನಿರ್ಧಾರ ಅಲ್ಲ. ಅದು ಅವನಿಗೆ ಗೊತ್ತಿರುವುದಿಲ್ಲ. ಆದ್ದರಿಂದ ಪ್ರೇಮದ ವಿಷಯಗಳು ಬಂದಾಗಲೆಲ್ಲ ಹೆಣ್ಣಾಗಲಿ, ಗಂಡಾಗಲಿ ಇಂತಹ ಸಂದರ್ಭದಲ್ಲಿ ಬಹಳ ಕ್ರಾಂತಿಕಾರಕ ನಿಲುವುಗಳನ್ನು ತೆಗೆದುಕೊಳ್ಳುತ್ತಾರೆ.

ಬಹಳ ಮುಖ್ಯವಾಗಿ ಕಾರಂತರನ್ನು ನಾವು ಹೆಚ್ಚು ಪ್ರೀತಿಸುವುದು ಅವರು ವಾಸ್ತವವಾದಿಯಾಗಿ ಬರೆಯುತ್ತಾರೆ ಎಂಬುದಕ್ಕಲ್ಲ. ಬೇರೆಯವರೂ ಈ ನೆಲೆಯಲ್ಲಿ ಬರೆದಿರುತ್ತಾರೆ. ಪ್ರಗತಿಶೀಲರು ಬರೆದಿದ್ದಾರೆ. ಆದರೆ ಕಾರಂತರ ಮಾನವತಾವಾದಿ ನೆಲೆ ಬಹಳ ಮುಖ್ಯವಾದದ್ದು. ಅವರ ವೈಚಾರಿಕ ಬರಹಗಳು ಮತ್ತು ಅವರ ಮಾತಿನಲ್ಲಿ ಸಹ ಇದನ್ನು ಗುರುತಿಸಬಹುದು. ಮಾನವತಾವಾದ ಎಲ್ಲ ವಾದಗಳಿಗೂ ಮುಖ್ಯ ತಳಹದಿಯಾಗಿರುವಂಥದ್ದು. ಶಿಖರವಾಗಿರುವಂಥದ್ದು. ಅದು ಪ್ರತ್ಯೇಕ ಸಿದ್ಧಾಂತವಲ್ಲ. ಈ

---

೧. ಶಿವರಾಮಕಾರಂತ, ಪುಟ. ೭೯

[illegible]

ಮಾನವತಾವಾದಿ ನೆಲೆಯನ್ನು ಈ ಕಾದಂಬರಿಯಲ್ಲಿ ಅತ್ಯುತ್ತಮವಾದ ರೀತಿಯಲ್ಲಿ ಗುರುತಿಸಬಹುದು.

ಈ ಕಾದಂಬರಿಯಲ್ಲಿ ಬರುವ ಜೀವನೋತ್ಸಾಹ ಬಹಳ ಮುಖ್ಯವಾದುದ್ದು. ಕಾದಂಬರಿಯ ಅಂತ್ಯ ದುರಂತದಿಂದ ಕೂಡಿರಬಹುದು. ಆದರೆ ಅಲ್ಲಿಯೂ ಸಹ ಜೀವನೋತ್ಸಾಹ ಕಂಡುಬರುತ್ತದೆ. ಈ ಕಾದಂಬರಿಯ ಅಂತ್ಯ ಬಹಳ ಅದ್ಭುತವಾದದ್ದು. ಕನ್ನಡದ ಯಾವ ಕಾದಂಬರಿ ಅಥವಾ ಕಾವ್ಯದಲ್ಲಿ ಈ ರೀತಿಯ ಜೀವನೋತ್ಸಾಹ ಅಂತ್ಯದಲ್ಲಿ ಕಂಡುಬರುವುದಿಲ್ಲ. ಚೋಮನ ಇಲ್ಲಿನ ವ್ಯವಸ್ಥೆಯಿಂದಾಗಿ ಕೊನೆಯಲ್ಲಿ ದುರಂತಕ್ಕೆ ಒಳಗಾಗಿರಬಹುದು. ಆದರೆ ಅಲ್ಲಿಯೂ ಜೀವನೋತ್ಸಾಹ ಕಂಡುಬರುತ್ತದೆ. ಇದು ಕಾರಂತರ ಎಲ್ಲ ಕಾದಂಬರಿಗಳಲ್ಲಿ ಕೆಲಸ ಮಾಡುತ್ತವೆ. ನವ್ಯದವರು ಗುರುತಿಸುವ 'ಅಳಿದ ಮೇಲೆ' ಮತ್ತು 'ಮರಳಿಮಣ್ಣಿಗೆ' ಕಾದಂಬರಿಗಳಲ್ಲಿ ಸಹ ಜೀವನೋತ್ಸಾಹ ಕಂಡುಬರುತ್ತದೆ. ಆದ್ದರಿಂದ ಜೀವನೋತ್ಸಾಹದ ನೆಲೆಯನ್ನು ಕಾರಂತರು ಯಾವಾಗಲೂ ಬಿಟ್ಟುಕೊಟ್ಟಿಲ್ಲ. ಯಾವುದೇ ಲೇಖಕನಿಗೆ ಮೊದಲು ಇರಬೇಕಾದದ್ದು ಜೀವನೋತ್ಸಾಹದ ನೆಲೆ. ಅದು ಇಲ್ಲದೆ ಇದ್ದರೆ ಸೃಷ್ಟಿಕ್ರಿಯೆ ಸಾಧ್ಯವಾಗುವುದಿಲ್ಲ. ಇದನ್ನು 'ಚೋಮನ ದುಡಿ' ಕಾದಂಬರಿಯಲ್ಲಿ ಪ್ರತಿ ಹೆಜ್ಜೆಗೂ ಗುರುತಿಸಬಹುದು.

ಕುಸುಮಬಾಲೆ ಕಾದಂಬರಿಯ 'ಕಲಾತ್ಮಕತೆ'

ಕುಸುಮಬಾಲೆ ಒಂದು ಲಾಕ್ಷಣಿಕ ರೂಪದ ಶೋಷಿತವರ್ಗದ 'ದಲಿತ' ಕೃತಿಯಾಗಿರದೆ, ಶೋಷಕವರ್ಗದ 'ಕಲಾತ್ಮಕ' ಕೃತಿಗಳ ಸಾಲಿಗೆ ಸೇರುವಂಥದ್ದು. ಈ ಕಾದಂಬರಿ ಪ್ರಕಟವಾಗುವ ಹೊತ್ತಿಗಾಗಲೇ ದಲಿತ ಚಳವಳಿಯ ಜೊತೆ ಬಂಡಾಯ ಚಳವಳಿಯೂ ಸೇರಿ ಸಾಹಿತ್ಯ ಕೃತಿಗೆ ಒಂದು ಉಪಕರಣಗುಣ ಬಂದುಬಿಟ್ಟಿತು. ಈ ದೃಷ್ಟಿಯಿಂದ ಕುಸುಮಬಾಲೆ 'ದಲಿತ-ಬಂಡಾಯ' ಸಾಹಿತ್ಯದ ವಿಧಾನಕ್ಕೆ ಹೊರತಾಗಿ ಕಾಣಿಸಿ, ದೇವನೂರರ ಒಂದು ಗುಂಪಿನ ಓದುಗರ ನಿರೀಕ್ಷೆಗಳಿಗೆ ಸಾಕಷ್ಟು ಪ್ರಮಾಣದ ಘಾತವನ್ನು ಉಂಟುಮಾಡಿತು. ಇದರ ಅರ್ಥ ದೇವನೂರ ಮಹಾದೇವ ಇದಕ್ಕೆ ಮೊದಲು ಬರೆದ ಕೃತಿಗಳು ಈ ಉಪಕರಣಗುಣವನ್ನು ವ್ಯಕ್ತವಾಗಿ ಹೊಂದಿದ್ದುವು ಎಂದೇನೋ ಅಲ್ಲ; ಆದರೆ ಅವು ಅದಕ್ಕೆ ವಿರುದ್ಧವಾಗಿಯೂ ಇರಲಿಲ್ಲ. ಕುಸುಮಬಾಲೆ ಮಾತ್ರ ಎಲ್ಲರಿಗೂ ಕಾಣಿಸುವಂತೆ ಕಲೆಯ ಉಡುಗೊರೆಯನ್ನು ತೊಟ್ಟು ಪ್ರತ್ಯಕ್ಷವಾಗಿ ಬಿಟ್ಟಿದ್ದಳು ಎಂದರೆ ದೇವನೂರರಿಂದ ಈಗ ಇನ್ನಷ್ಟು ಉಚ್ಚಕಂಠದ ಸಾಹಿತ್ಯ ಕೃತಿಗಳನ್ನು ನಿರೀಕ್ಷಿಸಿದವರಿಗೆ ದೊರೆತುದು ಕೋಮಲವಾದ ಕುಸುಮಬಾಲೆ. ಇದು ಓದುವುದಕ್ಕೆ ಕ್ಲಿಷ್ಟವೂ ಆಗಿತ್ತು ಎನ್ನುವುದು ಈ ಕೃತಿಯನ್ನು ಸೆದೆಬಡಿಯುವುದಕ್ಕೆ ಸುಲಭದ ಬಡಿಗೆಯೊಂದನ್ನು ಒದಗಿಸಿತು ಕೂಡಾ. ಇದೆಲ್ಲದರ ಹಿಂದೆ, ಸಾಹಿತ್ಯಕೃತಿಯೊಂದು

[illegible]

[illegible]

[illegible]

[illegible]

ಶೋಷಿತವರ್ಗದ ಉಪಯೋಗಕ್ಕೆ ಬರಬೇಕಾದರೆ ಅದು ಆ ವರ್ಗಕ್ಕೆ ಸುಲಭವಾಗಿ ಸಂವಹನವಾಗಬೇಕು ಎಂಬ ಬಂಡಾಯದ ಧೋರಣೆ ಒಳ್ಳೆಯದಕ್ಕೋ, ಕೆಟ್ಟದಕ್ಕೋ ಅಂತೂ ಕೆಲಸ ಮಾಡುತ್ತಿತ್ತು ಎಂದು ಗಮನಾರ್ಹ ಕುಸುಮಬಾಲೆ ಆ ರೀತಿಯ ಸಂವಹನ ಸುಲಭ ಕೃತಿಯಲ್ಲಿ ಎನ್ನುವುದೇ ಅದರ ಕುರಿತಾದ ಆಕ್ಷೇಪಣೆ. ಒಂದು ವೇಳೆ ಅದು (ದೇವನೂರರ ಈ ಮೇಲಿನ ಕೃತಿಗಳು) ಸಂವಹನ ಸುಲಭ ಕೃತಿಯಾಗಿರುತ್ತಿದ್ದರೆ ಅದು ಉಚ್ಛಕಂಠದ್ದಾಗಿರಲಿಲ್ಲ ಎನ್ನುವುದು ಬಹುಶಃ ಯಾರ ಗಮನಕ್ಕೂ ಬರುತ್ತಿರಲಿಲ್ಲ ಎಂದರೆ ಕುಸುಮಬಾಲೆ ಜನರ ಕಣ್ಣಿಗೆ ಹೊಡೆಯುವಂತಾದುದಕ್ಕೆ ಅದರ 'ಕಲಾತ್ಮಕತೆ'ಯೇ ಮುಖ್ಯ ಕಾರಣ ಎನ್ನಬಹುದು. ಇಂಥ ಕಲಾತ್ಮಕತೆ ದಲಿತ–ಬಂಡಾಯೇತರ ಕೃತಿವರ್ಗಕ್ಕೆ ಸೇರಿದ್ದು ಎಂಬ ಒಂದು ಕಲ್ಪನೆಯಿದ್ದುದರಿಂದ ದೇವನೂರರಂಥ ಮುಂಚೂಣಿಯ ದಲಿತ ಲೇಖಕನೊಬ್ಬನ ಲೇಖನಿಯಿಂದ ಬಂದ ಈ ಕೃತಿಯನ್ನು ಹೇಗೆ ಓದಬೇಕೆಂದು ಈ ಓದುಗರಿಗೆ ತಿಳಿಯದೆ ಗೊಂದಲವಾಯಿತು. ಪ್ರತಿರೋಧದ ಹಿಂದೆ ಇರುವುದು ವಾಸ್ತವದಲ್ಲಿ ಈ ಗೊಂದಲವೇ ಆಗಿದೆ.

ಇಂಥ ಸಣ್ಣದೊಂದು ಕೃತಿಯಲ್ಲಿ ಲೇಖಕರು ನಾಲ್ಕೈದು ತಲೆಮಾರುಗಳ ಕತೆಯೊಂದನ್ನು ಹೆಣೆದಿರುವುದು ಈ ತಲೆಮಾರುಗಳೆಂದರೆ

೧) ಅಕ್ಕಮಹಾದೇವಮ್ಮ, ಆಕೆಯ ಭಾವನಾದ ಬಸಪ್ಪಸೋಮಿ, ಮೈದುನನಾದ ಸಿದ್ದೂರ;

೨) ಅಕ್ಕಮಹಾದೇವಿಯ ಮಗ ಯಾಡ (ರಾಜಶೇಖರಮೂರ್ತಿ);

೩) ಯಾಡನಮಗ–ಊರಿಗೆ ದೊಡ್ಡವನಾದ ಸೋಮಪ್ಪ, ಸೋಮಪ್ಪನ ಹೆಂಡತಿ ಮಲ್ಲಾಜಮ್ಮ, ಹೊಲೆಯರ ಚೆನ್ನನ ತಂದೆ, ತಾಯಿ ಹಾಗೂ ಬಳಗದವಳಾದ ತೂರಮ್ಮ ಗಾರಸಿದ್ಮಾವ, ಚೆನ್ನನ ಗುರು ಮಧ್ವಾಚಾರ್ಯರು:

೪) ಸೋಮಪ್ಪನ ಮಗಳು ಕುಸುಮಬಾಲೆ, ಹೊಲೆಯರ ಚೆನ್ನ (ಆಮೇಲೆ ಚೆನ್ನರಸ) ತೂರಮ್ಮಳ ಮಗಳು ಕೆಂಪಿ, ಕೆಂಪಿಯ ಗಂಡ ಕಿಟ್ಟಯ್ಯ, ತೂರಮ್ಮನ ಅಕ್ಕನ (ಕೆಂಪಿಯ ದೊಡ್ಡಮ್ಮನ) ಮಗಳು ಈರಿ; ಹೊಲೆಯರ ಅಮಾಸ; ಮದ್ವಾಚಾರ್ಯರ ಮಗಳು ಭಗವತಿಃ ದಲಿತ ಸಂಘದ ನಾಗರಾಜು;

೫) ಸೋಮಪ್ಪನ ಕಿರಿಯ ಮಗ ಪರ್ಸಾದ, ಈರಿಯ ಹೆಸರಿಲ್ಲದ ಮಗ, ಕುಸುಮಬಾಲೆಯ ಹಾಗೂ ಕೆಂಪಿಯ ಹಸುಗೂಸುಗಳು

ಈ ತಲೆಮಾರುಗಳಲ್ಲಿ ಮೂರು, ನಾಲ್ಕು ಮತ್ತು ಐದು ಕಥಾನಿರೂಪಣೆಯ ವರ್ತಮಾನಕ್ಕೆ ಸೇರಿದ್ದಾದರ ಒಂದು ಮತ್ತು ಎರಡು ಹಿಂದಿನ ಕಾಲಕ್ಕೆ ಸೇರಿದವು. ಮೂರು ಮತ್ತು ನಾಲ್ಕರ ತಲೆಮಾರಿಗೆ ಸೇರಿದ ಇನ್ನೂ ಅನೇಕ ಪಾತ್ರಗಳು. ಮುಖ್ಯವಾಗಿ ದಲಿತ

ಸಂಘದವರ ಜೀತ ವಿಮೋಚನಾ ಮೆರವಣಿಗೆಯ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತವೆ. ಕತೆಯ ಆರಂಭದಲ್ಲೂ ಆಮೇಲೆಯೂ ಕೋರಸ್‌ನಂತೆ ಬರುವ ಮಾಯಕದಂಥ ಪಾತ್ರಗಳಾದ 'ಜೋತಮ್ಮಗಳು' ಮೂರನೆಯ ಗುಂಪಿಗೆ ಸೇರಿದವು. ಕಾದಂಬರಿಯ ಅತ್ಯಂತ ಹಿಂದಣ ತಲೆಮಾರಿಗೆ ಸೇರಿದ್ದು ಪ್ರಕೃತದಲ್ಲೂ ಕಾಣಿಸುವ ಇನ್ನೊಂದು 'ಕಥಾಪಾತ್ರ' ಸೋಮಪ್ಪನವರು ಮಲಗುವ ಮಂಚ. ಇದು ಕೇವಲ ಕಥಾ ನಿರೂಪಣೆಯ ತಂತ್ರವಾಗಿಯಷ್ಟೇ ಅಲ್ಲ, ಕಥಾಕಾರ್ಯದ ಅಂಗವಾಗಿಯೂ ಪಾತ್ರ ವಹಿಸುತ್ತದೆ. ಮಂಚ ತನ್ನ ಸದ್ಯದ ದುರವಸ್ಥೆಯನ್ನು ಸೋಮಪ್ಪನ ಜೀವಾತ್ಮದೆದುರು ಹೇಳಿಕೊಳ್ಳುತ್ತ, ಸೋಮಪ್ಪನವರ ಅಪ್ಪನಾದ ಯಾಡ ಹೇಗೆ ತನ್ನ ಕೆಳಗೆ ಬಚ್ಚಿಟ್ಟುಕೊಂಡು ಕಳ್ಳನೋಟು ವ್ಯಾಪಾರಿಗಳನ್ನು ಮೋಸಮಾಡಿ ಶ್ರೀಮಂತನಾದ ಎಂಬುದನ್ನೂ ಹೇಳುತ್ತದೆ. ಇದಲ್ಲದೆ ಸಾಂದರ್ಭಿಕವಾಗಿ ಬರುವ ಇತರ ಅನೇಕನೇಕ ಪಾತ್ರಗಳಿಂದ ಕೂಡಿದ ಈ ಕಿರುಕಾದಂಬರಿ ಎಲ್ಲೂ ನಿರ್ಜನ ಅನಿಸುವುದಿಲ್ಲವಷ್ಟೇ ಅಲ್ಲ, ಈ ಚಿಕ್ಕ ಕ್ಯಾನ್ವಾಸಿಗೆ ಚದರಡಿಯ ಪ್ರಕಾರ ಜನಸಂಖ್ಯೆ ಸ್ವಲ್ಪ ಜಾಸ್ತಿಯೇ ಅನ್ನಿಸಿಬಿಡುತ್ತದೆ! ಆದ್ದರಿಂದಲೇ ಇದರ ವಾತಾವರಣ ಸಾಕಷ್ಟು ಸಾಂದ್ರವೆನಿಸುವುದು ಕೂಡ.

ಕುಸುಮಬಾಲೆಯ 'ಕ್ಲಿಷ್ಟತೆ'ಯ ಮತ್ತೊಂದು ಘಟಕ– ಇದು ಕಾದಂಬರಿಯ ಕಲಾತ್ಮಕತೆಯನ್ನು ಪೋಷಿಸುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಕಾಲಕ್ರಮಕ್ಕೆ ಸಂಬಂಧಿಸಿದಂತೆ ಹಾಗೂ ಆಖ್ಯಾನಕ್ರಮಕ್ಕೆ ಸಂಬಂಧಿಸಿದಂತೆ ಕತೆಯೊಂದನ್ನು ಕಾಲಾನುಕ್ರಮಾನುಗತವಾಗಿ ಹೇಳಿಕೊಂಡು ಹೋಗುವುದು, ಕಾಲವನ್ನು ಸಮ್ಮಿಶ್ರಗೊಳಿಸುತ್ತ ಹೋಗುವುದು. ಆದ್ದರಿಂದ ಕತೆಯ ಘಟನೆಗಳು ಇಲ್ಲಿ ಹಿಂದಕ್ಕೆ ಮುಂದಕ್ಕೆ ಹೋಗುತ್ತವೆ. ಒಂದರ ಜೊತೆ ಇನ್ನೊಂದು ಹಿಂದೋ ಮುಂದೋ ಸೇರಿಕೊಳ್ಳುತ್ತವೆ. ಹೆಚ್ಚಿನ ಅಧ್ಯಾಯದಲ್ಲೂ ಮೊದಲ ಒಂದು ಪ್ಯಾರಾ ಕಾಲದ ಒಂದು ಪರಿಧಿಗೆ ಸೇರಿದರೆ ಇನ್ನುಳಿದ ಭಾಗ ಇನ್ನೊಂದಕ್ಕೆ ಸೇರಿರುವುದನ್ನೂ ಕಾಣಬಹುದು. ಕಾದಂಬರಿಯ ಈ ಬಗೆಯನ್ನು ಕಾಣಲರಿಯದವರಿಗೆ ಇದು ಗೊಂದಲಕ್ಕೆ ಕಾರಣವಾಗುವುದು ಸಹಜವೇ ಸರಿ. ಕನ್ನಡದಲ್ಲಿ ಕಾಲಕ್ರಮವನ್ನು ಮುರಿದು ಕೃತಿ ರಚನೆ ಮಾಡಿದವರಲ್ಲಿ ದೇವನೂರರು ಮೊದಲಿಗರಲ್ಲದಿದ್ದರೂ, ಇಷ್ಟೊಂದು ಸಾಹಸಿಕೆಯಿಂದ ಇದನ್ನು ಕೈಗೊಂಡವರಲ್ಲಿ ಬಹುಶಃ ಅವರೇ ಮೊದಲಿಗರೆಂದು ಕಾಣುತ್ತದೆ. ಈ ಕೃತಿಯನ್ನು ಬರೆಯುವ ಹೊತ್ತಿಗೆ ದೇವನೂರರು ಬ್ರಿಟನ್ ಅಮೆರಿಕನ್ ಕಾದಂಬರಿಕಾರರ ಮುಖ್ಯವಾಗಿ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ನ – ಪ್ರಭಾವಕ್ಕೆ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಒಳಗಾಗಿದ್ದಂತೆ ತೋರುತ್ತದೆ.[೧] ಕಾಲಕ್ರಮದಲ್ಲಿ ನಡೆದ ಘಟನೆಗಳು ಐತಿಹಾಸಿಕವಾಗಿ ಹಾಗಿರಬೇಕೆಂದೇನೂ ಇಲ್ಲ. ಭೂತವು ಯಾವಾಗಲೂ ವರ್ತಮಾನದಲ್ಲಿ ಹಾಜರಿರುತ್ತದೆ,

---

೧. ಅಮಾರ್ತತೆ ಮತ್ತು ಪರಿಸರ, ಪುಟ. ೧೩೩

[illegible]

ಅದೇ ರೀತಿ ಭವಿಷ್ಯವು ಕೂಡಾ ಯಾವತ್ತೋ ಆಗಿಹೋಗಿರುತ್ತದೆ. ಚೆನ್ನನ ಸಾವು ಇದಕ್ಕೆ ಒಂದು ಉದಾಹರಣೆ.

ಆಖ್ಯಾನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇಲ್ಲಿಯೂ ದೇವನೂರರು ಈ ಕಿರುಕಾದಂಬರಿಯ ಸೀಮಿತ ವಲಯದಲ್ಲಿ ಎಷ್ಟೋ ಪ್ರಯೋಗಗಳನ್ನು ನಡೆಸಿರುವುದನ್ನು ಕಾಣಬಹುದು. ಇದರ ಆರಂಭವೇ ಬಹಳ 'ನಾಟಕೀಯ'ವಾಗಿ ಗ್ರೀಕ್ ದುರಂತ ನಾಟಕವೊಂದರ ಆರಂಭದಂತೆ ಮೊದಲಾಗುತ್ತದೆ. ಊರ ಜೋತಮ್ಮಗಳ ಹರಟೆಯಿಂದ. ಇದರಲ್ಲೇ ಇಡೀ ಕತೆಯ ದುರಂತದ ಬೀಜವನ್ನು ಬಿತ್ತಲಾಗುತ್ತದೆ. ಕುಸುಮಬಾಲೆ ಚನ್ನನ ಜತೆಗಿನ ಅಕ್ರಮ ಸಂಬಂಧದಲ್ಲಿ ಮಗುವೊಂದಕ್ಕೆ ಜನ್ಮವಿತ್ತುದೇ ಈ ದುರಂತದ ಬೀಜ. ಇದು ಈ ತನಕ ಗುಪ್ತವಾಗಿದ್ದ ಈ ಸಂಬಂಧ ಮಗುವಿನ ಕಪ್ಪು ಮೈಬಣ್ಣದಿಂದ ಒಮ್ಮೆಲೆ ಬೆಳಕಿಗೆ ಬಂತೆನ್ನುವುದರಲ್ಲಿ ಇನ್ನೊಂದು ನಾಟಕೀಯತೆ ಅಡಗಿದೆ. ಈ ಘಟನೆಯಲ್ಲಿ ಎರಡು ತರದ 'ಅಕ್ರಮಗಳು' ಅಡಕವಾಗಿರುತ್ತವೆ. ಒಂದು ಹಾದರವಾದರೆ ಇನ್ನೊಂದು ಜಾತಿಭ್ರಷ್ಟತೆ. ಇವೆರಡೂ ಒಟ್ಟಾಗಿ ನಡೆದಿರುವುದು ಈ ದುರಂತದ ಘೋರವನ್ನು ದ್ವಿಗುಣಗೊಳಿಸುತ್ತದೆ. ಇಡೀ ಕಾದಂಬರಿ ಆರಂಭದಿಂದ ಕೊನೆಯತನಕ ಚನ್ನನ ಕೊಲೆಯನ್ನು ಬೀಜರೂಪದಲ್ಲಿ ಬಚ್ಚಿಟ್ಟುಕೊಂಡಿದ್ದು ಅದನ್ನೊಂದು ತಣ್ಣನೆಯ ಸೆರಗಿನ ಕೆಂಡದಂತೆ ಉದ್ದಕ್ಕೂ ಕಾಪಾಡಿಕೊಂಡು ಬಂದುದು ಒಂದು ವೈಶಿಷ್ಟ್ಯವೇ ಸರಿ.

'ಕುಸುಮಬಾಲೆ' ಕೃತಿ ಗಂಭೀರವಾದ ಮೌಲ್ಯ ಪರೀಶೀಲನೆಯನ್ನು ಮಾಡುವ ಕೃತಿಯಾಗಿದೆ. ವರ್ಣ, ಜಾತಿ ಹಾಗೂ ನೀತಿಯ ಕಟ್ಟಳೆಗಳನ್ನು ಕಠೋರವಾಗಿ ಪಾಲಿಸುವುದರಿಂದ ಉಂಟಾಗುವ ಹಿಂಸೆಯನ್ನು ಈ ಕೃತಿ ವಿರೋಧಿಸುತ್ತದೆ ಮತ್ತು ಇವೆಲ್ಲವುಗಳನ್ನು ಮೂರ್ತವಾಗಿ ತಲೆಕೆಳಗು ಮಾಡುವ ಹಾದರದ ಸಂಬಂಧಗಳನ್ನು ಇತ್ಯಾತ್ಮಕವಾಗಿ ನೋಡುತ್ತದೆ. ಕುಸುಮಬಾಲೆ ಚೆನ್ನ ಮತ್ತು ಚೆನ್ನನ ತಂದೆ–ತಾಯಿಯರ ಬಗ್ಗೆ ಕೃತಿ ಹೊಂದುವ ಗಂಭೀರ ಅನುಕಂಪದ ಧೋರಣೆಯನ್ನು ಗಮನಿಸಬೇಕು. ಒಟ್ಟಾರೆಯಾಗಿ "ಕುಸುಮಬಾಲೆ" ಕೃತಿ ಜಾತಿವ್ಯವಸ್ಥೆಯ ಹಿಂಸೆಯ ಬಗ್ಗೆ ಮತ್ತು ಅದಕ್ಕೆ ಬಲಿಯಾಗುವ ಮನುಷ್ಯ ವ್ಯಕ್ತಿಗಳ ಬಗ್ಗೆ Compussion ತೋರಿಸುವ ಅವಶ್ಯಕತೆಯ ಬಗ್ಗೆ ಇದೆ.

ಈ ಅಂಶವನ್ನು ಇಷ್ಟು ದೀರ್ಘವಾಗಿ ಪ್ರಸ್ತಾಪಿಸಲು ಕಾರಣವೆಂದರೆ ಹಲವಾರು ಸೂಕ್ಷ್ಮ ಮನಸ್ಸಿನ ಓದುಗರೂ ಕೂಡ 'ಕುಸುಮಬಾಲೆ'ಯ ಹಿಂದೆ ತಾವು ಕಂಡಿರುವ 'ಈಸ್ಥೆಟಿಕ್' ನಿಲುವಿನ ಬಗ್ಗೆ ಗುಮಾನಿ ಇಟ್ಟುಕೊಂಡಿದ್ದಾರೆ. ಅಂದರೆ ಎಲ್ಲೋ ಮಹಾದೇವ ತಮ್ಮ ಬರಹದ ಶ್ರೀಮಂತಿಕೆಯ ವ್ಯಾಮೋಹದಲ್ಲಿ ಗಂಭೀರವಾದ ಮೌಲ್ಯ ಸಾಧನೆ, ನಿಷ್ಕರ್ಷ – ಇವುಗಳನ್ನು ಮರೆತುಬಿಡುತ್ತಾರೆ ಎನ್ನುವ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಕೃತಿಯಲ್ಲಿ

ಮಹಾದೇವ ಬರಹದ ಬಹುಮುಖತ್ವ, ಬಹುಧ್ವನಿಗಳ ನೆಪ ಬಳಸಿಕೊಂಡು ಯಾವುದರ ಬಗ್ಗೆಯೂ ಖಚಿತವಾದ ನಿಲುವು ತಾಳುವುದಿಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದಲೇ ಇವರಿಗೆ 'ಕುಸುಮಬಾಲೆ'ಯ ಕಲೆಗಾರಿಕೆ, ಕುಸುರಿ ಕೆಲಸ ಇವೆಲ್ಲವೂ 'ಈಸ್ತೆಟಿಕ್' ಆಗಿ ಕಂಡಿವೆ. (ಇಲ್ಲಿ ಈಸ್ತೆಟಿಕ್ ಅಂದರೆ ಮೌಲ್ಯಗಳ ಬಗ್ಗೆ ತಟಸ್ಥವಾಗಿರುವ ಅಥವಾ ಸಾಪೇಕ್ಷವಾದ ಧೋರಣೆ ಹೊಂದಿರುವ ನಿಲುವು ಎಂದು ಅರ್ಥಮಾಡಿಕೊಳ್ಳಬೇಕು.)

ಈ ನನ್ನಿಯ ನಿರೂಪಣೆಯಲ್ಲಿ ಕೂಡ ಗಂಡು ಹೆಣ್ಣುಗಳ ಸಂಬಂಧಗಳು ವರ್ಣಪದ್ಧತಿಯ ಕಟ್ಟಳೆಗಳನ್ನು ಮುರಿಯುತ್ತವೆ. ಇದು ಜಾತಿಗಳ ಮಧ್ಯದ ದ್ವೇಷಕ್ಕೂ ಕಾರಣವೆಂದು ಕೂಡ ವಿವರಿಸಲಾಗಿದೆ. ಇನ್ನೊಂದು ರೀತಿಯಲ್ಲಿ ನೋಡಿದರೆ, ಸಮಕಾಲೀನವೆಂದು ನಾವು ಗ್ರಹಿಸಬಹುದಾದ ವ್ಯವಸ್ಥೆಯ ಏರುಪೇರುಗಳ ಹಿಂದೆ ತಲತಲಾಂತರದ ಕಾಣ್ಕೆಯನ್ನು ಸರಿಸಮವಾಗಿ ಮಹಾದೇವರು ಕೃತಿಯಲ್ಲಿ ತಂದಿದ್ದಾರೆಯೆ? ಅಥವಾ ಕೃತಿಯಲ್ಲಿ ಎರಡು 'ಪಠ್ಯ'ಗಳಿದ್ದು (Texts ಅನ್ನುವ ಅರ್ಥದಲ್ಲಿ) ಒಂದು ಇನ್ನೊಂದನ್ನು ನಿರಚಿಸುತ್ತದೆಯೆ? ಅಥವಾ ಈ ಎರಡೂ ಪಠ್ಯಗಳು ಒಟ್ಟಿಗೆ ಕೃತಿಯಲ್ಲಿದ್ದು ಅವೆರಡನ್ನು ಮೇಳವಿಸಿಕೊಂಡು ಕೃತಿಯು ಹೆಚ್ಚು ಸಮಗ್ರವಾದ ಇನ್ನೊಂದು ಅರ್ಥವಂತಿಕೆಯನ್ನು ಪಡೆಯುತ್ತದೆಯೆ? ಇದು ಸಂದಿಗ್ದದ ವಿಷಯವಾಗಿದೆ. ಚನ್ನ ಹಾಗೂ ಕುಸುಮಬಾಲೆಯ ನಡುವಿನ ಸಂಬಂಧವು ಚನ್ನನ ಕೊಲೆಯಲ್ಲಿ ಪರ್ಯಾವಸಾನಗೊಳ್ಳುತ್ತದೆ. ಆದರೆ ಇದರ ಮೂಲಕ ಶೈಲಿ ಎತ್ತುವ ಪ್ರಶ್ನೆಗಳು ಪರಿಹಾರವಾದಂತೆ ಅನ್ನಿಸುವುದಿಲ್ಲ. ಈ ಕೊಲೆ ಯಾರಿಗೂ ''ಅರಿವಾಗದೋಪಾದಿಯಲ್ಲಿ'' ನಡೆದುಬಿಡುತ್ತದೆ. ದ.ಸಂ.ಸ.ದ ಮೆರವಣಿಗೆಗೂ ಈ ಮುಖ್ಯ ಘಟನೆಗೂ ಸಂಬಂಧವಿಲ್ಲದಿರುವುದರಿಂದ ಚೆನ್ನನ ಕೊಲೆ ಕತೆಯ ಮೂಲದಲ್ಲಿದ್ದು ತನ್ನ ಕೇಂದ್ರಸ್ಥಾನವನ್ನು ಕಳೆದುಕೊಂಡಂತಾಗುತ್ತದೆ. ಚೆನ್ನನು ಬದುಕಿದ್ದಾನೆ. ಬೊಂಬಾಯಿಯಲ್ಲಿ ತ್ರಿಸ್ಟಾರ್ ಹೋಟೇಲಿಟ್ಟಿದ್ದಾನೆ – ಇವೇ ಮುಂತಾದ ಕತೆಗಳು ಅವನ ಬಗ್ಗೆ ಹುಟ್ಟಿಕೊಂಡು ಅವನಿಗೆ ಸಾವನ್ನು ಮೀರಿದ ವರ್ಚಸ್ಸು ಬರುತ್ತದೆ. ಅವನ ತಂದೆ –ತಾಯಿಯರು ಅವನಿಗಾಗಿ ಕಾಯುತ್ತ 'ಸಂಬಂಜ ಎನ್ನುವುದು ದೊಡ್ಡದು ಕನಾ' ಎಂದು ನಂಬಿಕೊಂಡಿರುವುದು. 'ಕುಸುಮಬಾಲೆ'ಯ ಅಪೂರ್ವವಾದ ಭಾಗಗಳಲ್ಲೊಂದಾಗಿದೆ. ಸಂಬಂಧಗಳಿಗಿಂತ ಅವುಗಳನ್ನು ನೆಚ್ಚಿಕೊಂಡಿರುವ ಶ್ರದ್ದೆ ಬಹಳ ಇತ್ಯಾತ್ಮಕವಾಗಿ ನೋಡಲಾಗಿದೆ. ಆದರೆ ಈ ಶ್ರದ್ಧೆ, ನಡೆದಿರುವ ಕೊಲೆಯ ವಾಸ್ತವಿಕ ಹಿನ್ನೆಲೆಯಲ್ಲಿ, ಮನಮಿಡಿಯುವ ಚರಮಗೀತೆಯನ್ನು ಸೃಷ್ಟಿಸಬಲ್ಲವೆ ಹೊರತು ಪರಿಹಾರವನ್ನು ತರಲಾರದು.[೧] ಹೀಗಾಗಿ ಕೃತಿಯ ಕೊನೆಗೆ ಚೆನ್ನನ ಕೊಲೆಯ ಪುರಾವೆಯಾಗಿದ್ದ ರಕ್ತದ ಬೊಟ್ಟು ಕೂಡ ಅಳಿಸಿಹೋಗಿ ಎಲ್ಲವೂ

---

೧. ಉಲ್ಲೇಖ: ಕೆ.ವಿ.ತಿರುಮಲೇಶ್, ಪುಟ. ೧೨೨-೧೨೩

[illegible]

ಹಗಲು–ರಾತ್ರಿಗಳ ಮುಗಿಯದ ಚಕ್ರದಲ್ಲಿ ಅಳಸಿಹೋಗುತ್ತವೆ. ಪ್ರಧಾನವಾಗಿ ಕಾಮಿಕ್ ಶೈಲಿಯಲ್ಲಿ ಇರುವ ಈ ಕೃತಿ ಮುಗಿಯುವುದು ವಿಷಾದ ಹುಟ್ಟಿಸುವ ಚರಮಗೀತೆಯೊಂದರ ಧಾಟಿಯಲ್ಲಿ ಎನ್ನುವುದನ್ನು ಗಮನಿಸಬೇಕು. ಘಟನೆಗೆ ಕಾರಣವಾದ ವ್ಯವಸ್ಥೆಯೊಳಗಿನ ಹಿಂಸೆಯನ್ನು ನುಂಗಿಕೊಂಡು, ಕಥಾನಕವು ದುಃಖವನ್ನು 'Universalise' ಮಾಡಿಬಿಟ್ಟು ಚರಮಗೀತೆಯ ಆಸರೆಯನ್ನು ಹೊಕ್ಕುಬಿಡುತ್ತದೆಯೇ? ಅನುಭವವನ್ನು ಮೂರ್ತ ಹಾಗೂ ಸ್ಥಳೀಯಗೊಳಿಸುವ ಒಂದು ಪ್ರಕ್ರಿಯೆ, ಸಾರ್ವತ್ರಿಕಗೊಳಿಸುವ ಇನ್ನೊಂದು ಪ್ರಕ್ರಿಯೆ, ಇವೆರಡೂ ಕೃತಿಯೊಳಗೆ ಪ್ರಬಲವಾಗಿವೆ.[೧] ಅವುಗಳ ಮಧ್ಯೆ ಇರುವ ನಾಜೂಕಾದ ಸಮತೂಕ ಕೊನೆಗೆ ಸಾರ್ವತ್ರಿಕಗೊಳಿಸುವ ಕಡೆಗೆ ಸ್ವಲ್ಪ ವಾಲಿಬಿಡುತ್ತದೆಯೆ? ಹಾಗೆ ಆಗಿರುವುದಾದರೆ ಅದರ ಒಟ್ಟಾರೆ ಪರಿಣಾಮಗಳೇನು? ದಲಿತ ಅನುಭವದ ನಮ್ಮ ಗ್ರಹಿಕೆಯನ್ನು ಕನ್ನಡದ ಪ್ರಭಾವಶಾಲಿ ಸಾಂಸ್ಕೃತಿಕ ಪಠ್ಯವಾದ 'ಕುಸುಮಬಾಲೆ' ಪ್ರಭಾವಿಸುವ ರೀತಿ ಎಂಥದು?

೧. ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಪುಟ. ೩೭೪

ಅಧ್ಯಾಯ ಏಳು

ಉಪಸಂಹಾರ

ಚೋಮನದುಡಿ ಕಾದಂಬರಿಯಲ್ಲಿ 'ಶೋಷಣೆ' ಎದ್ದು ಕಾಣುವುದಿಲ್ಲ. ಆದರೆ ಅದು ನಿರಂತರವಾಗಿ ಬಹಳ ಸೂಕ್ಷ್ಮವಾಗಿ ನಮಗೆ ಗೊತ್ತಿಲ್ಲದ ಹಾಗೆ ನಡೆಯುತ್ತ ಹೋಗುವ ರೀತಿ ಚಿತ್ರಿತವಾಗಿದೆ. ಈ ಶೋಷಣೆಯ ಮೂರು ಮುಖಗಳನ್ನು ಮಿಂಗೇಲ, ಮನ್ವೇಲ ಮತ್ತು ಸಂಕಪ್ಪಯ್ಯ ಪಾತ್ರಗಳಲ್ಲಿ ಕಾಣಬಹುದು. ಸ್ವಾರಸ್ಯವೆಂದರೆ ಈ ಮೂರು ಪಾತ್ರಗಳ ಹಿಂದಿರುವ ಜೀವನವನ್ನು ಕಾದಂಬರಿ ಅಭಿವ್ಯಕ್ತಿಸುವುದಿಲ್ಲ. ಸಂಕಪ್ಪಯ್ಯ ಮತ್ತು ಅವನ ತಾಯಿ ಪಾತ್ರದ ಬಗ್ಗೆ ಸಂಕ್ಷಿಪ್ತ ವಿವರಣೆ ಬರುತ್ತದೆಯೇ ಹೊರತು, ಅವರ ಒಟ್ಟಾರೆ ಜೀವನ ಮತ್ತು ವೈಯಕ್ತಿಕ ವಿವರಗಳನ್ನು ಲೇಖಕರು ಕೊಡುವುದಿಲ್ಲ. ಹಾಗೆಯೇ ಮನ್ವೇಲನ ಸಂಪೂರ್ಣ ವಿವರಗಳು ಕಂಡುಬರುವುದಿಲ್ಲ. ಇದು ಕಾದಂಬರಿಯಲ್ಲಿ ಅಗತ್ಯವಿಲ್ಲ. ಏಕೆಂದರೆ ಇದು ಚೋಮನಿಗೆ ಸಂಬಂಧಪಟ್ಟ ಕಥೆ ಅಥವಾ ಆತನ ಕುಟುಂಬದ ವ್ಯಥೆ ಹೇಳುವುದು ಲೇಖಕನ ಉದ್ದೇಶವಾಗಿರುತ್ತದೆ. ಆದ್ದರಿಂದ ಬೇರೆ ಪಾತ್ರಗಳ ವೈಯಕ್ತಿಕ ವಿವರಗಳನ್ನು ಪರಿಶೀಲನೆ ಮಾಡುವುದಕ್ಕೆ ಕಾರಂತರು ಹೋಗುವುದಿಲ್ಲ. ಈ ಹಿನ್ನೆಲೆಯಲ್ಲಿ ಶೋಷಣೆಯನ್ನು ಬಹಳ ಸೂಕ್ಷ್ಮವಾಗಿ ಕೊಟ್ಟು ಅಲ್ಲಿಂದ ಮುಂದೆ ಹೋಗುತ್ತಾರೆ. ಸಮಾಜದಲ್ಲಿ ಕೂಡ ಕೆದಕಿದಾಗ ಅಲ್ಲಿನ ಶೋಷಣೆಯ ವಿವರಗಳು ಕಾಣುತ್ತವೆ ಹೊರತು, ಅವು ತಮಗೆ ತಾವೇ ಗೋಚರವಾಗುವುದಿಲ್ಲ. ಕಾದಂಬರಿಯಲ್ಲಿ ಸಂಕಪ್ಪಯ್ಯ ಸಹ ಚೋಮನನ್ನು ಶೋಷಣೆ ಮಾಡುತ್ತಿದ್ದಾನೆ ಎಂದು ನಮಗೆ ಅನ್ನಿಸುವುದಿಲ್ಲ. ಚೋಮನಿಗೆ ಭೂಮಿ ಕೊಡುವ ವಿಷಯದಲ್ಲಿ ತನ್ನ ಜವಾಬ್ದಾರಿಯನ್ನು ತನ್ನ ತಾಯಿ ಮೇಲೆ ಹಾಕಿ ನೆಮ್ಮದಿಯಿಂದ ಇರುತ್ತಾನೆ. ಆದ್ದರಿಂದಲೇ ಚೋಮ ಕೆಲಸಮಾಡದಿದ್ದರೂ ಅವನ ಕೂಲಿಯನ್ನು ತೆಗೆದುಕೊಂಡು ಹೋಗಲು ಬೆಳ್ಳಿಗೆ ಹೇಳುತ್ತಾನೆ. ಇದು ಸಂಕಪ್ಪಯನ ಔದಾರ್ಯವನ್ನು ತೋರಿಸುತ್ತದೆ.

ಕಾದಂಬರಿಯಲ್ಲಿ ಬರುವ ಚೋಮನ ಮೌಢ್ಯವನ್ನು ಮುಖ್ಯವಾಗಿ ಗಮನಿಸಬೇಕು. ಚೋಮ ತನ್ನ ಸ್ವತಂತ್ರ ಜೀವನದ ಬಗ್ಗೆ ಹೇಳುತ್ತನಾದರೂ ಅದನ್ನು ಸರಿಪಡಿಸಿಕೊಳ್ಳುವುದಿಲ್ಲ. ಕುಡಿಯುವುದನ್ನು ನಿಲ್ಲಿಸಿದರೆ ತಾನು ಆರ್ಥಿಕವಾಗಿ ಪ್ರಬಲವಾಗುತ್ತೀನಿ ಎಂದು ಹೇಳುತ್ತನಾದರೂ, ಕುಡಿಯುವುದನ್ನು ಮಾತ್ರ ಬಿಡುವುದಿಲ್ಲ. ಆದ್ದರಿಂದ ಹೊರಗಿನ ಒತ್ತಡದ ಜೊತೆಗೆ ಆಂತರಿಕ ಒತ್ತಡಗಳು ಬೆಳೆಯಬೇಕಾಗುತ್ತವೆ. ಚೋಮ ತನ್ನ ನೋವನ್ನು ಮರೆಯಲಿಕ್ಕೆ ಈ ರೀತಿ ಕುಡಿದಿದ್ದಾನೆ ಎಂದು ಹೇಳುವುದು ಸರಿಯಲ್ಲ. ಕುಡಿತ ಎನ್ನುವುದು ಹತಾಶಗೊಂಡ ಭಾವನೆಗಳ ಬಿಡುಗಡೆಗಾಗಿ ಮಾತ್ರ

[illegible]

[illegible]

[illegible]

[illegible]

[illegible]

ಅಲ್ಲ; ಅದು ಒಂದು ದುಶ್ಚಟ ಕೂಡ. ಹಾಗಾದರೆ ಸಂಕಪ್ಪಯ್ಯನಂಥವರು ಯಾಕೆ ಕುಡಿಯುವುದಿಲ್ಲ? ಈ ಹಿನ್ನೆಲೆಯಲ್ಲಿ ಚೋಮ ತಾನು ಯಾಕೆ ಕುಡಿಯಬೇಕು? ಎಂದು ಪ್ರಶ್ನೆ ಮಾಡಿಕೊಳ್ಳುತ್ತ ಅದರಿಂದ ದೂರವಾಗಲು ಪ್ರಯತ್ನಿಸಬೇಕು. ಇದಕ್ಕೆ ಆತಂಕ ಒತ್ತಡಗಳು ಬೆಳೆಯಬೇಕಾಗುತ್ತವೆ. ಇದು ಸಮುದಾಯ ಶೋಭೆಗೆ ಅಗತ್ಯ ಕೂಡ. ಈ ರೀತಿ ಬದಲಾವಣೆ ಆದಾಗ ಹೆಚ್ಚು ಅನುಕೂಲತೆಗಳನ್ನು ಪಡೆದುಕೊಳ್ಳಲು, ಮತ್ತು ವ್ಯವಸ್ಥೆಗೆ ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆಂತರಿಕವಾಗಿ ಕುಗ್ಗಿ ಕುಗ್ಗಿ ಕರಗಿಹೋಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಚೋಮನ ಕುಡಿತದ ದುಶ್ಚಟ ಆತನನ್ನು ಹೆಚ್ಚು ತೊಂದರೆಗೆ ಒಳಗುಮಾಡಿದೆ. ಅವನ ಸಂಪಾದನೆಯನ್ನೆಲ್ಲ ಉಳಿಸಿದ್ದರೆ ಕುಟುಂಬ ಎಷ್ಟು ಅಭಿವೃದ್ಧಿಯಾಗುತ್ತಿತ್ತು. ಪ್ರತಿಯೊಬ್ಬ ವ್ಯಕ್ತಿಯೂ ಆಂತರಿಕ ಬದಲಾವಣೆಯನ್ನು ಸೃಷ್ಟಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿರುತ್ತವೆ.

ಇದು ಅಕ್ಷರಸ್ಥ ಅನಕ್ಷರಸ್ಥ ಎನ್ನುವುದಲ್ಲ. ಎಲ್ಲರೂ ಪಾಲಿಸಬೇಕಾಗುತ್ತದೆ. ನಮ್ಮ ಮುಂದೆ ಒಳ್ಳೆಯ ಮತ್ತು ಕೆಟ್ಟ ಬದುಕುಗಳೆರಡೂ ಇರುತ್ತವೆ. ಇವುಗಳನ್ನು ಅಯ್ಕೆ ಮಾಡಿಕೊಳ್ಳುವುದು ನಮಗೆ ಸಂಬಂಧಪಟ್ಟದ್ದಾಗಿರುತ್ತದೆ. ಇದರಲ್ಲಿ ಜಾತಿ, ವರ್ಗಗಳ ಭೇದವಿರುವುದಿಲ್ಲ. ಕಷ್ಟ ಬಂದಾಗ ಪ್ರತಿವ್ಯಕ್ತಿಯೂ ತನ್ನ ಬಲವನ್ನು ಹೆಚ್ಚು ಮಾಡಿಕೊಳ್ಳಬೇಕು. ಇದು ಪ್ರಗತಿಗೆ ಹೆಚ್ಚು ಸಹಾಯಮಾಡುತ್ತದೆ.

ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು ಒಂದು ಸಮುದಾಯ ಜೀವನದಲ್ಲಿ ಎಷ್ಟರಮಟ್ಟಿಗೆ ಇವೆ ಎಂಬುದನ್ನು ಒಬ್ಬ ದಲಿತೇತರ ಲೇಖಕ ಸಿದ್ದತೆ ಮಾಡಿಕೊಳ್ಳದಿದ್ದರೆ ಬರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಾಯಶಃ ಕನ್ನಡ ಸಾಹಿತ್ಯದಲ್ಲಿ ಕಾರಂತರು ಹಳ್ಳಿಹಳ್ಳಿಗೆ ಹೋಗಿ ಅವರ ಜೀವನಕ್ರಮವನ್ನು, ಭಾಷೆಯನ್ನು ಅಧ್ಯಯನಮಾಡಿ ಬರೆದಿದ್ದಾರೆ.

ಈ ಕಾದಂಬರಿ ಸರಳ ಕಥಾ ನಿರೂಪಣೆಯಿಂದ ಕೂಡಿದೆ. ಸುಲಭವಾಗಿ ಓದಿಸಿಕೊಳ್ಳುತ್ತದೆ. ಹಾಗೆಯೇ ತನಗೆ ತಾನೆ ಈ ಕೃತಿ ಸಂಕೀರ್ಣವಾಗಿದೆ. ಕಾರಂತರು ಎಲ್ಲೂ ಈ ಕೃತಿಯನ್ನು ಸಂಕೀರ್ಣಮಾಡಲು ಹೋಗಿಲ್ಲ. ಚೋಮನ ಜೀವನವೇ ಹೆಚ್ಚು ಸಂಕೀರ್ಣವಾಗಿರುವುದರಿಂದ ಕೃತಿಯಲ್ಲಿ ಸಂಕೀರ್ಣತೆಯನ್ನು ತರಬೇಕಾದ ಅವಶ್ಯಕತೆ ಇಲ್ಲ.

ಆದ್ದರಿಂದ ಕಾರಂತರು ತಂತ್ರಕ್ಕಾಗಿ ತಂತ್ರವನ್ನು ಕಾದಂಬರಿಯಲ್ಲಿ ಎಲ್ಲೂ ಬಳಸಿಲ್ಲ. ಈ ಹಿನ್ನೆಲೆಯಲ್ಲಿ ನೇರ ಕಥಾಮಾರ್ಗ ಬಹಳ ಮುಖ್ಯವಾದದ್ದು. ನವ್ಯದವರು ಕೃತಿಯಲ್ಲಿ ಹೆಚ್ಚು ಸಂಕೀರ್ಣತೆಯನ್ನು ತಂದಿದ್ದರಿಂದ ಓದುವವರ್ಗವನ್ನೇ ಕಡಿಮೆ ಮಾಡಿದರು. ಹಾಗೆಯೇ ನವ್ಯದವರು ಹೆಚ್ಚು ಬರೆದದ್ದೆಲ್ಲ ವಿಮರ್ಶೆಗಾಗಿಯೇ. ಏಕೆಂದರೆ ಅವರ ಸಾಹಿತ್ಯ ಮತ್ತು ಅದರ ವಿಮರ್ಶೆ ಜೊತೆಜೊತೆಯಲ್ಲಿ ಪ್ರಕಟವಾಗುತ್ತಿದ್ದವು. ನಿಜವಾಗಿ

'ಚೋಮನದುಡಿ' ಒಂದು ಭಾವಗೀತೆ. ಒಂದು ಭಾವಗೀತೆ ಏನು ಪರಿಣಾಮ ಉಂಟುಮಾಡುತ್ತವೆಯೋ ಅದೇ ಪರಿಣಾಮವನ್ನು ಈ ಕಾದಂಬರಿ ಉಂಟುಮಾಡುತ್ತದೆ. ಮೇಲ್ನೋಟಕ್ಕೆ ಕಥೆ ಸರಳವಾಗಿ ಕಂಡರೂ, ಮಧ್ಯೆ ಮಧ್ಯೆ ಕಾರಂತರು ವ್ಯಂಗ್ಯಾತ್ಮಕ ಬರವಣಿಗೆಯನ್ನು ತರುತ್ತಾರೆ. ಇದರ ಅರ್ಥ ಆ ವಸ್ತು ಅದು ಅಲ್ಲ ಎನ್ನುವುದಕ್ಕೆ ಈ ರೀತಿ ವ್ಯಂಗ್ಯಾತ್ಮಕ ಬರವಣಿಗೆ ಬಳಸುತ್ತಾರೆ.

ಈ ಹಳ್ಳಿಯ ಜೀವನ ಭೋಗನ ಹಳ್ಳಿಯದು. ಇದು ತುಂಬ ವ್ಯಂಗ್ಯವಾದದ್ದು. 'ಭೋಗನಹಳ್ಳಿ' ಎಂಬ ಪದವೇ ಅದಕ್ಕೆ ವಿರುದ್ಧವಾಗಿ ಕೆಲಸಮಾಡುತ್ತದೆ. ಈ ವ್ಯಂಗ್ಯಾತ್ಮಕ ಬರವಣಿಗೆ ನಮ್ಮನ್ನು ವ್ಯವಸ್ಥೆಗೆ ವಿರುದ್ಧವಾಗಿ ಸಿದ್ಧಮಾಡುತ್ತ ಹೋಗುತ್ತದೆ. ಇದು ಬಹಳ ಮುಖ್ಯವಾದದ್ದು. ಚೋಮನ ಮಗ ನೀಲ ನದಿಯಲ್ಲಿ ಮುಳುಗಿದಾಗ ಅಲ್ಲಿದ್ದ ಬ್ರಾಹ್ಮಣ ಯುವಕ ಎತ್ತಲು ಹೋಗುವಾಗ ಅವರ ಹಿರಿಯರು ತಡೆಯುತ್ತಾರೆ. ಆದರೂ ಆ ಯುವಕ ಅವರ ಮಾತನ್ನು ಮೀರಿ ನೀಲನನ್ನು ನದಿಯಿಂದ ಮೇಲೆತ್ತುತ್ತಾನೆ. ಈ ರೀತಿಯ ಘಟನೆ ಕುವೆಂಪು ಕಾವ್ಯದಲ್ಲಿ ಬರುತ್ತದೆ; "ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು" ಎಂದು ಕೇಳುತ್ತಾರೆ. ಹೀಗೆ ಆ ಕಾಲದ ಕವಿಗಳಲ್ಲಿ ಒಂದೇ ಭಾವನೆ ಇರುತ್ತದೆ ಇಂತಹ ಚಿಕ್ಕ ಕೃತಿಯಲ್ಲಿ ಇಷ್ಟೆಲ್ಲ ಚರ್ಚೆಮಾಡಲು ಅವಕಾಶವಿರುವುದನ್ನು ನೋಡಿದಾಗ ಅದರ ಶ್ರೇಷ್ಟತೆಯನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.[೧]

ದೇವನೂರು ಮಹಾದೇವ ಅವರ ಕುಸುಮಬಾಲೆಯನ್ನು ಸಮಗ್ರವಾಗಿ ಒಂದೊಟ್ಟಾಗಿ ನೋಡಿದರೆ ಕುಸುಮಬಾಲೆಯ ಕೆಲವು ವೈಶಿಷ್ಟ್ಯಗಳನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಈ ಕೃತಿಯಲ್ಲಿ ಹಲಕೆಲವು ದಲಿತೇತರ ಪಾತ್ರಗಳನ್ನು ನಾವು ಕಾಣುತ್ತೇವಾದರೂ ಅವು ಬರುವುದು ಬಹುಮಟ್ಟಿಗೆ ದಲಿತರೊಂದಿಗೆ ಅವರು ಪಡೆದಿರುವ ಸಂಬಂಧ ವೈಶಿಷ್ಟ್ಯಗಳಿಂದಾಗಿಯೇ ಹೊರತು, ಅವೇ ಇಲ್ಲಿನ ಪ್ರಮುಖಪಾತ್ರ-ಗಳಾಗಿರುವುದರಿಂದಲ್ಲ. ಈ ಮಾತಿಗೆ ಅಕ್ಕಮಾದೇವಮ್ಮ, ಯಾಡ ಮುಂತಾದವು ಹೊರತಾಗಿವೆಯಾದರೂ ಅವು ಸಹ ಇಲ್ಲಿ ಬರುವುದು ಚನ್ನನಿಂದ ಮಗುವನ್ನು ಪಡೆದಿರುವ ಕುಸುಮಳೊಂದಿಗೆ ಅವಕ್ಕೆ ಇರುವ ಸಂಬಂಧದಿಂದ ಮಾತ್ರ. ಇದರಿಂದಾಗಿಯೂ ನಾವು ಇಲ್ಲಿ ಪಡೆಯುವ ಒಂದೊಮ್ಮೆ ಸಾಮಾಜಿಕ ಚಿತ್ರಣಕ್ಕೆ ಬಾಧಕವಿಲ್ಲ.

ತೊರಾರ ಸಿಂಗಾರಮ್ಮ ಅವಳ ಜೋಪಡಿ, ಅದರ ಮುಂದೆ ಅವಳು "ಮಂಡಿಮ್ಯಾಲ ನರ್ದರಕ್ಯು ಇಳಿಬಿಟ್ಟು", ನರದಿಂದ ಮಾಡ್ದ ಅವುಳ ದೇಹಾವು", "ಆ ನಿಟ್ಟುಸಿರೂ" ಎಲ್ಲ ಕಣ್ಣಮುಂದೆ ಸುಳಿಯುತ್ತವೆ. ವಾಸ್ತವವನ್ನು ಮಾತಿನಲ್ಲಿ ದೃಶ್ಯವಾಗಿ

---

೧. ಷಷ್ಟಿ ಸಂಪದ, ಡಾ. ರಾಗೌ, ಪುಟ. ೧೭೭

ಮೂಡಿಸುವಷ್ಟಕ್ಕೆ ''ಮಾತುಗಳಿಗೆ ದೃಶ್ಯಾತ್ಮಕತೆ''ಯನ್ನು ನೀಡುವ ಅವರ ಸಾಮರ್ಥ್ಯ ಸೀಮಿತವಾಗಿಲ್ಲ; ತಮ್ಮ ಮನದಲ್ಲಿ ಕಲ್ಪನೆಯೊಂದನ್ನು ಮಾಡಿಸಿಕೊಂಡು ಆ ಕಲ್ಪನಾ ಚಿತ್ರವನ್ನು ಕೂಡ ಮಾತುಗಳಿಂದ ನಮ್ಮ ಮುಂದೆ ಮೂಡಿಸುತ್ತಾರೆ.

ಅಕ್ಕಮಾದೇವಮ್ಮ ಯಾಡರನ್ನು ಸಿದ್ದೂರ ಎಳತಂದು ಗೋಮಾಳಕ್ಕೆ ಎಸೆದ ಮೇಲೆ ಅವರ ಕಥೆ ''ಅಲ್ಲುಗ ಭೂಮಿ ತಾಯ ತನ್ನೆಡು ರೆಕ್ಕೆಗಳೂ ತೆಂಗಿನ ಗರಿಯ ರೂಪದಲ್ಲಿ ಬರುವಂತಾಗಲೂ ಅಕ್ಕ ಮಾದೇವಮ್ಮ ಯಾಡರು ಕೂತ ಜಾಗವೂ ಅಲ್ಲುಗ ನೆರಳಾಯ್ತು'' ಎಂಬಲ್ಲಿಗೆ ಬರುವವರೆಗೆ ಈ ಗುಣ ವಿಶೇಷವಾಗಿ ಎದ್ದುಕಾಣುತ್ತದೆ. ಈರಿಯ ಮಗನಿಗೆ ಮಾಡುವ ಶಾಸ್ತ್ರ, ಕೆಂಪಿಯ ಮಗುವನ್ನು ತೂರಮ್ಮ ರಕ್ಷಿಸುವುದು. ಹೀಗೆ ಒಂದು ಘಟನೆಯೊಂದಿಗೆ ಇನ್ನೊಂದು ಘಟನೆ ಸ್ಪರ್ಧೆಗೆ ನಿಂತು ನಮ್ಮ ಕಣ್ಣ ಮುಂದೆ 'ಟ್ಯಾಬ್ಲೋ'ಗಳಂತೆ ಒಂದರ ಹಿಂದೆ ಒಂದು ಮೆರವಣಿಗೆಯಲ್ಲಿ ಸಾಗುತ್ತವೆ.

ಇನ್ನೂ ಸೂಕ್ಷ್ಮವಾಗಿ ನೋಡಿದಾಗ ದಲಿತ ಬದುಕಿನ ನಿರಂತರ ಸಮಸ್ಯೆಗಳಿಗೆ ನಿರಂತರ ಉಪಾಯಗಳನ್ನು ತಮ್ಮ ಅದಮ್ಯ ಚೈತನ್ಯದಿಂದ ದಲಿತ ಪಾತ್ರಗಳು ಆಗ ರೂಢಿಸಿಕೊಂಡಿರುವುದರಿಂದ ಆ ಸಮಸ್ಯೆಗಳಿಗೆ ಸೈದ್ಧಾಂತಿಕ ಪರಿಹಾರಗಳನ್ನು ಹುಡುಕುತ್ತಿರುವವರು ಈ ಬದುಕಿನ ಆಚೆಗೆ ಉಳಿದುಕೊಂಡಿದ್ದಾರೆಯೆ ಎನ್ನುವ ಗುಮಾನಿ ಬರುವಂತಾಗುತ್ತದೆ.

ಸಂಪ್ರದಾಯದಲ್ಲಿ ಬೆರೆತುಹೋದ ಅಜ್ಜಿಯರ ಪಾತ್ರಗಳಲ್ಲಿರುವ ದಟ್ಟತೆಯನ್ನು ಶಿಕ್ಷಿತ ಪಾತ್ರಗಳಲ್ಲಿ ತರಲಾರದ ಕಾರಂತರಂತೆ, ಅದ್ಭುತ ಜೀವಂತಿಕೆಯ ಕೆಳವರ್ಗದ ಪಾತ್ರಗಳ ಮಧ್ಯೆ ಹೂವಯ್ಯನಂಥ ಪರಕೀಯವನ್ನು ಸೃಷ್ಟಿಸುವ ಕುವೆಂಪು ಅವರಂತೆ ಮಹಾದೇವರು ಇಲ್ಲಿಯವರೆಗೆ ಜೀವಂತವಾದ ಶಿಕ್ಷಿತ ಪಾತ್ರವೊಂದನ್ನು ಸೃಷ್ಟಿಸಲಾಗದ್ದೇಕೆ? ಅಶಿಕ್ಷಿತ ಪಾತ್ರಗಳನ್ನು ಸೃಷ್ಟಿಸುವಾಗ ದಟ್ಟವಾದ ಬದುಕಿನ ನೇಯ್ಗೆಯ ಬೆಂಬಲವಿರುವ ನಮ್ಮ ಬರಹಗಾರರಿಗೆ ಶಿಕ್ಷಿತ ಪಾತ್ರಗಳನ್ನು ಸೃಷ್ಟಿಸಲು ಬೇಕಾದಂಥ Poetry of manners ಇನ್ನೂ ದೊರೆತಿಲ್ಲವೆ?

ಭಾಷೆ ಮತ್ತು ಶೈಲಿಯ ಪ್ರಯೋಗಶೀಲತೆಯ ದೃಷ್ಟಿಯಿಂದ ''ಕುಸುಮಬಾಲೆ'' ಅತ್ಯಂತ ಕುತೂಹಲಕಾರಿಯಾಗಿದೆ. ಒಂದು ಪ್ರದೇಶದ ಮತ್ತು ಒಂದು ಜನಾಂಗದ ಮಾತಿನ ಎಲ್ಲ ಸಾಧ್ಯತೆಗಳನ್ನು ಮಹಾದೇವರು ಈ ಕೃತಿಯಲ್ಲಿ ದುಡಿಸಿಕೊಂಡಿದ್ದಾರೆ. ಬದುಕಿನ ಅದಮ್ಯ ಚೈತನ್ಯದ ಬಗೆಗಿರುವ ಅವರ ಪ್ರೀತಿ ಮತ್ತು ಕುತೂಹಲ ಭಾಷೆಯ ಅದಮ್ಯ ಸತ್ಯಶೀಲತೆಯನ್ನು ಆವರಿಸಿಕೊಂಡಿವೆ. ಆಡುಮಾತಿನ ಲಯಗಳು, ರಚನೆಗಳು, ನುಡಿಗಟ್ಟುಗಳು ಜೆಸ್ಚರ್‌ಗಳು (gestures) ಇವೆಲ್ಲವುಗಳನ್ನು ಒಬ್ಬ ಶ್ರೇಷ್ಠ ಬರಹಗಾರನ ಸ್ವಚ್ಛಂದ ಕ್ರಿಯಾಶೀಲತೆಯಿಂದ ಮಹಾದೇವರು ಬಳಸಿಕೊಂಡಿದ್ದಾರೆ.

"ಕುಸುಮಬಾಲೆ"ಯ ನಿರೂಪಣೆ ಜಾನಪದ ಶೈಲಿಗೆ ಹತ್ತಿರವಾಗಿದೆ. ಕೆಲವೊಂದು ಭಾಗಗಳು ನೇರವಾಗಿಯೆ ಜಾನಪದ ಕತೆ ಮತ್ತು ಕಾವ್ಯದ ಲಯಗಳನ್ನು ಅನುಕರಿಸುತ್ತವೆ. ಈ ನಿರೂಪಣೆಗೆ ಅನುಗುಣವಾಗಿ ಕಾದಂಬರಿಯ ಬಂಧ ಸಡಿಲವಾದ ಎಪಿಸೋಡಿಕ್ ಮಾದರಿಯಾಗಿದೆ. ಮೂಲತಃ Visual ಆಗಿರುವ ಅಕ್ಷರ ಮಾಧ್ಯಮದ ಹಿನ್ನೆಲೆಯಿರುವ ಯೂರೋಪಿನ ಸಂಪ್ರದಾಯಗಳಲ್ಲಿ ಅಚ್ಚುಕಟ್ಟಾದ ಶಿಲ್ಪ ಹಾಗೂ ಬಂಧಗಳು ಸಹಜವಾಗಿದ್ದರೆ ವಾಕ್ ಪರಂಪರೆಗೆ ಹತ್ತಿರವಾಗಿರುವ ನಮ್ಮ ಸಂಪ್ರದಾಯಕ್ಕೆ ಸಡಿಲ ಬಂಧ ಸಹಜವಾಗಿದೆ. ಕುಸುಮಬಾಲೆ ಕೃತಿಯಲ್ಲಿ ಮಹಾದೇವರು ಈ ಬಂಧದ ಸಾಧ್ಯತೆಗಳನ್ನು ಶೋಧಿಸಿದ್ದಾರೆ. ಘಟನೆಗಳು ಮತ್ತು ಪಾತ್ರಗಳು ಮೋಟಿಫ್‌ಗಳಾಗಿವೆ ಎನ್ನುವುದನ್ನು ಗಮನಿಸದಿದ್ದರೆ ಕೃತಿಯ ಅರ್ಥವೆ ದಕ್ಕುವುದಿಲ್ಲ. ಯಾಡ – ಅಕ್ಕಮಾದೇವಮ್ಮ, ಕುಸುಮಿ – ಚೆನ್ನ – ತೂರಮ್ಮ – ಕೆಂಪಿ ಇವರ ಕತೆಗಳ ಮಧ್ಯ ನೇರವಾದ ಯಾವ ಸಂಬಂಧವೂ ಇಲ್ಲ. ಈ ಎಲ್ಲಾ ಎಳೆಗಳೂ ಒಟ್ಟಾರೆಯಾಗಿ ಕೃತಿಯ ಅರ್ಥವನ್ನು ಕೊಡುತ್ತವೆ.

"ಕುಸುಮಬಾಲೆ"ಯ ಭಾಷೆ ಎಲ್ಲಿಯೂ ವಾಹಕ ಮಾತ್ರವಾಗಿಲ್ಲ. ಕಾವ್ಯದಲ್ಲಿಯಂತೆ ಈ ಕೃತಿಯಲ್ಲಿಯೂ ಭಾಷೆ ತನ್ನ ಲಯ, ಧ್ವನಿ, ಅರ್ಥ ಇವೆಲ್ಲವುಗಳು ಸೇರಿದ ತನ್ನ ಇಡೀ ಶರೀರದೊಂದಿಗೆ ಪ್ರಕಟವಾಗುತ್ತದೆ. ಹಾಡು, ಭಾವಗೀತೆ, ದಂತಕತೆ, ಜೋಕು ಇವುಗಳಲ್ಲಿ ಬಳಕೆಯಾಗುವ ಭಾಷಾಪ್ರಕಾರಗಳ ವೈವಿಧ್ಯತೆಯನ್ನು ಕೃತಿ ದುಡಿಸಿಕೊಳ್ಳುತ್ತದೆ. ಶ್ರೀಮಂತವಾದ ಹಲವು ಧ್ವನಿಗಳ ನಿರೂಪಣೆಯ ಶೈಲಿ ಕುತೂಹಲ ಹುಟ್ಟಿಸುತ್ತದೆ.

ಹಲವಾರು ಓದುಗರು ತಮ್ಮ ಮನಸ್ಸಿನಲ್ಲೆ ಕೃತಿಯನ್ನು ಪುನಃ ಸೃಷ್ಟಿಸಿಕೊಂಡು ಓದಿದಾಗ ಮಾತ್ರ ಕೃತಿ ನಿಜವಾಗಲೂ ಹುಟ್ಟುತ್ತದೆ. ಗಮನಸೆಳೆಯುವಂಥ ನಿರೂಪಣೆ ಹಾಗೂ ಭಾಷೆಯ ಪ್ರಯೋಗಶೀಲತೆಯಿಂದ "ಕುಸುಮಬಾಲೆ" ನಮ್ಮಲ್ಲಿ ಕುತೂಹಲ ಹುಟ್ಟಿಸುತ್ತದೆಯೋ ಅಥವಾ ಅದರಿಂದ ದಕ್ಕುವ ಅನುಭವ ಬೆಲೆಯುಳ್ಳದಾದ್ದರಿಂದ ಭಾಷೆ, ನಿರೂಪಣೆಗಳು ಮುಖ್ಯವೆನಿಸುತ್ತವೆಯೋ ಎನ್ನುವುದು ಈ ಕೃತಿಯ ಓದುಗರನ್ನು ಕೆಣಕುವ ಪ್ರಶ್ನೆಯಾಗಬಹುದು ಎಂದು ಮಾತ್ರ ಇಲ್ಲಿ ಸೂಚಿಸಬಹುದು.

ಗ್ರಂಥಋಣ

೧. ಅಂಗಳದೊಳಗಿನ ಕಡಲು – ಡಾ. ಬಿ.ಎಸ್.ಸುಮಿತ್ರಾಬಾಯಿ, ೧೯೯೭, ಕರ್ನಾಟಕ ಸಂಘ, ಪುತ್ತೂರು (ದಕ್ಷಿಣ ಕನ್ನಡ).

೨. ಅಮೂರ್ತತೆ ಮತ್ತು ಪರಿಸರ – ರಾಜೇಂದ್ರ ಚನ್ನಿ, ೨೦೦೩, ಅಭಿನವ ಪ್ರಕಾಶನ, ಬೆಂಗಳೂರು.

೩. ಅಂತರ್ಗಂಗೆ – ಡಾ. ಕೆ.ಎನ್.ಗಂಗಾನಾಯಕ, ೨೦೦೩, ಬೂದಗುಪ್ಪೆ ಪ್ರಕಾಶನ, ಚಿಕ್ಕಮಂಗಳೂರು.

೪. ಉಲ್ಲೇಖ – ಕೆ.ವಿ.ತಿರುಮಲೇಶ್, ೨೦೦೭, ಅಭಿನವ ಪ್ರಕಾಶನ, ದೂರೇನಹಳ್ಳಿ, ವಿಜಯನಗರ, ಬೆಂಗಳೂರು.

೫. ಕತ್ತಿಯಂಚಿನ ದಾರಿ – ರಹಮತ್ ತರೀಕೆರೆ, ೨೦೦೬, ಅಭಿನವ ಪ್ರಕಾಶನ, ಬೆಂಗಳೂರು.

೬. ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಎನ್.ಕೆ.ಕೊದಂಡರಾಮ, ೧೯೯೬, ರಾಜೇಂದ್ರಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ಸ್, ಮೈಸೂರು.

೭. ಕನ್ನಡ ಕಥನ ಸಾಹಿತ್ಯ – ಕಾದಂಬರಿ, ಜಿ.ಎಸ್.ಅಮೂರ, ೧೯೯೪, ಶ್ರೀಹರಿ ಪ್ರಕಾಶನ, ಧಾರವಾಡ.

೮. ಕಾದಂಬರಿಗಳ ವಿಮರ್ಶೆ – ಡಾ. ಅರವಿಂದ ಮಾಲಗತ್ತಿ, ೨೦೦೦, ಪ್ರಸಾರಾಂಗ, ಮೈಸೂರು.

೯. ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ದೇವಯ್ಯ ಹರವೆ, ೧೯೯೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೦. ದಲಿತ ಬದುಕು ಮತ್ತು ಸಂಸ್ಕೃತಿ, ಡಾ. ಅರ್ಜುನ ಗೊಳಸಂಗಿ, ೧೯೯೪, ವಿಮೋಚನಾ ಪ್ರಕಾಶನ, ಅಥಣಿ.

೧೧. ದಲಿತ ಚಿಂತನೆ, ಮೊಗಳ್ಳಿ ಗಣೇಶ್, ೨೦೦೨, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೨. ದೇವನೂರ ಮಹಾದೇವ, ಎನ್.ಪಿ.ಶಂಕರ ನಾರಾಯಣರಾವ್, ೨೦೦೩, ಸಂ. ಡಾ. ಪ್ರಧಾನ್ ಗುರುದತ್ತ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೧೩. ದೇವನೂರು ಮಹಾದೇವ ಸಾಹಿತ್ಯದ ಒಳನೋಟ – ಡಾ. ಸಿ.ಪಿ.ಸಿದ್ಧಾಶ್ರಮ, ೨೦೦೭, ವಿಜಯಲಕ್ಷ್ಮೀ ಪ್ರಕಾಶನ, ಕುವೆಂಪುನಗರ, ಮೈಸೂರು.

೧೪. ನಡು ಹಗಲಿನಲ್ಲಿ ಕಂದೀಲುಗಳು, ರಾಜೇಂದ್ರ ಚೆನ್ನಿ, ೨೦೦೪, ಲೋಹಿಯಾ ಪ್ರಕಾಶನ, ಮೈಸೂರು.

೧೫. ಯಾರ ಜಪ್ತಿಗೂ ಸಿಗದ ನವಿಲುಗಳು – ಪಿ.ಚಂದ್ರಿಕ, ೧೯೯೯, ಅಭಿನವ ಪ್ರಕಾಶನ, ಬೆಂಗಳೂರು.

೧೬. ಸಂಕ್ರಮಣ – ಚಂಪಾ, ೧೯೯೧, ಸಂಕ್ರಮಣ ಪ್ರಕಾಶನ, ಧಾರವಾಡ.

೧೭. ಸಮಗ್ರ ಕೃತಿಗಳು, ದೇವನೂರ ಮಹಾದೇವ, ೧೯೯೨, ಅಭಿರುಚಿ ಪ್ರಕಾಶನ, ಮೈಸೂರು.

****